५.१

CC0. In Public Domain, Digitizagtion by eGangotri

ಚಿಕದೇವರಾಯ ಸಪ್ತಪದಿ

ಎಚ್. ಎಸ್. ಹರಿಶಂಕರ್, ಎಂ.ಎ.



ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಮೈಸೂರು-4

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

ಕನ್ನಡ ಕವಿಕಾವ್ಯಮಾಲೆ

ಚಿಕದೇವರಾಯ ಸಪ್ತಪದಿ

ಎಚ್. ಎಸ್. ಹರಿಶಂಕರ್, ಎಂ.ಎ.

ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಮೈಸೂರು-4

Dr. Urmila Sharma Collection, Varanasi

CC0. In Public Domain, Digitizagtion by eGangotri

ಈ ಮಾಲೆಯ ಸಂಪಾದಕರು ಮತ್ತು ಪ್ರಕಾಶಕರು

H. M. SHANKAR NARAYAN RAO, M.A.
Professor and Head of Department of Kannada
Sarada vilas College, Mysore

ಮೊದಲ ಮುದ್ರಣ, ಡಿಸೆಂಬರ್ ೧೯೬೭

© ಎಚ್. ಎಸ್. ಹರಿಶಂಕರ್

ಬೆಲೆ: ಸಾದಾ ಪ್ರತಿ ರೂ. 3.75
ಕ್ಯಾಲಿಕೊ ಪ್ರತಿ ರೂ. 5.50

ಮುದ್ರಕರು
ವೆಸ್ಲಿ ಪ್ರೆಸ್, ಮೈಸೂರು

Dr. Urmila Sharma Collection, Varanasi

CC0. In Public Domain, Digitizagtion by eGangotri

ಪೀಠಿಕೆ

'ಚಿಕದೇವರಾಯ ಸಪ್ತಪದಿ' ಎನ್ನುವುದು ಹೆಸರೇ ಸೂಚಿಸುವಂತೆ ಏಳು ಭಾಗಗಳನ್ನೊಳಗೊಂಡ ಹಾಡುಗಳ ಗ್ರಂಥ. ಈ ಗ್ರಂಥದ ಕರ್ತೃ ಯಾರೋ ತಿಳಿಯದು. ಕವಿಚರಿತೆಕಾರರಾಗಲಿ ಅಥವಾ ಇತರ ಸಾಹಿತ್ಯ ಚರಿತ್ರಕಾರ ರಾಗಲೀ ಇದರಬಗ್ಗೆ ಏನನ್ನೂ ಹೇಳಿಲ್ಲ. ಮೈಸೂರು ಪ್ರಾಚ್ಯವಿದ್ಯಾಸಂಶೋಧ ನಾಲಯದವರು ಪ್ರಕಟಿಸಿರುವ 'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ' ಯಲ್ಲಿ ಇದರ ಕರ್ತೃ ಚಿಕ್ಕದೇವರಾಜನೆಂದಿದ್ದು ಇದು ರಚಿತವಾದ ಕಾಲ ಕ್ರಿ.ಶ. ೧೬೭೦ ಎಂದಿದೆ.[1] ಆದರೆ ಗ್ರಂಥದ ಯಾವ ಭಾಗದಲ್ಲೂ ಚಿಕ್ಕದೇವರಾಜನು ಇದರ ಕರ್ತೃವೆಂಬುದಕ್ಕೆ ಪ್ರಮಾಣ ದೊರೆಯುವುದಿಲ್ಲ. ಬಹುಶಃ 'ವರ್ಣ ನಾತ್ಮಕ ಸೂಚೀ'ಯ ಸಂಪಾದಕರು ಈ ಗ್ರಂಥದಲ್ಲಿ ಬರುವ ಚಿಕ್ಕದೇವರಾಜನ ವರ್ಣನೆ, ದಿಗ್ವಿಜಯ ಮತ್ತು ಗ್ರಂಥಕ್ಕೆ ಕೊಟ್ಟ ಹೆಸರಿನಿಂದ ಈ ಗ್ರಂಥದ ಕರ್ತೃ ಚಿಕ್ಕದೇವರಾಜನೆಂಬ ನಿರ್ಧಾರಕ್ಕೆ ಬಂದಿರುವಂತೆ ತೋರುತ್ತದೆ. ಚಿಕ್ಕದೇವರಾಜನನ್ನು ಈ ಗ್ರಂಥದಲ್ಲಿ ವರ್ಣಿಸಿರುವುದರಿಂದ ಮಾತ್ರವೇ ಈ ಗ್ರಂಥ ಅವನಿಂದ ರಚಿತವಾಯಿತು ಎಂದು ಹೇಳುವುದು ಅಷ್ಟು ಉಚಿತವಲ್ಲ ವೆಂದು ನಮ್ಮ ಅಭಿಪ್ರಾಯ. ಈ ಗ್ರಂಥವನ್ನು ಪರಿಶೀಲಿಸಿದರೆ ಇದನ್ನು ಚಿಕ್ಕದೇವರಾಜನ ಆಸ್ಥಾನಕವಿಗಳಲ್ಲಿ ಒಬ್ಬನಾದ ತಿರುಮಲಾರ್ಯನು ರಚಿಸಿರ ಬಹುದೆಂದು ಅಭಿಪ್ರಾಯಪಡಲು ಈ ಕಾರಣಗಳನ್ನು ಸೂಚಿಸಬಹುದು.

ಮೇಲಿನ ಸಪ್ತಪದಿಯ ಮಾದರಿಯಲ್ಲೇ ಬರೆದ ಈ ಕಾಲದ ಇನ್ನೊಂದು ಗ್ರಂಥ ಗೀತಗೋಪಾಲ. ಗೀತಗೋಪಾಲದಲ್ಲಿ ಹದಿನಾಲ್ಕು ಸಪ್ತಪದಿಗಳಿದ್ದು, ಏಳೇಳು ಸಪ್ತಪದಿಗಳಿಗೂ ಒಂದೊಂದು ವಿಭಾಗಮಾಡಿ, ಪೂರ್ವಭಾಗ ಮತ್ತು ಉತ್ತರಭಾಗ ಎಂದು ಹೆಸರಿಸಿದ್ದಾರೆ. ಇದರಲ್ಲಿ ಕನ್ನಡದ ಹಾಡುಗಳ ಜೊತೆಗೆ ಶಂಕರಾಭರಣ ರಾಗದಲ್ಲಿ ಬರೆದ ತೆಲುಗು ಹಾಡೊಂದು ಸಿಗುತ್ತದೆ.[2] ಇದೇ ರೀತಿ ಚಿಕದೇವರಾಯ ಸಪ್ತಪದಿಯಲ್ಲಿಯೂ ಐದು ತೆಲುಗು ಹಾಡುಗಳು ಇವೆ. ಇದರಿಂದ ಬಹುಶಃ ಗೀತಗೋಪಾಲವನ್ನು ರಚಿಸಿದ ಕವಿ ಮೇಲಿನ ಸಪ್ತಪದಿಯನ್ನೂ ರಚಿಸಿರಬಹುದೆಂಬ ಸಂದೇಹ ಮೂಡಿಬರುತ್ತದೆ. ಗೀತ ಗೋಪಾಲದ ಕರ್ತೃ ಚಿಕ್ಕದೇವರಾಜ ಒಡೆಯನೆಂದು ಆ ಗ್ರಂಥದ ಕೊನೆಯಲ್ಲಿ

---

1 ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ದ್ವಿತೀಯ ಸಂಪುಟ, ಪುಟ ೪.

2 ಗೀತಗೋಪಾಲ, ಪುಟ ೩೨.

Dr. Urmila Sharma Collection, Varanasi

CC0. In Public Domain, Digitizagtion by eGangotri

ಬರುವ ಆಶ್ವಾಸಾಂತ್ಯದ ಗದ್ಯದಿಂದ ತಿಳಿಯಬರುತ್ತದೆ. ಆದರೆ ಗೀತಗೋಪಾಲದಲ್ಲಿ 'ತಿರುಮಲೆಯಾರ್ಯರ ದಿವ್ಯಕೃತಿಯನಿದನಿರದೆ ಪಾಡುವೆನು '[1] ಎಂದು ಸ್ಪಷ್ಟವಾಗಿ ಹೇಳಿರುವುದರಿಂದ, ಆಶ್ವಾಸಾಂತ್ಯದಲ್ಲಿ ಗೀತಗೋಪಾಲದ ಕರ್ತೃ ಚಿಕ್ಕದೇವರಾಜನೆಂದಿದ್ದರೂ, ತಿರುಮಲಾರ್ಯನ ಕೈವಾಡ ಸಾಕಷ್ಟು ಇದೆ ಎನ್ನುವುದರಲ್ಲಿ ಹೆಚ್ಚು ಅರ್ಥವಿರುವಂತೆ ತೋರುತ್ತದೆ.[2] ಆದ್ದರಿಂದ ಗೀತಗೋಪಾಲವನ್ನು ತಿರುಮಲಾರ್ಯನು ರಚಿಸಿದನೆಂದು ಹೇಳುವುದು ಸತ್ಯಕ್ಕೆ ಹೆಚ್ಚು ಹತ್ತಿರವಾಗುತ್ತದೆ ಎಂದು ನಮ್ಮ ಅಭಿಪ್ರಾಯ. ಇದಕ್ಕೆ ಪ್ರಮಾಣವಾಗಿ ಇನ್ನೊಂದು ನಿದರ್ಶನವನ್ನು ಇಲ್ಲಿ ಕಾಣಿಸಬಹುದು. ತಿರುಮಲಾರ್ಯನಿಂದ ರಚಿತವಾಗಿರುವ 'ಚಿಕ್ಕದೇವರಾಜ ವಿಜಯ' ಮತ್ತು 'ಅಪ್ರತಿಮ ವೀರಚರಿತೆ'ಯಲ್ಲಿ ಬರುವ ಅನೇಕ ಪದ್ಯಗಳು, 'ಗೀತಗೋಪಾಲ'ದಲ್ಲಿ ಬಂದಿವೆ.[3] ತಿರುಮಲಾರ್ಯನು ಚಿಕ್ಕದೇವರಾಜವಿಜಯದ ಪದ್ಯಗಳನ್ನು ತನ್ನ "ಅಪ್ರತಿಮ ವೀರಚರಿತೆ"ಯಲ್ಲಿ ಬಳಸಿಕೊಂಡು ಚಿಕ್ಕದೇವರಾಜನ ಗುಣವರ್ಣನೆಯನ್ನು ಮಾಡಿರುವಂತೆ, "ಗೀತಗೋಪಾಲ"ದಲ್ಲೂ ತನ್ನ ಇತರ ಗ್ರಂಥಗಳಿಂದ—ಅಂದರೆ ಚಿಕ್ಕದೇವರಾಜವಿಜಯ ಮತ್ತು ಅಪ್ರತಿಮವೀರಚರಿತಗಳಿಂದ— ಪದ್ಯಗಳನ್ನು ಬಳಸಿಕೊಂಡು ತನ್ನ ದೊರೆಯಾದ ಚಿಕ್ಕದೇವರಾಜನನ್ನು ವರ್ಣಿಸಿ, ಇನ್ನುಳಿದ ಭಾಗಗಳಲ್ಲಿ ತನ್ನ ದೇವತೆಯೂ ಮತ್ತು ಗೀತಗೋಪಾಲದ ಕಥಾನಾಯಕನೂ ಆದ ಶ್ರೀಕೃಷ್ಣನನ್ನು ಸ್ತುತಿಸಿರುವುದನ್ನು, ಆತನ ಗುಣಗಾನವನ್ನು ಮಾಡುತ್ತ ಮೈಮರೆತಿರುವುದನ್ನು ಗಮನಿಸಿದರೆ, ಸ್ವತಃ ಶ್ರೀವೈಷ್ಣವ ಕವಿಯಾದ ತಿರುಮಲಾರ್ಯನ ಕವಿಹೃದಯದಿಂದಲೇ ಈ ಭಕ್ತಿಗೀತೆಗಳು ಹೊರಹೊಮ್ಮಿವೆ ಎಂಬ ಅಂಶ ಹೆಚ್ಚು ಸಾಧುವಾಗಿ ತೋರುತ್ತದೆ. ಅದೂ ಅಲ್ಲದೆ ಗೀತಗೋಪಾಲದಲ್ಲಿ ಶ್ರೀವೈಷ್ಣವ ಸಂಪ್ರದಾಯಕ್ಕನುಗುಣವಾಗಿ ಶ್ರೀ ರಾಮಾನುಜರು, ನಮ್ಮಾಳ್ವಾರರು, ವಿಷ್ವಕ್ಸೇನರು, ಶಡಗೋಪರು, ಪಶ್ಚಿಮ ರಂಗನಾಥಸ್ವಾಮಿ ಮತ್ತು ಶ್ರೀರಂಗನಾಯಕಿಯರ ಸ್ತುತಿಯಿದೆ.

---

[1] ಗೀತಗೋಪಾಲ, ಪುಟ ೩೨.

[2] ಡಾ. ಮುಗಳಿಯವರೂ ಮತ್ತು ಪ್ರೊ. ತೀ. ನಂ. ಶ್ರೀ. ಯವರೂ ಗೀತಗೋಪಾಲದ ಕರ್ತೃ ತಿರುಮಲಾರ್ಯನೆಂದೇ ನಿಶ್ಚೈಸಿದ್ದಾರೆ. ನೋಡಿ: ಕನ್ನಡ ಸಾಹಿತ್ಯ ಚರಿತ್ರೆ, ಪುಟ ೩೦೩ ; ಭಾರತೀಯ ಕಾವ್ಯಮೀಮಾಂಸೆ, ಪುಟ ೪೯೯.

[3] ಚಿಕ್ಕದೇವರಾಜ ವಿಜಯದ 5-71, 72, 101, 103, 105, 106 ಮೊದಲಾದ ಪದ್ಯಗಳೂ, ಅಪ್ರತಿಮ ವೀರ ಚರಿತೆಯ 1-14, 26, 28, 32, 39 ಮುಂತಾದ ಪದ್ಯಗಳೂ ಗೀತಗೋಪಾಲದಲ್ಲಿ ಕಾಣಬರುತ್ತವೆ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಶ್ರೀವೈಷ್ಣವ ಕವಿಯೇ ಮೇಲಿನ ಸ್ತುತಿಗಳನ್ನು ಭಕ್ತಿಪೂರ್ವಕವಾಗಿ ರಚಿಸಿರುವುದರಲ್ಲಿ ಸಹಜತೆ ಕಾಣಬರುತ್ತದೆ. ಹೀಗಾಗಿ ತಿರುಮಲಾರ್ಯನು "ಗೀತಗೋಪಾಲ"ದಲ್ಲಿ ಶ್ರೀ ಕೃಷ್ಣನನ್ನು ಕಥಾನಾಯಕನನ್ನಾಗಿ ವರ್ಣಿಸಿದರೆ, "ಚಿಕದೇವರಾಯ ಸಪ್ತಪದಿ"ಯಲ್ಲಿ ಚಿಕ್ಕದೇವರಾಜನನ್ನು ಕಥಾನಾಯಕನನ್ನಾಗಿ ವರ್ಣಿಸಿರುವುದನ್ನು ಕಾಣಬಹುದು. ಒಂದು ಕಾವ್ಯದಲ್ಲಿ ತನಗೆ ಅಧಿದೇವತೆಯಾದ ಶ್ರೀ ಕೃಷ್ಣ; ಇನ್ನೊಂದು ಕಾವ್ಯದಲ್ಲಿ ತನಗೆ ಪ್ರೀತಿಪಾತ್ರನಾದ ದೊರೆ. ಹೀಗೆ ಈ ಎರಡು ಸಪ್ತಪದಿಗಳಲ್ಲಿಯೂ ತಿರುಮಲಾರ್ಯನು ಒಂದೆಡೆ ಗೋಪಾಲನನ್ನೂ ಮತ್ತೊಂದೆಡೆ ಮಹೀಪಾಲನಾದ ಚಿಕ್ಕದೇವರಾಜನನ್ನೂ ಕುರಿತು ಎರಡು ಸಪ್ತಪದಿಗಳನ್ನು ರಚಿಸಿದನೆಂದು ಹೇಳುವಲ್ಲಿ ಹೆಚ್ಚು ಅರ್ಥ ಕಾಣಬರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಗ್ರಂಥದ ಕರ್ತೃ ಇಂತಹವನೇ ಎಂದು ಖಚಿತವಾಗಿ ಹೇಳಲು ಬರುವವರೆಗೂ ಈ ಗ್ರಂಥಗಳನ್ನು ತಿರುಮಲಾರ್ಯನು ರಚಿಸಿರಬಹುದೆಂದು ನಮ್ಮ ಅಭಿಪ್ರಾಯ.

ಪ್ರಕೃತ ಗ್ರಂಥವನ್ನು ಮೂರು ಪ್ರತಿಗಳ ಆಧಾರದಿಂದ ಸಂಪಾದಿಸಲಾಗಿದೆ. ಆ ಮೂರು ಪ್ರತಿಗಳೂ ಕಾಗದದ ಪ್ರತಿಗಳು. ಆ ಮೂರರಲ್ಲಿಯೂ ಪ್ರತಿ ಮಾಡಿದ ಕಾಲವನ್ನು ಕೊಟ್ಟಿಲ್ಲ. ಇದರಲ್ಲಿ ಎರಡು ಪ್ರತಿಗಳು ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸೇರಿದವುಗಳಾಗಿದ್ದು K.A. ೪೮ (ಕ) ಮತ್ತು K.B. ೬೭ (ಖ) ನೆಯ ಕ್ರಮಾಂಕಗಳನ್ನು ಹೊಂದಿವೆ. K.A. ೪೮ ನೆಯ ಪ್ರತಿ ಕಾಗದದ ದೊಡ್ಡಪ್ರತಿ. K.B. ೬೭ ನೆಯ ಪ್ರತಿ ಕಾಗದದ ಚಿಕ್ಕ ಪ್ರತಿ. ಎರಡರಲ್ಲಿಯೂ ಬರವಣಿಗೆ ಸ್ಫುಟವಾಗಿದ್ದು ಒಂದೆರಡು ಕಡೆ ಗ್ರಂಥಪಾತಗಳಾಗಿವೆ. ಇನ್ನೊಂದು ಪ್ರತಿ ಬೆಂಗಳೂರಿನ ನನ್ನ ಮಿತ್ರರಾದ ಶ್ರೀ ಆರ್. ಎಸ್. ಅನಂತರಾಜ್ ರಿಂದ ಎರವಲು ಪಡೆದ, ಜೀರ್ಣಿತವಾದ ಕಾಗದದ ಚಿಕ್ಕ ಪ್ರತಿ. ಅದನ್ನು (ಅ) ಎಂದು ಕರೆದಿದೆ. ಈ ಮೂರು ಪ್ರತಿಗಳೂ ಒಂದೇ ಮೂಲದಿಂದ ಬಂದವುಗಳು. ಈ ಗ್ರಂಥಸಂಪಾದನಾ ಕಾರ್ಯದಲ್ಲಿ ಬಹುಮುಖ್ಯವೆಂದು ತೋರಿದ ಪಾಠಾಂತರಗಳನ್ನು ಮಾತ್ರ ಕೊಟ್ಟಿದೆ. ಇವುಗಳಲ್ಲಿ ಅಕ್ಷರ ಸ್ಖಾಲಿತ್ಯಗಳೇ ಹೆಚ್ಚು. (ಖ) ಪ್ರತಿಯಲ್ಲಿ ಈ ಗ್ರಂಥದ ವಿಷಯಸೂಚಿಕೆಯಿದೆ. ಆದರೆ (ಅ) ಮತ್ತು (ಕ) ಪ್ರತಿಗಳಲ್ಲಿ ಇಲ್ಲ. ಚಿಕದೇವರಾಯ ಸಪ್ತಪದಿಯ ವಿಷಯಸೂಚಿಕೆಯನ್ನು (ಖ) ಪ್ರತಿಯಲ್ಲಿ ಹೀಗೆ ವಿಂಗಡಿಸಲಾಗಿದೆ.

(೧) ಬಿರುದಾವಳಿ ಸಪ್ತಪದಿ

(೨) ವಿರಹ ಸಪ್ತಪದಿ

Dr. Urmila Sharma Collection, Varanasi

CC0. In Public Domain, Digitizagtion by eGangotri

(೩) ವಿರಹಿಣಿಯರ ವಚನ ಪ್ರಕಾರ ಸಪ್ತಪದಿ
(೪) ಚಿಕದೇವ ಮಹಾರಾಯನ ವೃತ್ತಾಂತ ಸಪ್ತಪದಿ
(೫) ಶೃಂಗಾರ ಭಾವ ದಶಪದಿ
(೬) ಕಾಂತೆ ನಮ್ಮೊಗದೊಳ್ನುಡಿವ ಬಗೆಗಳ ಸಪ್ತಪದಿ, ಮತ್ತು
(೭) ಸ್ವಾಧೀನವಲ್ಲಭೆಯರ ವೃತ್ತಾಂತ ಸಪ್ತಪದಿ.

ಮೊದಲನೆಯ ಸಪ್ತಪದಿಯಲ್ಲಿ ಏಳು ಪದ (Songs) ಗಳಿವೆ. ಈ ಪದಗಳಲ್ಲಿ ಚಿಕ್ಕದೇವರಾಜನ ಗುಣವರ್ಣನೆ, ಆತನ ಸಾಹಸಕಾರ್ಯಗಳು, ದಿಗ್ವಿಜಯ ಗಳು ಇವೇ ಮೊದಲಾದ ವಿಷಯಗಳು ವರ್ಣಿತವಾಗಿವೆ.

ಮೊದಲ ಪದದಲ್ಲಿ ಇಷ್ಟದೇವತೆಯನ್ನು ಕಥಾನಾಯಕನಿಗೆ ಹೋಲಿಸಿ ಕವಿ ಹೇಳಿದ್ದಾನೆ. ಧರ್ಮಕಂಟಕರಾದ ಎಲ್ಲ ಭೂವರರನ್ನು ಸೋಲಿಸಿ ರಾಜ್ಯದ ಹಿರಿಮೆಯನ್ನು ಎತ್ತಿ ಹಿಡಿದ ಪುರುಷೋತ್ತಮನಾದ ಚಿಕ್ಕದೇವ ಭೂವರನಿಗೂ ಮತ್ತು ನಾರದಾದಿ ಸಕಲ ಮುನಿಶ್ರೇಷ್ಠರಿಗೂ, ಭೂಲೋಕದ ಜನರಿಗೂ ತನ್ನ ನಾದ ಸುಧೆಯಿಂದ ಲೋಕವನ್ನು ಸಂತಸಗೊಳಿಸಿದ ಮಹಾವಿಷ್ಣುವಿಗೂ ಮಂಗಲವನ್ನು ಕವಿ ಹಾಡಿದ್ದಾನೆ. ಎರಡನೆಯ ಪದದಲ್ಲಿ ನಾಯಕನ ಪರಾಕ್ರಮ ವರ್ಣಿತವಾಗಿದೆ. ಇಕ್ಕೇರಿಯ ಬಸವ, ಮಧುರೆಯ ದೊರೆಯನ್ನು ಸೋಲಿಸಿ ದುಷ್ಟ ಕುಲದವರನ್ನು ಸಂಹರಿಸಿ ಶಿಷ್ಟಜನಗಳನ್ನು ಸಂತೃಪ್ತಿಗೊಳಿಸಿದ್ದಷ್ಟೇ ಅಲ್ಲದೆ ಮರಾಠರ ಶಂಭುವಿನ ಸೊಕ್ಕನ್ನು ಚಿಕ್ಕದೇವೇಂದ್ರನು ಇಳಿಸಿದ ರೀತಿ ವರ್ಣಿತವಾಗಿದೆ. ಮೂರನೆಯ ಪದದಲ್ಲಿ ಈತನ ಓಲಗಶಾಲೆ ಮತ್ತು ಅವನ ವೈಭವವನ್ನು ನಾವು ಕಾಣಬಹುದು. ತನ್ನ ಸಾಮಂತರಿಗೆ ನೀಡುತ್ತಿದ್ದ ಅಭಯ, ನಂಬಿ ಅವನನ್ನು ಮರೆಹೊಕ್ಕ ಜನಗಳಿಗೆ ಅವನು ನೀಡುತ್ತಿದ್ದ ರಕ್ಷೆ ಮೊದಲಾದವುಗಳನ್ನು ಇಲ್ಲಿ ಕಾಣಬಹುದು. ನಾಲ್ಕನೆಯ ಪದದಲ್ಲಿ ಕನ್ನಡ ನಾಡಿನ ವರ್ಣನೆಯಿದೆ. ಕವಿ 'ರನ್ನ ತಿಲಕದಂತೆ ಒಪ್ಪುವ ಕನ್ನಡನಾಡು' ಎಂದು ವರ್ಣಿಸಿದ್ದಾನೆ. ಐದನೆಯ ಪದದಲ್ಲಿ ದೊರೆಯ ಪ್ರಜಾಪಾಲನ ಧರ್ಮ ಇನ್ನುಳಿದ ಯಾವ ಮಹಾಪುರುಷನಲ್ಲೂ ಕಾಣಬರುವುದಿಲ್ಲವೆಂದು ಕೊಂಡಾಡಿ ದ್ದಾನೆ. ಈ ಪದದಲ್ಲಿ ಗ್ರಂಥಪಾತವಿರುವುದರಿಂದ ಹೆಚ್ಚಿನ ವಿವರವು ತಿಳಿಯ ಬರುವುದಿಲ್ಲ. ಆರನೆಯ ಪದದಲ್ಲಿ ಐತಿಹಾಸಿಕ ಘಟನೆಗಳ ಪರಿಚಯವನ್ನು ಕವಿ ಮಾಡಿಕೊಟ್ಟಿದ್ದಾನೆ. ಚಿಕ್ಕದೇವೇಂದ್ರನು ತನ್ನ ಪರಾಕ್ರಮದಿಂದ ಅಕಾಲ ದಲ್ಲಿ ಬಂದು ಮೇಲೆ ಬಿದ್ದ ಯಶವಂತರಾಯನನ್ನು ಸದೆಬಡಿದು ಹಿಂದಕ್ಕಟ್ಟಿ ದನು. ಅಂತೆಯೇ ಎಲ್ಲ ನಾಡುಗಳನ್ನು ಜಯಿಸಿ ಗರ್ವದಿಂದಿದ್ದ ವಿಠ್ಠಲಬಾಲೆ ರಾಯನನ್ನೂ ಸಹ ಅಡಗಿಸಿದನು. ಜೇತಜಿ, ದಾದಜಿ, ಅದಿಲ್‌ಶಹ ಮೊದಲಾದ

Dr. Urmila Sharma Collection, Varanasi

CC0. In Public Domain, Digitizagtion by eGangotri

ವೈರಿಗಳಿಗೂ ಇದೇ ಗತಿಯಾಯಿತು. ಈತನ ಸೈನಿಕರು ಕುತುಪ್‌ಶಾಹನ ದಳದವರ ಮೇಲೆ ಬಿದ್ದು ಅವರ ಕುದುರೆ ಆನೆಗಳನ್ನು ಸೆರೆಹಿಡಿದು ಅವರಿಂದ ತುಮಕೂರು, ಚಿಕ್ಕನಾಯಕನ ಹಳ್ಳಿ, ತುರುಗೆರೆಗಳನ್ನು ವಶಪಡಿಸಿಕೊಂಡರು. ಕೆಳದಿ ಯವನರಿಗೂ ಮೈಸೂರಿನವರಿಗೂ ಬದ್ಧದ್ವೇಷವಿದ್ದುದರಿಂದ ಕೆಳದಿಯವರು ಒಡ್ಡಿದ್ದ ಜಾಲಕ್ಕೆ ಬೀಳದೆ ಅದನ್ನು ಭಂಗಪಡಿಸಿ ಅವರಿಂದ ಬೇಲೂರು ಮೊದಲಾದ ಪ್ರದೇಶಗಳನ್ನು ಕಿತ್ತುಕೊಂಡರು. ಕೋಟೆಗಳಲ್ಲೆಲ್ಲಾ ಅತ್ಯಂತ ಸುದೃಢವಾಗಿದ್ದ ಬೆಂಗಳೂರು ಕೋಟೆಯನ್ನು ಆಕ್ರಮಿಸಿಕೊಂಡರು. ಮಧುರೆಯವರ ದಳವನ್ನು ಮರ್ದಿಸಿ ಅವರಿಂದ ಎಂಟು ಸಾವಿರ ಕುದುರೆಯನ್ನೂ, ಒಂದು ಲಕ್ಷ ಕೂರಾಳ್ಗಳನ್ನೂ, ನೂರು ಮದಿಸಿದ ಆನೆಗಳನ್ನೂ ವಶಪಡಿಸಿಕೊಂಡು ಕೊಂಗುನಾಡನ್ನು ಸಾಧಿಸಿದರು. ಎಂಟುದಿಕ್ಕುಗಳಲ್ಲೂ ಹರಡಿದ್ದ ಶತ್ರುಗಳನ್ನು ಹೀಗೆ ಪರಾಭವಗೊಳಿಸಿ ಅವರ ನಾಡುಗಳನ್ನು ವಶಪಡಿಸಿಕೊಂಡರು. ಏಳನೆಯ ಪದದಲ್ಲಿ ಚಿಕ್ಕದೇವರಾಜನ ದಿಗ್ವಿಜಯಗಳನ್ನು ತಿಳಿಸುವನೆವದಿಂದ, ಶತ್ರುರಾಜರ ಹಿತೈಷಿಗಳು ತಮ್ಮ ದೊರೆಗೆ ಈತನ ಪರಾಕ್ರಮಗಳನ್ನು ವಿವರಿಸುವ ರೀತಿಯಲ್ಲಿ ಕವಿ ಇದನ್ನು ಹೇಳಿದ್ದಾನೆ. 'ಅದೆ ಬಂದನಿದೆ ಬಂದನೆಂತೆಂಬರ ಗಂಡ, ಪದಪದ್ಮಕೆರಗಿ ಬಾಳಿರೋ ಬದುಕಿರೋ' ಎಂದು ಶತ್ರುಪಕ್ಷದವರು ತಮ್ಮ ಅರಸರಿಗೆ ಹೇಳುವಲ್ಲಿ ಈತನ ಪರಾಕ್ರಮ ಅರಿವಾಗುತ್ತದೆ. ಮುಂದೆ ಕವಿಯು ಚಿಕ್ಕದೇವರಾಜನು ಏಕೋಜಿ, ಯಶವಂತರಾಯ, ಮಧುರೆ ಮತ್ತು ತಂಜಾವೂರಿನ ನಾಯಕರು ಶಂಭುಜಿ ಮತ್ತು ಇಕ್ಕೇರಿಯವರೇ ಮೊದಲಾದವರನ್ನು ಸೋಲಿಸಿ ಹಿಮ್ಮೆಟ್ಟಿಸಿ ಸಕ್ಕರೆಪಟ್ಟಣ, ಚಿಕ್ಕಮಗಳೂರು ಮೊದಲಾದ ಪಟ್ಟಣಗಳನ್ನು ಸಾಧಿಸಿದ ಬಗೆಯನ್ನು ವಿವರಿಸಿದ್ದಾನೆ.

ಎರಡನೆಯ ಸಪ್ತಪದಿಯಲ್ಲಿ ಚಿಕ್ಕದೇವರಾಜನಿಗೆ ಮನಸೋತ ವಿರಹಿಣಿಯರ ಚಿತ್ರವನ್ನು ಕಾಣಬಹುದು. ಈ ವಿರಹಿಣಿಯರು ತಮ್ಮ ಮನದಳಲನ್ನು ತಮ್ಮದೇ ಮಾತಿನಲ್ಲಿ ಹೇಳುವ ಬಗೆಯನ್ನು ಕವಿ ವಿವರಿಸಿದ್ದಾನೆ.

ಕಿವಿ ಬೇಟದಲ್ಲೇ ಅರಸನ ರೂಪ, ಗುಣಾತಿಶಯಗಳನ್ನು ಕೇಳಿದ ಕಾಂತೆಯೊಬ್ಬಳು ಅವನಿಗೆ ಮನಸ್ಸನ್ನು ತೆತ್ತು, ಅವನ ಸಾಮೀಪ್ಯಸುಖವನ್ನನುಭವಿಸಲು ಹಂಬಲಿಸುವ ರೀತಿ ಮೊದಲ ಪದದಲ್ಲಿದೆ. ಆ ವಿರಹಿಣಿ ರಾಯನ ಒಂದೊಂದು ಗುಣಗಳನ್ನೇ ಮನದಲ್ಲಿ ಸವಿಯುತ್ತಾ, 'ಎಂದಿಗೆ ಮೊಗನೋಡುವೆ, ಎಂದಿಗೆ ನುಡಿವೆ, ಎಂದಿಗೆ ಚಿಕದೇವೇಂದ್ರನೊಳೇಕವೆನಿಸಿ ತೋರುವೆ' ಎಂದು ಹಂಬಲಿಸುವುದೇನೂ ಹೆಚ್ಚಲ್ಲ. ಎರಡನೆಯ ಪದದಲ್ಲಿ ಹಾಗೆ ಅರಸನ ಗುಣಗಳಿಗೆ ಮನಸೋತ ಆ ಕಾಂತೆ ಅವನ ಲೀಲೆಗಳನ್ನು ಕಂಡು ಕಡುನೇಹದಿಂದ

Dr. Urmila Sharma Collection, Varanasi

CC0. In Public Domain, Digitizagtion by eGangotri

ಅವನನ್ನು ಪಡೆಯುವ ಹಂಬಲವನ್ನು ವ್ಯಕ್ತಪಡಿಸುವುದನ್ನು ನೋಡಬಹುದು. ಮುಂದಿನ ಪದದಲ್ಲಿ ಆ ಕಾಂತೆ ವಿರಹದಿಂದ ಬಳಲಿ ಬೆಂಡಾಗಿ ದಾರಿಗಾಣದೆ ತನ್ನ ಕೆಳದಿಯನ್ನು ಬರಮಾಡಿಕೊಂಡು ತನ್ನ ಮನಸ್ಥಿತಿಯನ್ನೂ, ತೀರದ ವಿರಹವನ್ನೂ ಅವಳಿಗೆ ವರ್ಣಿಸಿ, ತನ್ನನ್ನು ವಿರಹಸಂತಾಪದಿಂದ ಮುಕ್ತಳನ್ನಾಗಿ ಮಾಡಬೇಕೆಂದು ಕೋರುವುದನ್ನು ಕಾಣಬಹುದು. ಆ ಕಾಂತೆ ವಿರಹ ತಾಪವನ್ನು ಅನುಭವಿಸಲಾರದೆ ಹೀಗೆ ಹೇಳುತ್ತಾಳೆ—'ಅವನ ನೋಡಿ ದಂದು ಮೊದಲಾಸೆ ನಟ್ಟಿದೆ . . . ಅವರಿವರಂತಲ್ಲ ಬಗೆಯುಂದಗೆಟ್ಟಿದೆ' ಇಲ್ಲಿಗೇ ಅವಳ ಗೋಳು ಮುಗಿದಂತಿಲ್ಲ. ಅವಳ ವಿರಹಾವಸ್ಥೆ ಕೊನೆಯ ಘಟ್ಟವನ್ನು ಮುಟ್ಟಿದೆ. 'ಧರೆಯೊಳಾರು ಪಡದ ಪಾಡು ತನಗೆ ಬಂದಿದೆ' ಎಂದು ಹೇಳುವಲ್ಲಿ ಅವಳ ಮನಃಸ್ಥಿತಿಯನ್ನು ಊಹಿಸಬಹುದು. ಅಲ್ಲಿಯವರೆಗೂ ಬಿಗಿ ಹಿಡಿದಿದ್ದ ಅವಳ ಮನಸ್ಸು ಸಡಿಲವಾಗಿ ಹೋಯಿತು; ಜಾಣ್ಮೆ ಜಾರಿತು. ಚಿಕ್ಕದೇವೇಂದ್ರನನ್ನು ನೆನೆನೆನೆದು ತನಿಸೊಕ್ಕು ನೆತ್ತಿಗೇರಿತು. ತನ್ನ ತನುವನ್ನು ದೊರೆಗೆ ಮಾರಿದಳು. ಇಲ್ಲಿ ಆ ಕಾಂತೆಯ ವಿರಹ ವರ್ಣನೆಯನ್ನು ಕವಿ ಸೊಗ ಸಾಗಿ ನಿರೂಪಿಸಿದ್ದಾನೆ. ನಾಲ್ಕು ಮತ್ತು ಐದನೆಯ ಪದಗಳಲ್ಲಿ ಈ ಕಾಂತೆ ತನ್ನ ದೈನ್ಯಾವಸ್ಥೆಯನ್ನು ತನ್ನ ಪರಿವಾರದಲ್ಲಿದ್ದ ತೆಲುಗು ದೇಶದ ಗೆಳತಿ ಯೊಬ್ಬಳಿಗೆ ತೆಲುಗು ಮಾತಿನಲ್ಲಿ ಹೇಳಿದ ಬಗೆಯನ್ನು ಕವಿ ಇಲ್ಲಿ ವರ್ಣಿಸಿದ್ದಾನೆ. ಆರನೆಯ ಪದದಲ್ಲಿ ಈ ವಿರಹಿಣಿಯು ತನ್ನ ಮನಸ್ಥಿತಿಗೆ ಮರುಗಿದ ತನ್ನ ಗೆಳತಿ ಯನ್ನು ನೋಡಿ ತನಗಾದ ಸಂತಾಪೋದ್ರೇಕವನ್ನು ಅವಳಿಗೆ ವರ್ಣಿಸುವ ಬಗೆಯನ್ನು ಮನಗಾಣಬಹುದು. ಮುಂದಿನ ಪದದಲ್ಲಿ ಹೀಗೆ ಸಂತಾಪವನ್ನು ಹೊಂದಿದ ಕಾಂತೆ ತನ್ನ ಕಾಂತನಲ್ಲಿ ತನ್ನ ಮನದಳಲನ್ನು ತೀರಿಸಿಕೊಳ್ಳುವ ರೀತಿಯನ್ನು ಕವಿ ವರ್ಣಿಸಿದ್ದಾನೆ.

ಮೂರನೆಯ ಸಪ್ತಪದಿಯಲ್ಲಿ ಚಿಕ್ಕದೇವರಾಯನಿಗೆ ಮನಸೋತ ವಿರಹಿಣಿ ಯರ ಮನಃಸ್ಥಿತಿಯನ್ನು ಕವಿ ವಿವರಿಸಿದ್ದಾನೆ.

ಮೊದಲನೆಯ ಪದದಲ್ಲಿ ಮುಗ್ಧೆಯನ್ನು ಒಲಿಸುವಲ್ಲಿ ಪ್ರಿಯನಿಗೆ ಅಂತರಂಗ ದಲ್ಲಿ ದೂತಿಯೊಬ್ಬಳು ಸಹಾಯಮಾಡಿ ಆಮೇಲೆ ಬಹಿರಂಗವಾಗಿ ಕಾಂತೆ ಯೊಡನೆ ಸೇರಿಕೊಂಡು ಎಲ್ಲ ತಪ್ಪುಗಳನ್ನೂ ಕಾಂತನಮೇಲೆ ಹೊರಿಸುವುದರ ಮೂಲಕ ಆಕೆಗೆ ಬುದ್ಧಿಕಲಿಸುತ್ತಾಳೆ. ಇನಿಯನಲ್ಲಿ ಸಲ್ಲೆಯಾದವಳು ತನ್ನ ಬಿಗುಮಾನವನ್ನು ತೊರೆದು ಹೇಗೆ ವ್ಯವಹರಿಸಬೇಕೆಂಬುದನ್ನು ಕವಿ ಇಲ್ಲಿ ಸೂಚಿಸಿದ್ದಾನೆ. 'ಮುನಿವುದುಚಿತವೇನಯ್ಯ, ಮುನಿಸುಮೋಹದನುವ ತಿಳಿಯ[ದ]ವಳೀಯೆಳೆವೆಣ್ಣಿನೊಳು' ಎಂದು ಆರಂಭವಾಗುತ್ತದೆ. ಎರಡನೆಯ

Dr. Urmila Sharma Collection, Varanasi

CC0. In Public Domain, Digitizagtion by eGangotri

ಪದದಲ್ಲಿ ಪ್ರಾಣಕಾಂತನನ್ನು ಅಗಲಿದ ಮುಗುದೆಯೋರ್ವಳು ಆತನೊಡನೆ ಕಳೆದ ದಿನಗಳನ್ನು ಸ್ಮರಿಸಿಕೊಳ್ಳುವುದು ಇಲ್ಲಿ ವರ್ಣಿತವಾಗಿದೆ. ಹಾಗೆ ವಿರಹ ತಾಪದಿಂದ ಬಳಲಿದ ಆ ಮುಗ್ಧೆಗೆ '. . . ಉಕ್ಕುವ ಬೆಳ್ದಿಂಗಳೊಳು ಉರಿ ಯೆದ್ದು ಮಸಗುವುದು' ಸಹಜವಾಗಿದೆ. ಮೂರನೆಯ ಪದದಲ್ಲಿ ವಿರಹಿಣಿಯು ತನ್ನ ಕಾಂತನಿಗೆ ತನ್ನ ಬಗೆಯನ್ನು ವಿವರಿಸುವ ಸನ್ನಿವೇಶ ಒದಗಿದರೆ, ನಾಲ್ಕನೆಯ ಪದದಲ್ಲಿ ಕವಿಯು, ವಿರಹಿಣಿ ತನ್ನ ನಾಯಕನು ಬಳಿಗೆ ಬರುವ ನೆಂಬ ಸುದ್ದಿಯನ್ನು ಕೇಳಿ, ಅವನು ಬರುವವರೆಗೂ ಹೊತ್ತುಗಳೆದ ಪರಿಯನ್ನು ಬಣ್ಣಿಸಿದ್ದಾನೆ. ಅದು ಹೀಗಿದೆ: 'ಕಳೆದಳೀಪರಿ ಕೆಲವು ಗಳಿಗೆಗಳನು. ಆ ಬಳಿಕಲವಳಿದ್ದಿರವ ಬಣ್ಣಿಸುವೊಡಳವಲ್ಲ'. ವಿರಹ ಸಂತಾಪವನ್ನು ತಾಳ ಲಾರದ ವಿರಹಿಣಿಯ ಚಿತ್ರ ಐದನೆಯ ಪದದಲ್ಲಿ ಮೂಡಿಬಂದಿದೆ. ತನ್ನಿನಿಯ ಚಿಕದೇವೇಂದ್ರನ ಪದವೆ ಗತಿಯೆಂದು ನಂಬಿ ಅವನ ಬರವಿಗಾಗಿ ಹಾತೊರೆ ದಿದ್ದಾಳೆ. ಮುಂದೆ ಅವಳ ಸಂತಾಪಾತಿಶಯದ ವಿವರಣೆ ಬಂದಿದೆ. 'ನೋಡ ಕೂಡದು ಪಡುವ ಪಾಡುಗಳನು ಬೇಗ ದಯಮಾಡು ಚಿಕದೇವೇಂದ್ರ ಮನವ ಬಿಗಿವಿಡಿಯದಿರು' ಎನ್ನುವಲ್ಲಿ ಅವಳ ಸ್ಥಿತಿ ಅರಿವಾಗುತ್ತದೆ. ಈ ಸಪ್ತಪದಿಯ ಕೊನೆಯ ಪದದಲ್ಲಿ ವಿರಹಿಣಿಯರು ಅರಿತು ಅರಿಯದೆ ಮಾಡಿದಪಚಾರವೆಲ್ಲ ವನ್ನೂ ಮನ್ನಿಸಿ ದೊರೆಯ ಚರಣದೂಳಿಗವನ್ನು ಜನ್ಮಜನ್ಮಾಂತರಗಳಲ್ಲೂ ಪಡೆಯಲು ತೋರುತ್ತಿರುವ ಕಾತರವನ್ನು ಕಾಣಬಹುದು.

ನಾಲ್ಕನೆಯ ಸಪ್ತಪದಿಯಲ್ಲಿ ಕಾಂತೆಯರಿಗೆ ಪ್ರಾಣಕಾಂತನಾಗಿರುವ ಚಿಕ್ಕದೇವ ಭೂಪಾಲನ ವೃತ್ತಾಂತವನ್ನು ಕವಿ ಚಿತ್ರಿಸಿದ್ದಾನೆ. ಈ ಸಪ್ತಪದಿ ಯಲ್ಲಿ ಶೃಂಗಾರಭಾವ ಹೆಚ್ಚು ಪ್ರದರ್ಶಿತವಾಗಿದೆ.

ಮೊದಲ ಪದದಲ್ಲಿ ಚಿಕ್ಕದೇವರಾಜನು ತನ್ನ ಪ್ರೇಯಸಿಯೊಬ್ಬಳ ನಾಟ್ಯ ವನ್ನು ನೋಡಲು ಇಚ್ಛಿಸಿ, ಅವಳ ಅಭಿನಯಕ್ಕೆ ಪೂರ್ವದಲ್ಲಿ ಆಕೆಯ ಒನಪು, ಒಯ್ಯಾರಗಳನ್ನು ನೋಡಿ ಆನಂದಿಸಿದ ಬಗೆ ವರ್ಣಿತವಾಗಿದ್ದರೆ ಮುಂದಿನ ಪದದಲ್ಲಿ ಆ ಮುಗ್ಧೆಯ ಬೆಡಗು ಬಿನ್ನಾಣಗಳೂ, ಅಲ್ಲಿಂದ ಮುಂದೆ ಆ ಕಾಂತೆ ಯನ್ನು ಅರಸನು ವಂಚಿಸುವ ಪರಿಯನ್ನೂ ಕವಿ ವಿವರಿಸಿದ್ದಾನೆ; 'ಎಂತು ಸ್ವೈರಿಪಳೋ ಮತ್ತೇಗೈವಳೋ' ಎಂದು ಅರಸನು ಸಂತಾಪವನ್ನು ಸೂಚಿಸು ತ್ತಾನೆ. ನಾಲ್ಕನೆಯ ಪದದಲ್ಲಿ ಕಾಂತೆಯೊಬ್ಬಳು ಬೇರೆ ಯಾವುದೋ ಆಲೋಚನೆಯಲ್ಲಿದ್ದಾಗ, ಇದ್ದಕ್ಕಿದ್ದಂತೆಯೇ ಇನಿಯ ಚಿಕದೇವೇಂದ್ರನು ಬಂದುದನ್ನು ಕಂಡ ಅವಳು ಗಕ್ಕನೆದ್ದಾಗ ಅವಳ ಮುಖಕಾಂತಿಯನ್ನು ನೋಡಿ ಮನಸ್ಸಿನಲ್ಲಿಯೆ ಅವಳನ್ನು ಪರಿಭಾವಿಸಿದ ಚಿತ್ರವಿಲ್ಲಿ ವರ್ಣಿತವಾಗಿದೆ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಐದನೆಯ ದಶಪದಿಯಲ್ಲಿ ಕಾಂತೆಯರಿಗೆ ಸಹಜವಾಗುಂಟಾಗುವ ಹತ್ತು ಶೃಂಗಾರ ಭಾವಗಳನ್ನು ಕವಿ ವರ್ಣಿಸಿದ್ದಾನೆ. ಪ್ರತಿಯೊಂದು ಪದದ ಮೊದಲಲ್ಲೂ ಸಂಸ್ಕೃತ ಶ್ಲೋಕಗಳ ಪೂರ್ವಾರ್ಧ ಭಾಗಗಳನ್ನು ಉದಾಹರಿಸಿ ಅನಂತರ ಆ ಭಾವಗಳ ವಿವರಣೆಯನ್ನು ಕವಿ ಕೊಟ್ಟಿದ್ದಾನೆ.

ಈ ದಶಪದಿಗಳ ಮೊದಲ ಪದದಲ್ಲಿ ಚಿಕ್ಕದೇವರಾಯನ ಉಡುಗೆ, ತೊಡುಗೆ, ತಿಲಕಗಳ ವರ್ಣನೆಯಿದೆ; 'ಇನಿಯಳಿದೆಯಿರವನಿನ್ನೆಂತೆಂದು ಬಣ್ಣಿಸುವೆ, ಮನ ವಚನ ಕಾಯಗಳು ಮಾರುವೋದವೊ ನಿನಗೆ' ಎಂದು ಕವಿ ಬಣ್ಣಿಸಿದ್ದಾನೆ. ಪ್ರಾಣಕಾಂತನನ್ನು ನೋಡುವಾಗ ಉಂಟಾಗುವ ಹೊಸಬಗೆಯ ಮೆಯ್ಸಿರಿಗಳು ಎರಡನೆಯ ಪದದಲ್ಲಿ ವರ್ಣಿತವಾಗಿದೆ. ಮೂರು ಮತ್ತು ನಾಲ್ಕನೆಯ ಪದಗಳಲ್ಲಿ ಕಾಂತೆಯರ ತೊಡವುಗಳ ವರ್ಣನೆಯೂ, ಐದನೆಯ ಪದದಲ್ಲಿ ವನಿತೆ ತನ್ನಿನಿಯನೊಡನೆ ಏಕಾಂತದಲ್ಲಿ ಮಾತನಾಡಿದ ವಿನೋದದ ಮಾತುಗಳನ್ನು ಆಕೆಯ ಸಖಿಯರಲ್ಲಿ ಈ ಪ್ರಿಯನು ಹೇಳುವಂತೆ ಹೊರಡಲನುವಾದಾಗ ಅವಳು ನಾಚಿ ಅವನಿಗೆ ಕೈಗಳನ್ನು ಮುಗಿದು, ಕಂಬನಿದುಂಬಿ, ಅವನನ್ನು ಬೇಡಿಕೊಳ್ಳುವ ಸಂದರ್ಭ ಚೆನ್ನಾಗಿ ಮೂಡಿಬಂದಿದೆ. ಇದಲ್ಲದೆ ಇಲ್ಲಿ ಸಂತಸ, ಮುನಿಸು, ಕಾತರ ಮೊದಲಾದ ಇತರ ಭಾವಗಳನ್ನು ಕಾಣಬಹುದು. ಏಳು ಮತ್ತು ಎಂಟನೆಯ ಪದಗಳಲ್ಲಿ ಸಲ್ಲ ಸಲ್ಲೆಯರ ವಿಲಾಸಗಳನ್ನು ಕವಿ ಚಿತ್ರಿಸಿದ್ದಾನೆ. ಲಲಿತವಾದ ನಡೆ ನುಡಿಗಳ ವರ್ಣನೆ ಒಂಬತ್ತನೆಯ ಪದದಲ್ಲಿ ಬಂದಿದೆ. 'ಮನದನ್ನಳೀಗಲೀ ಮಾರ್ಗಪಿಡಿದೆಯ್ದಿದಳು, ತನ್ನ ಮನೆಗೆಯ್ದಿದಳೋ, ಎನ್ನ ಮನಕೆ ತಾನೆಯ್ದಿದಳೋ' ಎಂದು ವರ್ಣನೆ ಆರಂಭವಾಗುತ್ತದೆ. ಕೊನೆಯ ಪದದಲ್ಲಿ ಕಾಂತೆಯರು ಚಿಕ್ಕದೇವೇಂದ್ರನನ್ನು ನೆನೆದು ವಿರಹವೇದನೆಯನ್ನನುಭವಿಸಿದ ಬಗೆಯ ವಿವರಣೆ ಬಂದಿದೆ.

ಆರನೆಯ ಸಪ್ತಪದಿಯಲ್ಲಿ ಚಿಕ್ಕದೇವ ಮಹಾರಾಜನಲ್ಲಿ ಕಂಡುಬಂದ ಅಪರಾಧಗಳನ್ನು ಕಾಂತೆ ಅವನ ಸಮ್ಮೊಗದಲ್ಲಿ ನುಡಿಯುವ ವಿವರಣೆಯನ್ನು ಕವಿ ಬಣ್ಣಿಸಿದ್ದಾನೆ.

ಚಿಕ್ಕದೇವರಾಜನಲ್ಲಿ ತಪ್ಪುಕಂಡ ಕಾಂತೆಯೊಬ್ಬಳು ನಸುಮುನಿಸಿನಿಂದ 'ಬಲ್ಲೆ ಬಲ್ಲೆನಯ್ಯ ನಿನ್ನ ಬಗೆಯನೆಲ್ಲ . . . ನಿನ್ನ ಬೆಲ್ಲ ಮಾತಿಗೆ ನಾನು ಬೆರೆವಳಲ್ಲ' ಎಂದು ಹೇಳುತ್ತಾಳೆ. ಅವಳ ಮುನಿಸು ಹೆಚ್ಚುತ್ತದೆ. ಒಲಿಸಿಕೊಳ್ಳಲು ಬಂದ ಪ್ರಿಯತಮನನ್ನು 'ಅಹುದು ಕೇಳಿ ಬಲ್ಲೆ ಬಿಡು ಬಿಡು ಕೈಯ, ಆನು ಈ ಗರುಡಿಯೊಳಾಡಿದವಳಯ್ಯ' ಎಂದು ಕೋಪವನ್ನು ಪ್ರಕಟಿಸುವ ಭಾವವನ್ನು ಮೊದಲ ಪದದಲ್ಲಿ ಕಾಣಬಹುದು. ಕಾಂತೆ ತಾನು ಮಾಡಿದ

Dr. Urmila Sharma Collection, Varanasi

CC0. In Public Domain, Digitizagtion by eGangotri

ಕಾರ್ಯಗಳಲ್ಲವೂ ಹೇಗೆ ತನ್ನಿನಿಯನಿಗೆ ದೋಷ, ಮುನಿಸು ಮತ್ತು ಬೇಸರ ವನ್ನುಂಟುಮಾಡಿತು ಎಂಬ ವಿಷಯವನ್ನು ಎರಡನೆಯ ಪದದಲ್ಲಿಯೂ, ಹಾಗೆ ತನ್ನ ಮೇಲೆ ಕೋಪಗೊಂಡ ತನ್ನಿನಿಯ ಚಿಕ್ಕದೇವನನ್ನು ಸಾಂತ್ವನಗೊಳಿಸುವ ಮಾತುಗಳನ್ನಾಡುವುದನ್ನು ಮೂರು ಮತ್ತು ನಾಲ್ಕನೆಯ ಪದಗಳಲ್ಲಿ ನೋಡ ಬಹುದು. ಐದನೆಯ ಪದದಲ್ಲಿ ಕಾಂತೆಯೊಬ್ಬಳು ತನ್ನಿನಿಯ ಚಿಕ್ಕದೇವೇಂದ್ರ ನನ್ನು ಹೊಗಳುವ ಭಾವ ವ್ಯಕ್ತಪಟ್ಟಿದೆ. ಅವನ ರೂಪು ಲಾವಣ್ಯಗಳನ್ನು ಹೊಗಳಿ ಅನಂತರ 'ಈ ಮಹಿಯೊಳು ನಿನಗೆಣೆಯಿಲ್ಲವೆನೆ ಸತ್ಯಕಾಮ ಶಿವಾಜಿಯ ಗೆದ್ದ ಗಾಡಿದೋರುತಿದೆ' ಎಂದು ಅವನ ಪರಾಕ್ರಮವನ್ನು ವರ್ಣಿಸಿದ್ದಾಳೆ. ಆರನೆಯ ಪದದಲ್ಲಿ ಇನ್ನೂ ಕೋಪವಿಳಿಯದಿರುವ ಇನಿಯ ಚಿಕದೇವೇಂದ್ರ ನನ್ನು ಆತನ ಕಾಂತೆಯೊಬ್ಬಳು ಉಚಿತವಾದ ಮಾತುಗಳಿಂದ ಸಾಂತ್ವನ ಗೊಳಿಸುತ್ತಿರುವುದನ್ನು ಕಾಣಬಹುದು. ಕರಗಿ ಕರಗಿ, ಕುಂದಿ ಕುಂದಿದ ಕಾಂತೆ ಯೋರ್ವಳು 'ಎನ್ನ ಕರಣಗಳ ಕಳವುಗೊಂಬರೆ ಕನ್ನಡರಾಯ' ಎಂದು ಬೇಡಿಕೊಂಡಿದ್ದಾಳೆ. ಕೊನೆಯ ಪದದಲ್ಲಿ ತೆಲುಗು ಮಾತನಾಡುವ ತೆಲುಗು ಕನ್ಯೆಯೊಬ್ಬಳು ಆತನ ಗುಣಗಾನ ಮಾಡಿರುವುದನ್ನು ನೋಡಬಹುದು.

ಏಳನೆಯ ಸಪ್ತಪದಿಯಲ್ಲಿ ವಿರಹೋತ್ಕಂಠಿತರಾದ ಸ್ವಾಧೀನ ವಲ್ಲಭೆಯರ ವೃತ್ತಾಂತವನ್ನು ವಿವರಿಸುತ್ತದೆ.

ಆದರ ಮೊದಲ ಪದದಲ್ಲಿ ವಿರಹಿಣಿಯೊಬ್ಬಳು ತನ್ನ ನಲ್ಲನ ಯೋಚನೆಯಲ್ಲೇ ಸ್ನಾನ, ಭೋಜನ, ತಾಂಬೂಲ ಮೊದಲಾದ ವಿಷಯಗಳಲ್ಲಿ ಆಸಕ್ತಿಯನ್ನು ಕಳೆದುಕೊಂಡುದನ್ನು ಗಮನಿಸಿ ಆ ವಿರಹಿಣಿಗೆ ಬುದ್ಧಿ ಮಾತುಗಳನ್ನು ಹೇಳಲು ಬರುವ ಆಕೆಯ ಗೆಳತಿಯರನ್ನು ಕಟುವಾಗಿ ನುಡಿಸುವ ವಿಷಯದ ಪ್ರಸ್ತಾಪವಿಲ್ಲಿ ಬಂದಿದೆ. 'ಎಮ್ಮ ಚಿಂತೆಯಿವರವರಿಗೇತಕಮ್ಮ, ಎಮ್ಮ ಸುಕೃತ ಫಲ ವೆಂತಂತಿರುವೆವು ನಾವು' ಎಂದು ಆ ಕಾಂತೆ ನುಡಿಯುತ್ತಾಳೆ. ತಾನು ಹೇಗಿ ದ್ದರೂ ಚಿಂತೆಯಿಲ್ಲ, ತನ್ನ ವಿಷಯದಲ್ಲಿ ಯಾರೇ ಆಗಲಿ ಪ್ರವೇಶಿಸಬಾರದೆಂಬ ಸ್ವಭಾವ ಅವಳದು. ಕವಿಯ ಮಾತುಗಳನ್ನು ಇಲ್ಲಿ ನೋಡಬಹುದು. 'ಮೊಗ ಕಿರಿ ದಾದರೇನು, ಮೌನದೊಳಿದ್ದರೇನು, ದುಗುಡದೋರಿದರೇನು ದೂಗಿದರೇನು, ದುಗುಲ ಮಾಸಿದರೇನು ತೊಡಿಗೆಯಿಲ್ಲದರೇನು, ಯೇಗುವೆ ನಾವೆಂತಿದ್ದರು ಇದಕೆಲ್ಲ ತಮಗೇನು?' ಎರಡನೆಯ ಪದದಲ್ಲಿ ತನ್ನ ಕಾಂತನಡಿಗೆ ಸೋಲ್ವುದೆ ತನಗೆ ಪರಮಲಾಭವೆಂದು ಕಾಂತೆ ಹೇಳುವ ಅಭಿಪ್ರಾಯವನ್ನು ಕವಿ ನಮ್ಮ ಮುಂದಿಟ್ಟಿದ್ದಾನೆ. ವಿರಹವ್ಯಥೆಯನ್ನು ಅನುಭವಿಸಿ ಅನಂತರ ನಲ್ಲನೊಡನೆ ಒಂದು ಗೂಡಿ ಸುಖದಿಂದಿರುವ ಕಾಂತೆಯೊಬ್ಬಳು ತಾನನುಭವಿಸಿದ ವಿರಹವೇದನೆ

Dr. Urmila Sharma Collection, Varanasi

CC0. In Public Domain, Digitizagtion by eGangotri

ಯನ್ನು ಪರ್ಯಾಯವಾಗಿ ತನ್ನ ಗೆಳತಿಯರೇ ಹೇಳುವಂತೆ ತನ್ನ ಕಾಂತನಿಗೆ ತಿಳಿಸುವುದು ಮೂರನೆಯ ಪದದಲ್ಲಿ ರೂಪಿತವಾಗಿದೆ. ತಾನು ಸಂತಾಪದಲ್ಲಿದ್ದಾಗ ತನ್ನನ್ನು ಅಪಹಾಸ್ಯಗೈದ ಸವತಿಯರ ಸುಡಿಗಳ ನೆವದಿಂದ ಕಾಂತೆಯೊಬ್ಬಳು ತನ್ನಿನಿಯನಲ್ಲಿ ತನ್ನ ಪ್ರೀತಿಯನ್ನು ಪ್ರಕಟಪಡಿಸಿರುವ ಬಗೆ ನಾಲ್ಕನೆಯ ಪದದಲ್ಲಿಯೂ, ಹಾಗೆ ತನ್ನಲ್ಲಿ ಕಾಂತನು ಪ್ರೀತಿಗೊಂಡುದರಿಂದ ಆ ಮೂಲಕವಾಗಿ ಇನ್ನುಳಿದ ಸವತಿಯರು ಕರುಬಿನಿಂದ ನುಡಿವ ಮಾತುಗಳ ಮೂಲಕ ತನ್ನ ನಂಬುಗೆಯನ್ನು ಕಾಂತನಲ್ಲಿರಿಸಿರುವುದು ಐದನೆಯ ಪದದಿಂದ ವ್ಯಕ್ತವಾಗುತ್ತದೆ. 'ಎನ್ನ ಮಾನಾವಮಾನವು ನಿನ್ನದೆನಗೇನು ಚನ್ನಿಗ ಚಿಕದೇವರಾಯ ನಿನ್ನ ಚಿತ್ತವೆನ್ನ ಭಾಗ್ಯ'ವೆನ್ನುತ್ತಾಳೆ. ಆರನೆಯ ಪದವು ತೆಲುಗು ಭಾಷೆಯಲ್ಲಿದ್ದು ಕಾಂತೆ ತನ್ನ ಕಾಂತನ ಮೇಲಿನ ಸ್ನೇಹ ಸಂಬುಗೆಯನ್ನು ತೆಲುಗು ಗೆಳತಿಗೆ ಹೇಳಿದ ಬಗೆ ವರ್ಣಿತವಾಗಿದೆ. ಕೊನೆಯಲ್ಲಿ ಕಾಂತೆಯು ತನ್ನ ನಲ್ಲನಾದ ಚಿಕದೇವ ಮಹಾರಾಯನು ನಡೆಸಿದಂತೆ ನಡೆದು ಆ ಮೂಲಕ ತನ್ನ ಸೌಭಾಗ್ಯವನ್ನು ಮೆರೆದಿರುವ ರೀತಿ ವರ್ಣಿತವಾಗಿದೆ.

ಇದಿಷ್ಟು ಚಿಕದೇವರಾಯ ಸಪ್ತಪದಿಯ ಸಾರಾಂಶ. ತಿರುಮಲಾರ್ಯನ ಇತರ ಗ್ರಂಥಗಳಲ್ಲಿ ಕಾಣಬರುವಷ್ಟು ಚರಿತ್ರಾಂಶಗಳು ಇಲ್ಲಿ ಕಾಣಬರುವುದಿಲ್ಲ. ಅದು ಅಪ್ರಕೃತವಾದರೂ, ಚಿಕ್ಕದೇವರಾಜನನ್ನು ನಾಯಕನನ್ನಾಗಿ ಮಾಡಿಕೊಂಡು ಶೃಂಗಾರಭಾವಗಳನ್ನೇ ಹೆಚ್ಚು ವರ್ಣಿಸುವ ಈ ಸಪ್ತಪದಿ ರಸ ದೃಷ್ಟಿಯಿಂದ ಎರಡನೆ ದರ್ಜೆಯ ಕಾವ್ಯ. ಈತನ ಉಳಿದ ಕಾವ್ಯಗಳಲ್ಲಿ ತೋರಿಬರುವ ಕಾವ್ಯ ಪ್ರೌಢಿಮೆಯೇ ಆಗಲಿ, ಕಲ್ಪನಾಂಶಗಳೇ ಆಗಲಿ ಇಲ್ಲಿ ಸಿಗುವುದಿಲ್ಲ. ಈ ಸಪ್ತಪದಿಯನ್ನು 'ಗೀತಗೋಪಾಲ' ದೊಡನೆ ಹೋಲಿಸಿದಾಗ ತೀರ ಸಪ್ಪೆಯೆನಿಸುತ್ತದೆ. ರಾಜನ ಗುಣಪ್ರಶಂಸೆಯೇ ಇದರ ಮೂಲೋದ್ದೇಶವಾಗಿರುವ ಕಾವ್ಯಾಂಶದ ಪ್ರಾಧಾನ್ಯ ಕುಗ್ಗಿದೆ. ಆದರೂ ಅಲ್ಲೊಂದು ಇಲ್ಲೊಂದು ಪದ್ಯದಲ್ಲಿ ಕಾವ್ಯಾಂಶದ ಮಿಂಚು ಮಿನುಗುತ್ತದೆ. 'ಮನದನ್ನಳೀಗಲೀ ಮಾರ್ಗವಿಡಿದೆಯ್ದಿದಳು, ತನ್ನ ಮನೆಗೆಯ್ದಿದಳೊ ಎನ್ನ ಮನಕೆ ತಾನೆಯ್ದಿದಳೋ' (೫-೯), 'ಎನ್ನ ಮಾನಾವಮಾನವು ನಿನ್ನದೆನಗೇನು' (೭-೫), ಮೊದಲಾದ ಪದಗಳು ಸಾಹಿತ್ಯ ದೃಷ್ಟಿಯಿಂದ ಉತ್ತಮವಾಗಿವೆ. ಈ ಸಪ್ತಪದಿಗಳ ಆರಂಭದಲ್ಲಿ ಬರುವ ಚರಿತ್ರಾಂಶಗಳು ಇತಿಹಾಸಕ್ಕೆ ಹೆಚ್ಚು ಹತ್ತಿರವಾಗಿವೆ ಐತಿಹಾಸಿಕ ವಿಷಯವನ್ನು ಅಲ್ಲಲ್ಲಿ ವಿವರಿಸುವುದರಿಂದ ಇದರ ಯೋಗ್ಯತೆ ಹೆಚ್ಚಿದೆ.

೧೭ ನೆಯ ಶತಮಾನದಲ್ಲಿ ಚಿಕ್ಕದೇವರಾಜಒಡೆಯರು ಶ್ರೀ ವೈಷ್ಣವ

Dr. Urmila Sharma Collection, Varanasi

CC0. In Public Domain, Digitizagtion by eGangotri

ಸಾಹಿತ್ಯ ಹಾಗೂ ಹಲವು ಬಗೆಯ ಸಾಹಿತ್ಯಪ್ರಕಾರಗಳಿಂದ ಕೂಡಿದ ಕೃತಿಗಳು ಮೈದೋರಿಬರಲು ವಿಶೇಷ ಪ್ರೋತ್ಸಾಹ ನೀಡಿದರು. ಹಾಗೆ ಪ್ರೋತ್ಸಾಹ ನೀಡಿದ್ದರ ಪರಿಣಾಮವಾಗಿ ಈ ಕೃತಿ ಮೂಡಿಬಂದಿದೆ. ಒಟ್ಟಿನಲ್ಲಿ ಇದು ಒಮ್ಮೆ ಅವಲೋಕಿಸಬಹುದಾದ ಕೃತಿಯೆಂದು ಹೇಳಬಹುದು.

ಈ ಗ್ರಂಥವನ್ನು ಪ್ರಕಟಿಸುವಲ್ಲಿ ನನಗೆ ವಿಶೇಷ ಪ್ರೋತ್ಸಾಹವನ್ನಿತ್ತ ನನ್ನ ವಿದ್ಯಾಗುರುಗಳಾದ ಪ್ರೊ. ದೇ. ಜವರೇಗೌಡರಿಗೂ, ಪ್ರೊ. ಡಿ. ಎಲ್. ನರಸಿಂಹಾಚಾರ್‌ರಿಗೂ ಮತ್ತು ಶ್ರೀ ಎಸ್. ವಿ. ಪರಮೇಶ್ವರಭಟ್ಟರಿಗೂ, ಈ ಗ್ರಂಥದ ಹಸ್ತಪ್ರತಿಯನ್ನು ಅವಲೋಕಿಸಿ ಸೂಕ್ತ ಸಲಹೆಗಳನ್ನಿತ್ತ ಡಾ. ಜಿ. ವರದರಾಜರಾಯರಿಗೂ ಮತ್ತು ಈ ಗ್ರಂಥದಲ್ಲಿ ಬರುವ ತೆಲುಗು ಹಾಡುಗಳನ್ನು ಸರಿನೋಡಿಕೊಟ್ಟ ಶ್ರೀ ಬಾಡಾಲು ರಾಮಯ್ಯನವರಿಗೂ, ಮೈಸೂರು ಪ್ರಾಚ್ಯ ವಿದ್ಯಾಸಂಶೋಧನಾಲಯದ ಡೈರೆಕ್ಟರ್ ಶ್ರೀ ಎಚ್. ದೇವೀರಪ್ಪನವರು ತಮ್ಮ ಭಂಡಾರದ ಹಸ್ತಪ್ರತಿಗಳನ್ನು ಕೊಟ್ಟುದಕ್ಕಾಗಿಯೂ, ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಇದನ್ನು ಪ್ರಕಟಿಸಲು ಉತ್ತೇಜನವಿತ್ತ ನನ್ನ ತೀ. ರವರಿಗೆ ಋಣಿಯಾಗಿದ್ದೇನೆ. ಮುದ್ದಾಗಿ ಮುದ್ರಿಸಿದ ವೆಸ್ಲಿ ಪ್ರೆಸ್‌ನವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
೧೪-೭-೧೯೬೭

ಎಚ್. ಎಸ್. ಹರಿಶಂಕರ್

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

ಚಿಕದೇವರಾಯ ಸಪ್ತಪದಿ

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

ಚಿಕದೇವರಾಯ ಸಪ್ತಪದಿ

೧. ಬಿರುದಾವಳಿ ಸಪ್ತಪದಿ

ಇದಱೊಳೊರ್ಮೊದಲ ತ್ರಿಪದಿಯೊಳ್ ಇಷ್ಟದೇವತಾಸ್ಮರಣರೂಪಮಾದ ಮಂಗಲಮಂ ಕಥಾನಾಯಕ ಗುಣವರ್ಣರೂಪಮಾದ ವಸ್ತು ನಿರ್ದೇಶಮುಮಂ ಬೆರಸಿ ಪೇೞ್ವರ್.

ರಾಗ: ಯರಕಲಕಾಂಬೋಧಿ; ಅಟ್ಟತಾಳ

ಮಂಗಳ [ಂ] ಮಹಿಶೂರವರನಿಗೆ
ಮಿಗೆ ಮಂಗಳ ಚಿಕದೇವರಾಯನಿಗೆ || ಪಲ್ಲವಿ ||

ಪರಿತಂದ ಧರ್ಮ[1]ವಿಪಕ್ಷ[1]ರೆನಿಪ ಭೂ
ವರನನಿಬರ ಪೊಯ್ದು ಬಸವೞಿಸಿ
ಉರೆ ಧರ್ಮರಾಜ್ಯವನುನ್ನತಿಗೊಳಿಸಿದ
ಪುರುಷೋತ್ತಮನಿಗೆ ಪುಂಡರೀಕಾಕ್ಷಗೆ. || ೧ ||

ಚರಣಕೆಱಗಿದರ ಮರುಳುಗಳಿಯೆ ಸ
ಚ್ಚರಿತ........................ಕ್ರಿಗಳ
ಇರವ ತಿಳಿಪಿ ಕಟ್ಟೆರಱಿದೊಳೋವುವ
[2]ವರೆಪತಿ ಯಾದವ ನಾರಾಯಣನಿಗೆ. || ೨ ||

ಆ ನಾರದಾದ್ಯರಂತಾನಂದವಡೆಯಿಸಿ
ಈ ನೆಲದೊಳಗಿರ್ಪರೆಲ್ಲ[ರ]ನು
ಜೇನ ಸವಿಯ ಪೋಲ್ವ ತಾನದೊಳ್ತಣಿಯಿಪ
ಗಾನಾಮೃತಾಬ್ಧಿಗೆ ಗರುಡಧ್ವಜನಿಗೆ. || ೩ ||

ಈ ಎರಡನೆಯ ತ್ರಿಪದಿಯೊಳ್ ತನ್ನಿಷ್ಟದೇವತೆಗಂ ಕೃತಿನಾಯಕಂಗ ಮೆಣೆಯಿಲ್ಲೆಂಬುದನೊಂದೆ ಯತ್ನದೊಳ್ಪೇೞ್ವರ್.

[1] ಕ್ಷತಿ (ಕ).
[2] ನರ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ರಾಗ: ಇಂದುಘಂಟಾರವ

ತೊಳಪನೊರ್ವನೆ ದೊರೆ ಜಗಕೆ ಮ
ತ್ತುಳಿದವರೊಪ್ಪುವರ......ಳಿಗಕೆ. ‖ ಪಲ್ಲವಿ ‖

ಮುದದಿ ವಂಶೋದ್ಧಾರನೆನಿಸಿ ಕೂಡೆ
ಎದಿರಾದ ಬಸವನನಿರವನ [ಕೆ][1] ಡಿಸಿ
ಮಧುರೆಯಾಣ್ಮನ ಮಟ್ಟುಬಡಿಸಿ ತನ್ನ
ಯದುಕುಲವೆಲ್ಲವನೇಳಿಗೆಗೊಳಿಸಿ. ‖ ೧ ‖

ಸಲುವರ ಸಂತಸ ಬಡಿಸಿ ದುಷ್ಟ
ಕುಲದವರನಿಬರ ಕೋಟಲೆಗೊಳಿಸಿ
ಸಲೆ ಧರ್ಮಪಕ್ಷವ ವಹಿಸಿ ಮಿಗೆ
ನಲಿಯೆ ವಿಜಯಕೀರ್ತಿ ನರಪತಿಗೆ ‖ ೨ ‖

ಸ್ಥಿರ ಚಿಕ್ಕದೇವೇಂದ್ರನೆನಿಸಿ ಶುಭ
ಚರಿತದಿ ಮಹಿಶೂರ ಸಾಮ್ರಾಜ್ಯವೆರಸಿ
ನರಕ ಭೀತಿಯ ಪರಿಹರಿಸಿ ಕೂಡೆ
ಮೊರೆದೆದ್ದ ಶಂಭುವ ಮುಱಿದು ಮುಂಗೆಡಿಸಿ ‖ ೩ ‖

ಈ ಮೂರಱಿಯ ತ್ರಿಪದಿಯೊಳ್ ಈ ಮಹಾರಾಯಂ ಸಿಂಹಾಸನದೊಳ್ಕುಳ್ಳಿರುವ ಠೀವಿಯಂ, ಕನ್ನಡ ದೇಸಿಯ ಸಿಂಗರಮಂ, ಅಗ್ಗಳದ ರನ್ನದೊಡವುಗಳಂ ಬಣ್ಣಿಸಗೆಯ್ದು ನೆವದಿಂದಿವನ ಶರಣಾಗತ ರಕ್ಷೆಯಂ, ಇವನ ಶಾರ್ಯ್ಯೋನ್ನತಿಯಂ, ಇವನ ಸ್ವಜನ ಪರಿಪಾಲನ ಪ್ರಕಾರಮಂ ನಿರೂಪಿಸುವರ್.

ರಾಗ: ಮೋಹನ; ತಾಳ ಝಂಪೆ

ರಾಜಿಪನು ಚಿಕದೇವರಾಜ ಚಂದ್ರಮನು
ತೇಜದಿಂ ಕರ್ನಾಟ ಸಿಂಹಾಸನವನಡರಿ ‖ ಪಲ್ಲವಿ ‖

ಎಡೆಬಿಡದೆ ಬಂದೆಱಗುವಿಳೆಯಾಣ್ಮರ್ಗೆ ಭಯವನು
ಕುಡುವ ಸನ್ನಾಹ ಮುಂಕೊಂಡುದೆನಲು
ಬೆಡಗು ಮಿಗೆ ಬಲದ ಮೆಲ್ಲಡಿಯ ನಸು ಮುಂಬರಿಸಿ
ನಿಡುದೋಳಾಜಾನುವಿನ ಮುಡಿಯ ಮೇಲಳವಡಿಸಿ ‖ ೧ ‖

Dr. Urmila Sharma Collection, Varanasi

CC0. In Public Domain, Digitizagtion by eGangotri

ಪಗೆವರಿಂ ಪಿಡಿದ ಬಿಂಬವ ತೋಱಿ ಬಿನ್ನವಿಪ
ಗಗನ ಮಣಿಯಂ ನುಡಿಯುನಾಕರ್ಣಿಪಂತೆ
ಸೊಗಸಲೆಡೆಯೊಳು ಕರ್ಪುರ್ಸೋರ್ದುರ್ ಬಲಗಡೆಗೆ ಪೊಂ
ದುಗುಲದಿಂ ಬೀಗಿ ತೋರ ಶಿಖೆಯನು ಧರಿಸಿ ॥ ೨ ॥

ಸಂಬಿ ಸೇರಿದ ಜನರನಾದರದಿನುದರದೊಳ
ಗಿಂಬಿಟ್ಟು ಸುಖದಿ ಲಾಲಿಸುವಂದದಿ
ತುಂಬಿದೋಲಗದ ಪ್ರತಿಬಿಂಬವ ಪಡೆದು ಪೆರ್ಚ
ಸಂಬೆತ್ತು ವಜ್ರ ಭೂಷಣದಿ ಸಿಂಗರವಡೆದು ॥ ೩ ॥

ಈ ನಾಲ್ಕನೆಯ ಏಕಪದಿಯೊಳ್ ಮುಂಬಣ್ಣಿಸಿದ ಭುಜಗುಣಂಗ[ಳಂ] ನೆನೆದು ತಣಿಯದೆ ಮತ್ತಮದನೆ ಬಣ್ಣಿಸುತ್ತಮಾ ಸಂಬಂಧಂ ತಮಗೆ ದೊರೆಕೊಂಡುದಕ್ಕೆ ಸಂತಸಂ [ಪ] ಡೆವರ್.

ರಾಗ: ಕಾಂಬೋಧಿ; ಆದಿತಾಳ

ದುಂಡುದೋಳ ನೆಳಲೆಸಗೆ ದೊರಕೊಂಡುದಮ್ಮಮ್ಮ ಭೂ
ಮಂಡಲಾಧಿಪರೆಱೆಯನು ಮಹಿಶೂರ ಚಿಕದೇವೇಂದ್ರನ ॥ ಪಲ್ಲವಿ ॥

[ರನ್ನ[1]ತಿಲಕ[2]ದಂತೆ] ಒಪ್ಪುವ ಕನ್ನಡನಾಡು
ತನ್ನ ಕಾಪಿನೊಳು ಮಿಗೆ ತಣ್ಪುವಡೆಯೆ
ಮುನ್ನಿನ ಜಾಡ್ಯ ತಿಳಿದು ಮುಂಬರಿದಿತ್ತು ಮನ್ನಿಪ
ಸನ್ನಾಹವಡೆದ ಕಲ್ಪ ಶಾಖಿಗೆಣೆಯೆನಿಸುವ

---

[1] ಗಿ, (ಕ, ಖ, ಅ).
[2] ಅ ಪ್ರತಿಯಲ್ಲಿ ತಿಲಕವೆಂದು ಇದೆ. ಉಳಿದ ಪ್ರತಿಗಳಲ್ಲಿ ಯಾವ ಪಾಠವೂ ಇಲ್ಲ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಈ ಐದನೆಯ ತ್ರಿಪದಿಯೊಳ್ ಮುಂ ಭುಜವರ್ಣನಂ ಗೆಯ್ವೆಡೆಯೊಳ್ ನೆನಪಿಗೆ ಬಂದ ವೀರ ವಿತರಣ ಪ್ರಜಾಪಾಲನಂಗಳಂ ಬಿತ್ತರಿಸಿ ಈಯತಿಶಯಂ ಮುಂಜಸಂಬೆತ್ತ ಮಹಾಪುರುಷರೊಳಮಿಲ್ಲೆಂಬುದಂ ನಿರವಿಸುವರ್.

ರಾಗ : [1]ಪೂ[1]ರವಿ

ದೊರೆಗೊಳಿಸುವೆನಾವ ಧೊರೆಗಳ
ಧುರಧೀರ ಮಹಿಶೂರ ಧೊರೆರಾಯ ಚಿಕದೇವ
ನರಪತಿ ಯಾದವನಾರಾಯಣನಿಗೆ. || ಪಲ್ಲವಿ ||

ಎಡಬಲವಗೆಗಳು ಏಕವೇಳೆಯೊಳೆ
. . . . ರ್ಥನ ಕೀಳುಗೆಯ್ದು
ಕಡುಗಿ ಎಣ್ದೆಸೆಯೊಳು ಕವಿವ ಬಲ್ವಗೆಗಳ
ಪಡೆಯನೊಂದುಱುಬಿಂದ ಬಯಲೆನಿಸಿದಗೆ || ೧ ||

ಪದಿನೈದು ಕಲೆಗಳ ಪಗೆವು . . . . . .
. . . . ಡಿಳಿಸಿ
ಪದಿನಾಱು ದಾಸವ ಪಗಲೊಳೊಂದಱೊಳಿತ್ತು
ಸೊಡೆಯ ಕಣಿಗೆ ದಾನಶೂರರೆಱೆಯಗೆ. || ೨ ||

ಕುಲಗೋತ್ರಗಳ ಸಜ್ಜುಗೊಳಿಪೆನಂ[ದೊರೆಯುತೆ]
ಬಲುಮೆಗೆಡಿಸಿ ದೇವಪತಿಯ [2]ಪಾಡಿಳಿಸಿ[2]
ಕುಲಗೋತ್ರಗಳ ಪೆಂಪು ಕೂಸರೆ [ಬ]ಳ್ಕಡತೆಯ
ನೆಲೆಗೊಳಿಸಿದ ಬಲು ನೇಮಗಾಱನಿಗೆ. || ೩ ||

ಈ ಆಱನೆಯ ನವಪದಿಯೊಳ್ ಈ ಮಹಾರಾಯನೊಡ್ಡೋಲಗದೊಳೆಚ್ಚಱಿಸಿ . . . . ಏಸಿನುಡಿವ ಕೈವಾರಿಗಳ, ನುಡಿಯ ನೆವದಿಂದಿವನ ಪಾದ ಸೇವಕರಪ್ಪ ವೀರಪುರುಷರ ವೀರಾಯತಂಗಳಂ ಬಿತ್ತರಿಸಿ ನುಡಿವರ್.

ರಾಯ ಪರಾಕು, ಶ್ರೀ ಚಿಕದೇವರಾಯ ಪರಾಕು, ಜೀಯ
ನಿನ್ನಡಿಗಳ ಸೇವೆಗೈದಿದರೊಲಿದಾಯತಪಾಂಗವನನುಗೊಳಿಸುವುದಿತ್ತ.
|| ಪಲ್ಲವಿ ||

1 ವಾ (ಕ,ಖ).
2 ಎಂಡಳಿಸಿ (ಕ,ಅ).

Dr. Urmila Sharma Collection, Varanasi

CC0. In Public Domain, Digitizagtion by eGangotri

ಆಸಮಯದೊಳು ಬಂದು ಪೊಸವೂರ ಮುತ್ತಿದ್ದ
ಎಸವಂತರಾವುವನೆಳ್ಬಿಸಿ ತಟುಬಿ
ಬಸವಳಿಸಿ ಮೂಗ ಪಱಿಸಿ ಪಾಡಿಳಿಸಿ
ದಸಮ ವೀರರವರವಧರಿಸುವುದಿತ್ತ. ||೧||

ಎಲ್ಲ ನಾಡುಗಳ ಪೊಕ್ಕಿಱಿದಾವೊಲೆಂದುಬ್ಬಿ
ಚಲ್ಲವಡುತಗಡಿ ಸೆಱಿಗಿಗೆ ಪರಿದು
ಬಲ್ಲಿದ ವಿಠ್ಠಲ್ಲಬಾಲೆ ರಾವುವನುರೆ
ಕೊಲ್ಲದ ಕೊಲೆಕೊಂಡ ಕೂರಾಳುಗಳಿತ್ತ. ||೨||

ಲೂಟಿಯ ಮಾಯ ಮರಾಟರೆಲ್ಲರೊಳುರೆ
ಮೇಟಿಯ ಜೇತಜಿ ಕಾಟಕರನನು
ದಾಟಿಸಿ ಜವನೂರ ದಾರಿವಿಡಿಸಿ ನಾಡ
ಕಾಟವ ಬಿಡಿಸಿದ ಗಾಡಿಕಾಱರಿತ್ತ. ||೩||

ಯೆದುಲಶಾಹಸನಿರವುಗೆಡಿಸಿದೆ ನಿ
ನ್ನೀದೇಶದೊಳಿದಿರಿಲ್ಲೆಂದು ಬೆಱೆತ
ದಾದಜಿ ಕಾಕಡೆಯ ತಲೆಯ ಚೆಂಡಾಡಿದ
ಪಾದ ಸೇವಕರಿತ್ತ ಬಗೆಗೊಳಿಸುವುದೊಮ್ಮೆ ||೪||

ಕಟುಬಿ ಕುತುಪಶಾಹದಳವನವರ ಪಡೆ
ಗುಱುವು ಪಳಯಿಗೆಯ ಕುದುರೆಯಾನೆಗಳ
ಸೆಱಗೆಯ್ದು ತುಮಕೂರ ಚಿಕನಾಯಕನ ಹಳ್ಳಿ
ತುಱುಗೆಱೆಗಳ ಕೊಂಡ ಧುರ ಧೀರರವರಿತ್ತ. ||೫||

ಮೇಲುವಾಯ್ದೈತಂದು [1]ಮ[1]ತಿಗೆಟ್ಟ ಕೆಳದಿ ನೃಪಾಲ
ಜಾಲವ ಭಂಗಪಡಿಸಿ ಪಾಡಿಳಿಸಿ ಬೇಲೂರ ಮೊ
ದಲಾದ..........................ಗಳಕೊಂಡು
ಕಾಲೂಱು ನಿಲದಂತೆ ಕೆಡಹಿದರವರಿತ್ತ. ||೬||

---

[1] ಮಿ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ನಾಡೊಳಿರುವ ನೆಲೆವೀಡುಗೋಂಟೆಯೊಳೀಡು
ಜೋಡಿಲ್ಲವೆಂದು ಕೊಂಡಾಡೆ ಕೋವಿದರು
ರೂಢಿವಡೆದ ಬೆಂಗಳೂರನಾಕ್ರಮಿಸಿದ
ಗಾಡಿಕಾಱರೊಳಿತ್ತ ಕಡೆಗಣ್ಣ [1]ಕಪ[1]ಸೊಮ್ಮೆ ॥ ೭ ॥

ಕುದುರೆಯೆಣ್ಬಾಸಿರ ಕೂರಾಳ್ಗಳು ಲಕ್ಷ ಮ
ದದಾನೆ ನೂಱಱಿಂ ಮಲೆತು ಮಾಱಾಂತು
ಮಧುರೆಯಾಣ್ಮನ ಪೌಜ ಮರ್ದಿಸಿ ಮರವನ
ಸದೆದು ಕೊಂಗುನಾಡ ಸಾಧಿಸಿದವರಿತ್ತ ॥ ೮ ॥

ಬಳಸಿ ಎಣ್ದೆಸೆಯೊಳು ಪಡಿಬರಿಸಿದ ಕೊಂಗ
ತೆಲುಗ ಮರವ ಕಳ್ಳ ಮಲೆಯಾಳ ಕೊಡಗ
ಮಲೆಪ ತುರುಕ ಬೇಡ [2]ಮಾ[2]ವಳಿ ಮೊಱಸರ
ನೆಲವೀಡುಗಳ ಕೊಂಡ ಗೆಲವುಗಾಱರಿತ್ತ. ॥ ೯ ॥

ಏಳನೆಯ ಪಂಚಪದಿಯೊಳ್ ಅವನ ದಿಗ್ವಿಜಯ ಯಾತ್ರೆಯೊಳ್ ಪಗೆರಾಯ ನೊಡನವರ ಹಿತವಿಗರ್ಪೇಳ್ವ ಹಿತೋಪದೇಶದ ನೆವದಿಂದಿವನ ಗೆಲ್ಲಂಗಳೊಳ್ಕೆಲವುಂ ಗುಱುತುಗೆಯ್ದು ಪೇಳ್ವರ್.

ರಾಗ: ಕಾಪಿ; ಅಟ್ಟತಾಳ

ಅದೆಬಂದನಿದೆಬಂದನೆಂತೆಂಬರ ಗಂಡ
ಇದಿರಾಂಪೆವೆಂದು ನೀವಿರವು ಗೆಡದಿರಿರೊ
ಪದಪದ್ಮಕೆಱಗಿರೊ ಬಾಳಿರೊ ಬದುಕಿರೊ. ॥ ಪಲ್ಲವಿ ॥

ಕಡುಗೆಸಱನೊಳಾನೆ ಕಾಲೂಱಿಸಿತೆಂ
ದೆಡ ಬಲದರಸುಗಳೆಲ್ಲರ ಕವಿಸಿ ಇ
ಟ್ಟೆಡೆಯ ವೇಳೆಯೊಳು ಬಂದೆಕ್ಕೋಜಿಯ ಬ
ಲ್ಪಡೆಯನೋಡಿಸಿ ಎಸೆವಂತರಾವುವ
ಮುಡಿವಿಡಿದು ಕೆಡಪಿ ಮೂಗು ಬೇರುವರೆ ಕೊಯಿದ ॥ ೧ ॥

[1] (ಖ) ದಲ್ಲಿಲ್ಲ.
[2] (ಖ) ದಲ್ಲಿಲ್ಲ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಮಧುರೆ ತಂಜಾವೂರ ಮರ್ದಿಸಿ ಮೆಱೆವನ
ಮದವನಿಳುಹಿ[1]ಬಱುಮೆಯ್ಮೆ ವಡೆ[1]ದು ಮೆಯ್
ಹದಗೆಟ್ಟು ಹರಿತಂದು [2]ಕೆಡೆ ಗಡಿಯೆಡೆಯೊಳು
ಪದವಿಟ್ಟ ವಿಠ್ಠಲಬಾಲೆರಾವಿನ ಫೌಜ
ಸದೆದೋಡಿಸಿ ಕೂಡೆ ಸರ್ವಸ್ವವಸು ಕೊಂಡ ॥ ೨ ॥

ಮುಗಿಲನಾಡನಿತಕ್ಕೆ ಮೂಗುಬ್ಬಸಗೆಯ್ದು
ಪಗದಿ ಚೌದಾಯಿಯ ಪಟ್ಟ ಪಗಲೆಕೊಂಡ
ವಿಗಡ ಜೇತಜಿ ತನ್ನ ಬಿಂಕದೊಳಯ್ತರೆ
ತಗುಳಿಯುವನ ಪೌಜ ತಬ್ಬಿಬ್ಬುಗೊಳಿಸಿದ
ಲಗಡೆಱಗಿದವೊಲು ಲಾಗಿಸಿ ಬಡಿದವ ॥ ೩ ॥

ಗಜ ವಾಜಿಯುಂಟೆಂಬ ಗರ್ವದಿ ಮೆಯ್ಗೆಟ್ಟು
ನಿಜ ಪರದೇಶವ ನೆಗ್ಗಿ ನಿರ್ದಯದೊಳು
ಪ್ರಜೆಯ ಬಡಿದು ಛತ್ರಪತಿಯೆಂದು ಬೆಱೆವ ಶಂ
ಭುಜಿ ಪಾತಕಿಗೊಂದು ಭುಜವೆನಿಸುವ ದಾ
ದಜಿ ಕಾಕಡೆಯ ಪಂದಲೆಯ ಚೆಂಡಾಡಿದ ॥ ೪ ॥

ಸೊಕ್ಕಿ ಮೇಲ್ವಾಯ್ದು ಬಂದಿಕ್ಕೇರಿಯವರ
ಕರ್ಕಶ ದುರ್ಗಂಗಳ ಕೈವಶಗೆಯ್ದು
ಸಕ್ಕರೆ ಪಟ್ಟಣವನು ಸರಸಮಾರ್ಗದಿಂ ಕೊಂ
ಡುರ್ಕಿ ಚಿಕ್ಕಮಗಳೂರನಾಕ್ರಮಿಸಿ ಮೈ
ಸೊಕ್ಕನಿಳುಹಿದ ಶ್ರೀ ಚಿಕದೇವರಾಜೇಂದ್ರ ॥ ೫ ॥

---

1 ಲಱುಮಯ್ಮವಡೆ (ಅ).
2 ತ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

೨. ವಿರಹ ಸಪ್ತಪದಿ

ಇಂತು ಮೊದಲ ಸಪ್ತಪದಿಯೊಳ್ ನಾಯಕ ಗುಣಾನುವರ್ಣನಂಗೆಯ್ದು ಈ ಎರಡನೆಯ ಸಪ್ತಪದಿಯೊಳ್ ಶ್ರೀ ಚಿಕದೇವ ಮಹಾರಾಯಂಗೆ ಮನಂ ಸೋಲ್ದ ವಿರಹಿಣಿಯರ ವಿರಹಮನವರ ನುಡಿಗಳಿಂ ನಿರೂಪಿಸುವರ್. ಇದಱೊಳೊರ್ಮೊದಲ ತ್ರಿಪದಿಯೊಳವನ ಗುಣಂಗಳಂ ಕೇಳ್ದು ಕಿವಿವೇಂಟದೊಳೆ ಮನಂಸೋಲ್ದವನೂಳಿಗಮಂ ಬಯಸಿ ಚಿಂತಿಸುವ ಕಾಂತೆ ತನ್ನಂತರಂಗಮಂ ಕೆಳದಿಯೊಳ್ಪೇಳ್ವಳ್.

ರಾಗ: ಮಧುಮಾಧವಿ ; ಆದಿತಾಳ

ಎಂದಿಗೆ ಮೊಗ ನೋಡುವೆ
ಎಂದಿಗೆ ನುಡಿವೆ
ಎಂದಿಗೆ ಚಿಕದೇವೇಂದ್ರನೊಳೇಕವೆನಿಸಿ ತೋಱುವೆ. || ಪಲ್ಲವಿ ||

ಪೊಳೆವ ಪೊಂಬರಿಗೆ ನೊಸಲಪೊಗರೊಗುವ ಸುಣ್ಗಲ್ಲದ
ಮೊಳೆನಗೆಯ ಮುಕ್ಕುಳಿಪ ಮುದ್ದು ಬಾಯ್ದೆಱೆಯ
ಪೊಳಪುವಡೆದ ತಾವರೆಯ [1]ಪೋ[1]ಲ್ವ ಬಗಸೆಗಣ್ಗಳ
ಕಳವಳಿಪ ಬಟ್ಟಮೊಗದ ಗಾಡಿಕಾಱಱೆಯನಂತೆ || ೧ ||

ಗೆರೆಗೊಂಡ ದುಂಡುಗೊರಲ ಕಣ್ಣವಿಡಿದ ಕಂದದ
ಸುರತರು ಶಾಖಿಗೀಡೆನಿಪ ಸೊಗಸುದೋಳ್ಗಳಾ
ಪಿರಿಯ ಪೊಂಗದಪಿನಂತೆ ಬಿತ್ತರವಡೆದೆರ್ದೆಯ
ಕರಮೆಸೆವ ಮೆಯ್ಸಿರಿಯ ಗಾಡಿಕಾಱಱೆಯನಂತೆ || ೨ ||

ಕಂಡರಿಸಿದಂತೆವೊಲು ಕಂಗೊಳಿಪ ತೊಡೆಯ ಪೊನ್ನ
ಚೆಂಡನಂಡಲೆದು ಮೆಱೆ[ವಾ] ಜಾನು ಬಿಂಬದ
ಚಂಡಿಪ ಮೂಱುರಾಯರ ಗಂಡವೆಸರಿನ ಪಾದ
ಪೆಂಡೆಯವಡೆದೆಸೆವ ಪೆಂಪುಗಾಱಱೆಯನಂತೆ. || ೩ ||

---

[1] ಸೋ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ಈ ಎರಡನೆಯ ತ್ರಿಪದಿಯೊಳ್ ಮುಂ ತಾನೆಣಿಸಿದಂತೆ ಕಣ್ಬೇಟದೊಳ್ತಣಿದು ಅವನ ಕಟಾಕ್ಷವೀಕ್ಷಣಾಲೀಲೆಗಳಂ ಕಂಡಿರ್ದುಂ ಕಡುನೇಹದಿಂದಳವಳಿದು ಈ ಭಾವಂಗಳೆನ್ನೊಳೊಲ್ಮೆಯಿಂದಮೊ ಸಾಜದಿಂದಮೊ ಸಂದೆಯದೊಳ್ನೊಂದು ನುಡಿವಳ್.

ರಾಗ : ಘಂಟಾರವ

ಇನಿಯನನುವನೇನೆಂದೆಣಿಪೆನೇಗೆಯ್ವೆ ಇಂತು
ನೆನಹಿನುಯ್ಯಲನೇಱ ನೆಲೆಗಾಣದೆ...ನಯುಮನ || ಪಲ್ಲವಿ ||

ಬೆಳೆವ ಬೇಟದ ಪೊಸಬೇರ ನಲಿದ ದಿಟ್ಟಿ
ಒಳು ನೋಟದ ಚೆಲ್ವಿನೋಜೆಯಿಂತೊ
ಮೊಳೆದೋಱುವ ನೇಹದ ಪೊಗರೆ ನಲಿದೆ ಮೋಡಿ
ಎಳವರೆಯದ ಸಿರಿಯೋಳಿಗೆವೆತ್ತುದೊ. || ೧ ||

ಕೊನರ್ವಮನ ಮೆಚ್ಚಿನ ಕುಡಿಯವೊಲಿದೆ ಕೊರ್ಬು
ಘನದೇಹ ಗಂಡುಗಲೆ ಗಱುಗಟ್ಟಿತೊ
ನನೆದೋಱುವ ನೇಹದ ನಱುಗಂಪೊಲಿದೆನಗೆ
ಬಿನದದುಜ್ಜುಗವಿಂತು ಬಿತ್ತರವಡೆದುದೊ. || ೨ ||

ಫಲವಹ ಮನೋರಥದೆಳೆ [1]ಮಿಡಿಯವೊಲಿದೆ ಗೆಲವು
ಕಲಿತನದಹಮ್ಮಿನ ಕಾಳಾಟವೊ ಕಳಿವ
ಣ್ದಾಳ್ವ ಯತ್ನದ ಕಗ್ಗಾಯೊಲಿದೆ ತವಕ
ನೆಲೆಯುತ್ಸಾಹದ ಶಕ್ತಿ ನಿಮಿರ್ದು ಸಿಟ್ಟಿಸಿದುದೊ. || ೩ ||

ಈ ಮೂಱನೆಯ ತ್ರಿಪದಿಯೊಳ್ ತನ್ನೊಳ್ತಾಂ ಚಿಂತಿಪುದಱಿಂ ತೀರದ ವಿರಹ ಸಂತಾಪಮಂ ತೀರಿಸೆಂದು ಕೆಳದಿಗಱುಹುವಳ್.

ರಾಗ : ಕಾಂಬೋಧಿ

ಕಾಣದಿರಲಾಱೆನೆ ಮೋಹನ ಕಾಯನ
ಜಾಣರೆಱೆಯನ ತೋಱು ಚಲುವರಾಯನ|
ಮುದ್ದು ಚನ್ನರಾಯನಾ
ಚಿಕದೇವರಾಯನಾ || ಪಲ್ಲವಿ ||

[1] ಮ (ಖ).

Dr. Urmila Sharma Collection, Varanasi

CC0. In Public Domain, Digitizagtion by eGangotri

ಅವನ ನೋಡಿದಂದು ಮೊದಲಾಸೆ ನೆಟ್ಟಿದೆ
ತವಕದಿಂದ ಪೊಸತೊಂದು ದಾರಿ ಪುಟ್ಟಿದೆ
ಅವರಿವರಂತಲ್ಲ ಬಗೆಯಂದಗೆಟ್ಟಿದೆ
ಬವಣೆಗೊಳಿಪೆನೆಂದು ಮೋಹ ಪಂತಕಟ್ಟಿದೆ. ॥ ೧ ॥

ನರಪತಿಯ ಬಯಸಿ ನಾಡ ನಟಣೆಗುಂದಿದೆ
ತರವಱಿಯದಾಸೆಯಿನಿತಕ್ಕೆ ತಂದಿದೆ
ಧರೆಯೊಳಾರು ಪಡದ ಪಾಡು ತನಗೆ ಬಂದಿದೆ
ಕೊರಗಿಸುತ ಕೊಲ್ಲದ ಕೊಲೆಯ ಕೊಂದಿದೆ. ॥ ೨ ॥

ಜನಜನಿತವಾಗಿ ಎನ್ನ ಜಾಣ್ಮೆ ಜಾಱಿದೆ ಅ
ವನ ನೆನೆನೆನೆದು ತನಿಸೊಕ್ಕು ನೆತ್ತಿಗೇಱಿದೆ
ಮನವ ತಡೆಯಲಾಱೆನಿನ್ನು ಮಟ್ಟು ಮೀಱಿದೆ
ಎನ್ನಿನಿಯ ಚಿಕದೇವೇಂದ್ರಗೆ ತನುವ ಮಾ[1]ಱಿದೆ. ॥ ೩ ॥

ಈ ನಾಲ್ಕನೆಯ ತ್ರಿಪದಿಯೊಳ್ ತೆಲುಂಗ ಕೆಳದಿಯೋರ್ವಳ್ಗೆ ತನ್ನ ಸಂತಾಪಾತಿಶಯಮಂ ತಿಳುಪುವಳ್.

ರಾಗ: ಘಂಟಾರವ

ಏಮಿ ಶೇಯುದು ನೇಮಿಯಂದು
ಅಯ್ಯಯ್ಯೋ ಇಂಕಾ ಎಟುಲದಿಟವು ಚೇಸುಕೊಂದು.
॥ ಪಲ್ಲವಿ ॥

ಈಮೆಸು ಯೇರೀತಿನಿ ಕಾಚುಕೊಂದು ನೇಮಂದು ನನಕ (?)
ಈವಗಲ ನೊಗಲುಚುನುಂದು
ಈಮನಿ ಪ್ರಾಣಮು ಪಟ್ಟಿಯುಂದುನಮ್ಮಮ್ಮ ಚಾಲು
ಇಂದುಕು ನೇನೆಟ್ಟು ವೊಜ್ಜ್ಜಕೊಂದು ॥ ೧ ॥

ಏವಿದ ಮುನವಚ್ಚೆ ಈರಂತು
ಇಂದುಕು ನೇದಿ ವುಪಾಯಮು ಮದಿದಲಂತು
ಎವರಿತೊನಿಂಕ ನಿವೇಂತು
ನಾ ಭಾಗ್ಯಮು ಇಂಕ ನೇಮನಿವಿನ್ನವಿಂತು ॥ ೨ ॥

---
[1] ಬ ಱು).

Dr. Urmila Sharma Collection, Varanasi

CC0. In Public Domain, Digitizagtion by eGangotri

ಎನ್ನಾಳ್ಳು ನಿಟುವಲೆನುಂದು
ಊರಿವಾರಿಚೆ ಈವಗಲ ಮಾಟಲೆಟ್ಲು ಎಂದು
ಎನ್ನಡಿಕ ಚಿಕದೇವೇಂದ್ರನಿ ಪೊಂದು
[1]ನೆಡಬಾಯಕಯೆ[1] ನೂಡಿಗಮು ಜೇಯುಚುಂದು || ೩ ||

ಈ ಐದನೆಯ ತ್ರಿಪದಿಯೊಳ್ ಶೋಕಪಾರವಶ್ಯದಿಂ ಮುಂಪ್ರಸ್ತುತಮಾದ ತೆಲುಂಗ ವಾತಿಂದಮೆ ಈ ನಿನ್ನೂಳಿಗಂ ದೊರೆಕೊಳದ ತನ್ನಂ ಸೃಜಿಸುದುದೆ ಬಱಿದೆಂದು ತನ್ನಿಷ್ಟ ದೇವತೆಗೆ ಬಿನ್ನಪಿಸುವಳ್.

ರಾಗ: ಮಧುಮಾಧವಿ

ಆಡುಬುಟ್ಟು ಬುಟ್ಟಿಂಪಕುರಾ ಅಯ್ಯೊದೆಯ್ವಮಾ
ಈಡನೆ ಪಾಸುವು ಪಾಲ್ಲೈ ಯೀವಲ ಈಡುನನಿಟ್ಟೆ || ಪಲ್ಲವಿ ||

ಗಡಿಯ ಎನ್ನೋಯುಗ ಮುಲ್ಯೆ, ಗಡುಪುಚು ಅಲಸಿಸೊಲಸಿ
ವೊಡಲಿ ತಾಪಮು ಜೇಯ್ಯ ನುಸುರುಸುರಸುಚು
ಪಡಕಲೊ ಪೊರಲು[2]ಚು ನಿಂಡು ಪಂಡುವೆನ್ನಲ ಚಿಚ್ಚುಲ
ನುಡುಕುಚು[3][ವೆಚ್ಚ][3] ಬಡಚು[4]ಸುಂ[4]ಡವಶಮಾ ದೈವಮಾ
|| ೧ ||

ಒಕರಿತೋನ ಮಾಟಾಡಕ ಉಂಡಿನ ಬಾ(?)ಟನುಂಡಕ
ವೆಗಟೈ ಇಲನೇಸಂದರಿಕಿ ಎಂತದಾನನ್ಯೆ
ಎಗಸಕ್ಯ ಮುಲಕುಲೋನ್ಯೆ ಏಮೇಮೊ ಮದಿಸೆಂಚುಕೊ
ವೊಗಯೆಂದು ನಿನುಪೊಂದಕ ಉಂಡವಶಮಾ ದೈವಮಾ
|| ೨ ||

ಚೆನ್ನುಲ ನೆಮ್ಮದಿನಿ ಚಿಕ್ಕದೇವೇಂದ್ರುನಿಗೂಡಿ
ಕನ್ನುಲದೆಱಿಚಿ ಎದುಟ ಕಾನಕನಪುಡು
ಕನ್ನೀಟದೊಪ್ಪದೋಗುಚು ಮಿನ್ನೆವೊರಗಿ ಪೈಬಡಿನಟ್ಟೆ
ಎನ್ನಾಳ್ಳನಿಟುಲ ವೇ[5]ಗಿಂ[5]ಚ ವಶಮಾ ದೈವಮಾ. || ೩ ||

---

[1] ಯಿಡಬಾಯೆಯಿ (ಕ) (ಅ).
[2] ವು (ಖ).
[3] ಮಚ್ಚಿ (ಕ, ಖ, ಅ).
[4] (ಖ) ದಲ್ಲಿ ಲುಪ್ತ.
[5] ಶಿ (ಖ).

Dr. Urmila Sharma Collection, Varanasi

CC0. In Public Domain, Digitizagtion by eGangotri

೬. ಈ ಆಱನೆಯ ತ್ರಿಪದಿಯೊಳ್ ಕೆಳದಿಯುರಂ ಮೊಗನೋಡುತ್ತೆ ತನ್ನಿಷ್ಟ ದೇವತೆಯೊಳ್ ನೊಂದು ನುಡಿದ ತನ್ನಿರವಂ ಕಂಡು ಮಱುಗಿಯೊಡಂಬಡಿಸಿ ಕೇಳ್ವ ಕೆಳದಿಗೆ ತನ್ನ ಸಂತಾಪೋದ್ರೇಕಮಂ ತಿಳುಪುವ ಶೆಱಸನಿತಱೊಳುಂ ತಿಳುಪುತ್ತು[1]ಮಿರಲುಂ[1] ಸೂಚನಾಮಾತ್ರಮೆ ಇದ್ದುದಸಿರ್ದಂತೆ ತಿಳುಪುವುದರಿದೆಂದು ಪೇಳ್ವಳ್.

ರಾಗ: ಘಂಟಾರವ; ತಾಳ: ಝಂಪೆ

ಏವೆಯೆನ್ನೆದೆಯಿರವನೆಂತು ನಿನಗಱುಹುವೆ
ಏವಾತಿನಿಂದೊರೆವೆ ಯೇತೆಱದಿ ವಿವರಿಸುವೆ
ಏವಗೆಯ ವೇದನೆಯನಿದಕೆ ಪಡಿಯಿಡುವೆ || ಪಲ್ಲವಿ ||

ಕಂತುಶರಹತಿಗೆನ್ನ ಕಾಯಕಂಪನಗೊಂಡು
ನಿಂತೆಡೆಯ ನಿಲಲಳುಕಿ ನೆಗ್ಗೊತ್ತಿದೆ
ಚಿಂತೆಯೊಳು ಪಲವಗೆಯ ಚಿತ್ರವನು ಬರೆಬರೆದು
ಸಂತಾಪದಿಂ ಧೈರ್ಯ ಸರಿವುತ್ತಿದೆ
[2]ಕುಂತವೆರ್ದೆಯನು ಡೋಱುಗೊಱದಂತೆ ಮನ ತನ್ನ
ಪಂತವಳಿದೊಡನೆ ಪರವಶಗೊಳುತಿದೆ
ಇಂತಿರುವ ಎನಗೆ ಬಂದೆಡರಿದೇನೆಂಬ
ವೃತ್ತಾಂತವೆ ತಿಳಿಯದೆ ಮಾಯವಕಟಕಟಾ || ೧ ||

ಒಗುವ ಕಂಬನಿಯ ಜಿಡದೊದವಿಬಹ ನಿಟ್ಟುಸಿರ
ಸೆಗಳಿಕೆಗೆ ಕಣ್ಬಾಯಿ ಸೀವುತ್ತಿದೆ
ಪೊಗೆ ಸುತ್ತದೊಂದಿನಿಸು ಪೊತ್ತೆನದೆ ಕಿಡಿಗೆದಱ
ಬಗೆಯೊಳಂಗಭವಾಗ್ನಿ ಬಳೆವುತ್ತಿದೆ
ಭುಗಿಲನೆಳ್ದೊಮ್ಮೆಮ್ಮೆ ಪೊತ್ತಿಪೊಱಪೊಣ್ಮೆ
ಒಗುಮಿಗೆಯೊಳುರಿ ಲಳಿಮಸಗಿ ಮಿಾಱುತ್ತಿದೆ
ಯುಗವಾಗಿ ತೋಱುತ್ತಿದೆ ಒಂದೊಂದು ನಿಮಿಷಮು
ಬ್ಬೆಗದ ಬಿಱುಬಸದೆಂತು ಬಿತ್ತರಿಪೆನಕಟಾ || ೨ ||

[1] ತ್ತು ಮಿರವುಂ (ಖ).
[2] ಕು (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ಎ[1]ೞ[1]ಯ ಚಿಕ್ಕದೇವೇಂದ್ರನೆಸಿ ಲಾಲಿಸಿ ನೆರೆದ
ತೆೞಸನೆ ನೆನೆನೆನೆದು ಬಗೆ ದಿಗುಲೆಸುತ್ತಿದೆ
ಬೆೞಗುವಡದರೆಗಳಿಗೆ ಬೆಚ್ಚಿ ಬೇಗುದಿಗೊಂಡ
ಕೞಗೆಂಡದೊಳು ನಿಂದ ತೆೞನಾಗಿದೆ
ಅೞಮರುಳಿನಿಂದೊಂದು ತೆೞವುಗಾಣದೆ ತನುವ
ತೊೞೆಯಲಾೞದೆ ಬೞದೆ ತೊಳಲುತ್ತಿದೆ
ಮೞವೆಯೊ ವೀರಮನ್ಮಥನಾಜ್ಞೆಯೊ ಮನದ
ಮೞುಕವೊ ತಿಳಿಯದೆ ಮಾಯವಕಟಕಟಾ || ೩ ||

೭. ಈ ಏಳನೆಯ ತ್ರಿಪದಿಯೊಳ್ ಇಂತು ಸಂತಾಪಂ ಬಡಿಸಿ ಕಾಂತನೊಳ್ತನ್ನ ಮನದಳಲಂ ತೀರಿಸುವ ತೆೞನಂ ಪೇಳ್ವಳ್.

ರಾಗ : ಕಾಂಬೋಧಿ

ಆಗಲಾಗಲಾಗ[2]ಲದ[3]ಕೇನು ಕೈ
ಲಾಗದೊಳೆಂದೆನ್ನ ಕಡೆಗಾಣಿಸಿದನ್ಯೆಸೆ || ಪಲ್ಲವಿ ||

ಅಗಣಿತ ಪುಣ್ಯೋದಯದೊಳೆಂದಾದರು
ಬಗೆಗಾೞನ ಬಳಿ ಸೇರಸೆ ಸೆರೆ
ಬಿಗಿ[3]ವ್ ಕುಚದ ಬಿಣ್ಪು ಬೆಲೆಯೇೞ ಬಿಡದೊತ್ತಿ
ಬಿಗಿಬಿಗಿದಮರ್ದಪ್ಪಿ ಬೆಂಡೇಳಿಸದೆ ಬಿಡೆ || ೧ ||

ಮುದದೊಳವನ ಮುದ್ದುಮೊಗದಿ ಮೊಗವನಿಟ್ಟು
ಮುದ್ದಿಸಲಸುವಾಗೆನೆ ಎ
ನ್ನೆದೆಯ ನಳ್ಳಿೞವಾಡವೆಲ್ಲವಡಗುವಂತೆ
ಕರ್ದುಕಿ ಕರ್ದುಕಿ ಮಿಗೆ ಗಾಸಿಗೈಯದೆ ಬಿಡೆ || ೨ ||

ಎನ್ನಾಳ್ದ ಚಿಕದೇವೇಂದ್ರ ಗೋಪಾಲನ
ಚೆನ್ನ ಸೆಜ್ಜೆಯನೊಮ್ಮೆ ಸೇರಸೆ[4] ಅಂ
ದೆನ್ನ ಮನಸಿನಳವೆಲ್ಲ ತೀರುವಂತೆ[4]
ಬಸ್ನವಡಸಿಮಿಗೆ ಬಸವಳಿ[ಸದೆ] ಬಿಡೆ. || ೩ ||

---

1 ಳೆ (ಖ).
2 (ಕ) ದಲ್ಲಿ 'ಲಾಗ' ಎನ್ನುವುದು ಬಿಟ್ಟುಹೋಗಿದೆ.
3 ದ (ಕ).
4 (ಕ) ದಲ್ಲಿ ಲುಪ್ತ.

Dr. Urmila Sharma Collection, Varanasi

CC0. In Public Domain, Digitizagtion by eGangotri

೩. ವಿರಹಿಣಿಯರ ವಚನಪ್ರಕಾರ ಸಪ್ತಪದಿ

ಇಂತು ಮೂಱನೆಯ ಸಪ್ತಪದಿಯೊಳ್ ವಿರಹಿಣಿಯರ ವಚನ ಪ್ರಕಾರಂಗಳಂ ಪೇಳ್ವರ್. ಅದಱೊಳೊರ್ಮೊದಲ ತ್ರಿಪದಿಯೊಳ್ ಮುಗುದೆಯ ನೊಡಂಬಡಿಸುವ ಕಾಂತನಿಗೆ ಅಂತರಂಗದೊಳ್ ಸಹಾಯಮಾದ ದೂತಿ ಬಹಿರಂಗದೊಳಾ ಮುಗುದೆಗೆ ಸಹಾಯಮಾಗಿ ಅವಳ ಸಂಮೊಗದೊಳೆ ಕಾಂತನೊಳ್ತಪ್ಪಂ ಪೊಱಿಸಿ ನುಡಿವ ನೆವದಿಂ ಕಾಂತೆಯರೀ ತೆಱದಿಂ ನಡೆಯವೇಳ್ಕು ದೆಂಬುದಂ ತಿಳುಪಿಯವಳ ಬಿಗುಹಂ ಬಿಡಿಸುವಳ್.

ರಾಗ: ಭೈರವಿ

ಮುನಿವುದುಚಿತವೇಸಯ್ಯ ಮುನಿಸುಮೋಹ |
ದಸುವ ತಿಳಿಯುದವಳೀ ಎಳೆವೆಣ್ಣಿನೊಳು || ಪಲ್ಲವಿ ||

ಸುಗುಣ ನಿನಗೆ ಮಿಗೆ ಸೋಲ್ತಳೆಂಬುದಲ್ಲದೆ
ಮುಗುದೆಯ ಮೊಗದೊಳು ಮುಂಗುರುಳು ಕೂಡದಿನ್ನು
ಬಿಗುಹ ಬಿಡುವ ದಿನವೆ
ಬಿಗುಹ ಬಿಟ್ಟು ಬಗೆಯ ತಿಳಿವ ದಿನವೆ
ಬಗೆಯ ತಿಳಿದು ನಗುತ ನಾಣ್ಬುತೊಯ್ಯನೆ ಸೈಗರೆವ ದಿನವೆ
|| ೧ ||

ಚೆಲುವರಸ ನಿನಗೊಲಿದಳೆಂಬುದಲ್ಲದೆ
ಮೊಳೆವು[ರೊ]ೀಜಂಗಳಿನ್ನು ಮೋಹರಿಸದು ತನ್ನ
ಚಲವನುಳಿವ ದಿನವೆ
ಚಲವನುಳಿದು ಮೆಯ್ವಳಿಗೆ ಬರುವ ದಿನವೆ ಮೆ
ಯ್ವಳಿ ಬಂದು ನಲಿದು ನಲವೇಱುತ ನಲ್ಲಱುವ ದಿನವೆ || ೨ ||

ಚಿಕದೇವೇಂದ್ರ ನಿನಗೆ ಸಿಕ್ಕಿದುದಲ್ಲದೆ ಪೆ
ಣ್ಮಕ್ಕಳುಗಳೊಡನಾಟ ಮೆಯ್ಮಱಸದು ಇನ್ನು
ತಕ್ಕುದನಱುವ ದಿನವೆ ತಕ್ಕುದನಱುತು ಮೇ
ಲಿಕ್ಕಿ ಮೋಹಿಸುವ ದಿನವೆ ಮೋಹಿಸಿ ನಿನಗೆ
ದಕ್ಕಿದೆ ಸಿಕ್ಕಿದೆನೆಂದು ತವಕಗೊಂಬ ದಿನವೆ || ೩ ||

Dr. Urmila Sharma Collection, Varanasi

CC0. In Public Domain, Digitizagtion by eGangotri

೨. ಈ ಎರಡನೆಯ ತ್ರಿಪದಿಯೊಳ್ ಪ್ರಾಣಕಾಂತನನೊರ್ಮೊದಲಗಲ್ದ ಮುಗಡೆಯ ವಿರಹಾರಂಭಮಂ ಕಾಂತನೊಳ್ಪೇಳ್ವಳ್.

ರಾಗ : ಗುಂಮಕಾಂಬೋಧಿ

ಪೇಳಿದೆನು ಮಾಯವೆಂದು ಬೆಸಗೊಂಬಳೆಮ್ಮ ಆಯಿ
ತೇಳು ವಿರಹವೇದನೆಯಿರವಱಿಯದೆಳೆವೆಣ್ಣ
ಆಳುತನಗೊಳಿಸದೆ ಅಂಡಲೆವಡಿಸುವುದಂದವೆ || ಪಲ್ಲವಿ ||

ಬೆಡಗಿ ನೆರೆಯೂರ್ಗೆ ಪೋಗಿ ಬೇಗ ಬಹೆನೀಪರಿಯ
ಮಿಡುಕದಿರೆನುತ ತಲೆದಡಹಿ ಮನಕರಗಿ ಪೊಡ
ಒಡಿಸಿ ಕಂಬನಿಯನೊಡನೆ ಸಿರಿಗೈಗೊನೆಯಿಂ
ತೊಡೆದನಂದಿಂದ'ಳು[1] ಕಣ್ಗಳು ತೊಱೆದವು ನಿದ್ದೆಹಂಬಲ
|| ೧ ||

ಜನನಿ ಬಸವಳಿಯದಿರು ಜಾವಕ್ಕೈತರುವೆನೆಂದು
ಕವಿದು ಮೊಗವ ಮೊಗದೊಳಿಟ್ಟು ಕದುಬುಗೊಂಡೌಂಕಿ
ಸಪದಂಬುಲವೂಡಿ ಕೂಡಿ ಸವಿಯೇಱಿದೆನ್ನ ಬಾಯ್ದೆಱೆಯ
ಸವಿದು ಹೋದನಂದು ಮೊದಲು ಸವಿ ಸಪ್ಪೆ ತಿಳಿಯದವೆ
|| ೨ ||

ದಕ್ಕುಗಾತಿ ಸೊಕ್ಕದಿರು ಗಕ್ಕನೈತರುವೆನೆಂದು
ಚಿಕ್ಕದೇವರಾಯನೆನ್ನ ಸೆಳೆದು ಬಿಗಿಬಿಗಿದು
ತಕ್ಕೈಸಿ ಪೋದನಂದು ಮೊದಲು ತಣ್ಪಿನ ಪೊಲಬುಗಾಣೆ
ನುಕ್ಕುವ ಬೆಳ್ದಿಂಗಳೊಳು ಉರಿಯೆದ್ದು ಮಸಗುವುದು || ೩ ||

೩. ಈ ಮೂಱನೆಯ ತ್ರಿಪದಿಯೊಳ್ ವಿರಹಿಣಿಯಿರವಂ ಕಾಂತನೊಳ್ ಬಿನ್ನವಿಸುವಳ್.

ರಾಗ : ಮಧುಮಾಧವಿ

ಸಾಱಿದೆನಾಡಿದ ಪರಿಗೆ
[ಸಾಱಿ] ಬಂದಂತೆಯಿನ್ನು ದೇವರಿಗೆ || ಪಲ್ಲವಿ ||

---

[1] (ಖ) ದಲ್ಲಿಲ್ಲ.

Dr. Urmila Sharma Collection, Varanasi

CC0. In Public Domain, Digitizagtion by eGangotri

ನುಡಿದರೆ ನಿಜವೆನಿಸಿರದು
ನುಡಿವೆನಾದರು ಮೇಲ್ವರಿದು
ತಡಮಾಡಲಿನ್ನು ತಾಳಿ ಬರದು
ತರುಣಿಯ ಕಳಂಕ ಪಿರಿದು. ॥ ೧ ॥

ಬನ್ನಣೆ ಮಾತುಗಳೆನ್ನೊಳಿಲ್ಲ
ಬರೆ ಕಲ್ಲಮೇಲೆನ್ನ ಸೊಲ್ಲ
ಇನ್ನು ತರಹರಿಸ ಸಲ್ಲ
ಈ ಹೆಣ್ಣು ಲೋಗರಂತಲ್ಲ. ॥ ೨ ॥

ಚಿಕದೇವೇಂದ್ರ ತಕ್ಕಿಗಾಟಿ
ಜೀವಗ[ಳ್]ಯಲ್ಲ ನೀಟಿ
ಮಿಕ್ಕುದೇನು ಒಲಿಸದಿರೆ
ಮೇಲಣ ಕಜ್ಜ ಬೇಟಿ ಬೇಟಿ ॥ ೩ ॥

೪. ಈ ನಾಲ್ಕನೆಯ ತ್ರಿಪದಿಯೊಳಾ ವಿರಹಿಣಿ ನಾಯಕಂ ಬರ್ಪನೆಂದು ಕೇಳ್ದಿಡೆಯೊಳ್ ಪೊತ್ತುಗಳೆವ ಪ್ರಕಾರಮಂ ಪೇಳ್ವೆಳ್.

ರಾಗ : ಬಿಲಹರಿ ; ತಾಳ : ಝಂಪೆ

ಕಳಿದಳೀಪರಿ ಕೆಲವು ಗಳಿಗೆಗಳನು ಆ
ಬಳಿಕಲವಳಿದ್ದರವ ಬಣ್ಣಿಸುವೊಡಳವಲ್ಲ ॥ ಪಲ್ಲವಿ ॥

ತುಡುತುಡುತ ಕೆಳದಿಯರ್ಗೆ ತೋಟು
ತೊಡ ಒಡದೆ ಪೆಟತುಡೆ ತೊಡವುದಳೆದು
ಕೈಪಿಡಿಯೆ [ನೋ]ಡಿ ಸಡಗರದಿ ಸಜ್ಜೆವನೆ
ಸಜ್ಜಾಗಲೆಂದೊರೆದು ಪಾವುಗೆ ವಿಡಿದು
ಕಡೆವಾಗಿಲೊಳು ನಿಂದು. ॥ ೧ ॥

ಕೆಳದಿ ನೋಡುತಿರೆಂದು ಘಳಿಲನೊಳವಂದು ಪರಿ
ಮಳದಣ್ಪು ಕಮ್ಮಲರುಗಳನಿಟ್ಟಿಸಿ
ಇಳಿದವೀಣೆಯ ಮೇಳಗೊಳಿಸಿ ಕೆಲದೊಳಗಿರಿಸಿ
ಕಳರವಂಗಳ ನಿದ್ದೆದಿಳುಪಿ ಪೊರೆವಂದಲ್ಲಿ ॥ ೨ ॥

Dr. Urmila Sharma Collection, Varanasi

CC0. In Public Domain, Digitizagtion by eGangotri

ಹದಮೀಱು ಸಿನ್ನೆಡೆಗಿ ಹರಿಹರಿಸಿ ಕೆಳದಿಯರ
ನೆದೆಗರಸಿ ಘಳಿಗೆಗಳನೆಣಿಸಿ ಬಳಲಿ
ಇಡೆಕೊ ಚಿಕದೇವೇಂದ್ರನಿದೆ ಬಂದನೆಂದೊರೆದು
ಮುದದಿ ಮಣಿಪಾವುಗೆಯ ಮುಂದಿಟ್ಟು ಮೋಹಿಸುತ || ೩ ||

೫. ಈ ಐದನೆಯ ತ್ರಿಪದಿಯೊಳ್ ವಿರಹಸಂತಾಪಮಂ ತಾಳಲಾಱದೆ ಹಱುವೆಣಿಸಿದ ವಿರಹಿಣಿಯ ಬಗೆಯಂ ಪೇಳ್ವೆಳ್.

ರಾಗ: ಯರಕಲಕಾಂಬೋಧಿ; ತಾಳ: ಝಂಪೆ

ಅವಳ ಕಡುನೇಹದೊದವಳ ಮೆಲ್ಲೆದೆಯ ಪದ
ವಾರಾರುಮಱಿವೊಡರಿದರಿದು
ಮೇಣವರವರ ಮನದಿರವನಾರಯ್ದು ತಿಳಿವ ಬಗೆ
ಯಾಳಿದವರಡಿಗಳಿಗೆ ಬಿರಿದು || ಪಲ್ಲವಿ ||

ಸಡಗರದೊಳಿದ್ದು ಕುಳ್ಳಿರುವಳು
ಮುಸುಕಿದ ಕುರುಳ
ಸತ್ವರವಿ ಸಜ್ಜುಗೊಳಿಸುವಳು
ಎಡೆವಿಡದೊಗುವ ಕಣ್ಣೀರ ತೊ[1]ಡೆ[1]ದು ಕಣ್ದೆಱೆದೆಮ್ಮ
ಕಡೆಗೆ ಕಣ್ಗಡೆಯ ಸುಳಿಸುವವಳು
ನಿಡುಸುಯ್ದು ಮೊಗದೆಗೆದು ನಸುನಗುತ ಸೆಜ್ಜೆವನೆ
ಯೆಡೆಯೆಡೆಯೊಳೆಲ್ಲ ಬಳಸುವಳು
ಸಿರಿಯಡಿಯ ಪಾವುಗೆಗೆಱಗಿ
ಕಣ್ಗೊತ್ತಿಯಂಗಳಕೆ ನಡೆವಳೊಡನೆಮ್ಮ ನಳಿಸುವಳು || ೧ ||

ಒಸೆದು ಪನ್ನೀರೆಱೆದು ಬೆಳೆಸಿದೆಳೆ ಮಾಮರನ
ನೊಲಿದು ಕಣ್ದಣಿಯ ನೋಡುವಳು
ಅದಱ ಬೆಸುಗೆಯೊಳು ಪರ್ಬಿ ಪಡಲಿಡುವ
ಮೊನೆ ಮಲ್ಲಿಗೆಯ ಪೊಸ
ನನೆಯ ತಿಱಿದು ಸೂಡುವಳು

[1] ರ (ಳ)

Dr. Urmila Sharma Collection, Varanasi

CC0. In Public Domain, Digitizagtion by eGangotri

ಎಸೆವ ನೆಲೆಯುಪ್ಪರಿಗೆಯೇಱಿ ಸೋಗೆಯ
ಮಱಿಯನೆತ್ತಿ ಮಿಗೆ ಮುದ್ದುಮಾಡುವಳು
ತುಂಬುವಸುಱಿಸೆರಳೆಯ ನೋಡಿ ಮಱುಗಿ
ಒಡಲಮರ್ದಪ್ಪಿ ಬಿಸುಸುಯ್ದು ಬಳಲಿ ಬಾಡುವಳು || ೨ ||

ಅರಸಂಚೆವಱಿಯ ತಲೆದಡಹಿ ಗುಟುಕಿತ್ತು
ಮನಗರಗಿ ಕಂಬನಿಯ ಪರಿಸುವಳು
ಮೇಣರಗಿಳಿಯ ನುಡಿಸಿ ಮುಂಡಾಡಿ ತೆನೆಯೂಡಿ
ಕೆಲಕಿರಿಸಿ ಬದುಕೆಂದು ಪರಸುವಳು
ಇರದೆ ಚಿತ್ರದ ಪಟವನೆ[1]ವೆ[1]ಎಡದೆ ನೋಡಿ
ತನ್ನ ದೆಸಜ್ಜೆವನೆಯೊಳಿರಿಸುವಳು
ಭಕ್ತಿಭರದಿ ಚಿಕದೇವೇಂದ್ರಪದವೆಗತಿ
ಯೆಂದು ನಿರ್ಭರದಿ ಪೊಸನೇಮವೆರಸುವಳು || ೩ ||

೬. ಈ ಆಱನೆಯ ತ್ರಿಪದಿಯೊಳ್ ಆ ವಿರಹಿಣಿಯರ ಸಂತಾಪಾತಿಶಯಮಂ ಪೇಳ್ವೆಳ್.

ರಾಗ : ಆಹರಿ ; ತಾಳ : ಝಂಪೆ

ನೋಡಕೂಡದು ಪಡುವ ಪಾಡುಗಳನು
ಬೇಗ ದಯಮಾಡು ಚಿಕದೇವೇಂದ್ರ ಮನವ ಬಿಗಿವಿಡಿಯದಿರು
|| ಪಲ್ಲವಿ ||

ಪೂಸಿಪನ್ನೀರಸುರೆ ಬೀಸಿ ತಣ್ಪೇಱಿಸಿದ
ಪಾಸಿನೆಳದಳಿರವಳ ಮೈ ಸೋಂಕಿಗೆ
ಬೇಸಗೆಯ ತಱಿಗೆನಿಸಿ ಬಿಸುಸುಯ್ಯೊಳುರಿಮಸಗಿ
ಮೋಸದೊಳು ಕೆಳದಿಯರ ಮೊಗ[2]ದೆಗೆಯಿ[2]ಸುವುದಕಟ || ೧ ||

ಪೊರೆಯೆತ್ತಿದೇಳಿಲೆಯ ಪೊಸವಾಳೆಗಂಭದೊಳ
ಗಿರಿಸಿ[3] ಬಱಿಕಾಲ ಕಲ್ಪರಗಳವಳ
ವಿರಹದುರಿಯೊಳು[3] ಬಿಸು[4]ಪು[4]ವೆತ್ತ ಕುಚಕುಂಭದೊಳು
ಪುರಿದರಳವೋಲಂ ಸಿಡಿದು ಪುಡಿಯೆನಿವುದಕಟ || ೨ ||

---

[1] ಲೀ (ಕ)
[2] ಮೆದಿಗೆ (ಕ) (ಅ).
[3] ಯೆಸೆವ ಜೊನ್ನದೊಳು ತಣ್ಪೇಂದ (ಕ) (ಅ).
[4] ಟು (ಖ).

Dr. Urmila Sharma Collection, Varanasi

CC0. In Public Domain, Digitizagtion by eGangotri

ಸಸಿಗಲ್ಲ ಒಟ್ಟಲೊಳು ಸರಿಗಪ್ಪುರವ ಬೆರಸಿ
ಎಸೆವ ಜೊನ್ನದೊಳು ತಣ್ಪೇಱುದಣ್ಪು
ಒಸರ್ವ ಕಣ್ಣೀರು ಸಿಡಿದೊಡಸೊಡನೆ ಭೋಂಕನುರಿ
ಮಸಗಿ ತಳಮಳಗು[1]ದಿ[1]ದು ಬಸಿಱು ಪಾಯ್ವುದಕಟ || ೩ ||

೭. ಈ ಏಳನೆಯ ತ್ರಿಪದಿಯೊಳ್ ಆ ವಿರಹಿಣಿಯರ ಸಪಾರವಶ್ಯದ ನುಡಿಗಳಂ ಕಾಂತಸೊಳ್ ಪೇಳ್ವಳ್.

ರಾಗ: ಘಂಟಾರವ, ತಾಳ: ಝುಂಪೆ

ಮಱುಕವಾತನು ಕೇಳಿ ಮನವಿಡಿಯಲಳವಲ್ಲ
ಪಱುವುದೋಱದ ಮುನ್ನ ಪರಿಪಾಲಿಪುದು ಲೇಸು || ಪಲ್ಲವಿ ||

ಅಱಿತು ಅಱಿಯದೆ ಮಾಡಿದಪಚಾರವೆಲ್ಲವನು
ಮಱೆತೆಸಂದೊರೆದೆನ್ನ ಮನ್ನಿಸೆಂದು
[2][ಒ][3]ಱಿಯೆ ಕಣ್ಣೀರು ದನಿಯೊಡೆಯೆ ಚಿತ್ರದಪಾದ
ಕೆಱಗಿ ಮಣಿದಿದ್ದ ಮೊಗವೆತ್ತದುಸಿರುವ ಫಲವು || ೧ ||

ಅರೆಸೋಂತು ಮುನ್ನ ನಿನ್ನಡಿಯ ಸೇವೆಯನುಳಿದು
ಪರಿಯಲಿರುವೆನ್ನ ಹಂಬಲನೆ ಮ[3]ಱೆ[3]ತು
ಸಿರಿಮೆಯ್ಯನಾದರದಿ ನೇಮವಡಿಸುವುದೆಂದು
ಕರಗಳನು ಮುಗಿಮುಗಿದು ಕಾತರಿಸಿ ನುಡಿವ ಫಲ || ೨ ||

ಸಿರಿಯೊಡಲ ಗುಣದೊಡನೆ ಸಿರಿವಗೆಯ ಗುಣವೆರಸಿ
ಸ್ಥಿರವೆನಿಸಿ ಬಾಳ್ವ ಚಿಕದೇವೇಂದ್ರನ
ಚರಣದೂಳಿಗವೆನಗೆ ಜನ್ಮಜನ್ಮಂಗಳೊಳು
ದೊರೆಗೊಳಿಸುಗೆಂದು ಸಂತೋಷದೊಡನೊರೆವ ಫಲ || ೩ ||

ಮುಂತಣೆರಡುಂ ಸಪ್ತಪದಿಗಳೊಳ್ ಶ್ರೀ ಚಿಕದೇವ ಮಹಾರಾಯಂಗೊಲಿದ ಕಾಂತೆಯರ ವೃತ್ತಾಂತಮಂ ಪೇಳ್ವರ್.

---

[1] ಡಿ (ಕ).
[2] ಪೊ, ದೊ (ಕ) (ಖ).
[3] ರ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

೪. ಚಿಕದೇವ ಮಹಾರಾಯನ ವೃತ್ತಾಂತ ಸಪ್ತಪದಿ

೧. ಈ ನಾಲ್ಕನೆಯ ಸಪ್ತಪದಿಯೊಳಾಕಾಂತೆಯರ್ಗೆ ಪ್ರಾಣಕಾಂತನಪ್ಪ ಶ್ರೀ ಚಿಕದೇವಮಹಾರಾಯನ ವೃತ್ತಾಂತಮಂ ಪೇಳ್ವರ್.

ಇದಱೊಳೆರ್ಮೊದಲ ಪಂಚಪದಿಯೊಳ್ ಶ್ರೀ ಚಿಕದೇವ ಮಹಾರಾಯಂ ತನ್ನ ಮನದನ್ನೆಯೊರ್ವಳ ನಾಟ್ಯಮಂ ನಿಟ್ಟಿಸಲೆಳಸಿ ಅವಳ ನಾಟ್ಯಾರಂಭದೊಳ್ ತೆರೆಯೊಳ್ನಿಂದಿರುವ ಒಯ್ಯಾರಮಂ ಒಳಿಕ ಪೊಱಪಟ್ಟು ಚಂದ್ರಗಾವಿಯ ಮುಸುಂಕಿನೊಳ್ ಮಿಸುಗುವ-ಸೊಗಸಂ ತಾಣಕದೊಳ್ನಿಂದ ನಲೆಯಂದಮಂ ನಟನೆಗೆಯ್ವ ಜಟಿಲತೆಯಂ ನಾಟ್ಯಾಂತದೊಳ್ ಬಳಲ್ವ ಬಗೆಯಂ ಭಾವಿಸಿ ಸಂತಸಂದಳೆವರ್.

ರಾಗ : ಮೋಹನ ; ತಾಳ : ಝಂಪೆ

ಕನ್ನೆರನ್ನೆಯ ನಟನ ಕಂಗೊಳಿಪುದೆಂತು
ಕಣ್ಣಪುಣ್ಯದ ಬೆಳಸು ಕೈಸಾರ್ವುದಿಂದು || ಪಲ್ಲವಿ ||

ಪೊಂದೊಡಿಗೆಗಳ ಕಾಂತಿ ಪೊಱನೂಸೆ ತೆರೆಯೊಳಗೆ
ನಿಂದನಳಿತೋಳೊಂದ ನೆಗಹಿ
ಅಂದುಗೆಗಳೊಂದನಡಿಗಡಿಗೆ ನುಡಿಸಿ ಮಿಗೆ
ಸಂದಣಿಪ ಸಭೆಯ ಲೋಚನವ ಸೆಱೆ[1]ಎಡಿ[1]ವ || ೧ ||

ಮಿಸುಗೆ ನಸುನಗೆ[2]ದೋಱೆ[2] ದೆಸೆದೆಸೆಗೆ ಮಸಗೆ ಮಿಗೆ
ಮಿಸುನಿಯೋಲೆಗಳೊಲವು ಮೇಱೆಯೆ
ಮುಸುಕಿನೊಳಗೊನ್ಮೊಮ್ಮೆ ಮೊಗದೋಱೆ ಕಣ್ಗೆಳೆವೆ
ಮುಸುಕ ಮಱೆಯಿಸಿ ಸಭೆಗೆ ಮುದವನೊದವಿಸುವ || ೨ ||

ನಳಿತೋಳನೆರಡನಿಕ್ಕೆಲಕೆ ನೀಡುತ್ತ ಚೆಂ
ದಳಿರಡಿಗಳನೊಂದುಗೊಳಿಸಿ
ನೆಲೆನಿಂದು ಚಿತ್ತರದ ನಿಲವಾಂತು ತೋಪ ಕ
ಣ್ಗೊಳಪಿನಿಂ ತಾಳಗಳ ಘಳಿಲನುಘ್ಘಳಿಪ || ೩ ||

---

[1] ಗೊಳು (ಕ).
[2] (ಕ) ದಲ್ಲಿಲ್ಲ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಅಡಿದೊಡರ್ವನಿದು ಜಡೆಯ ಸಡುಬಳಸಿಯಸುಗೊಳಿಸಿ
ಜಡಿವವೋಲೆಯಸೊಡಂಬಡಿಸಿ
ಒಡನೆ ಲಂಘನೆ ಲಾಗು ಬಿಡುತೆಗಳ ಬಿಡುಬಿನಿಂ
ಕುಡಿಮಿಂಚು ಪೊಡವಿಯೊಳು ಕುಡಿದೋಱುತೆನಿಪ ||೪||

ಬಿಡದೇಳೆ ಬೆಮರ್ಗಳೆಡೆವಿಡದುಸುರ್ಗಳೆಡೆಯಾಡೆ
ನಿಡುಸುಡಿಗಳೆಡೆಯೆಡೆಯೊಳೆಡಹಿ
ಕಡುಗಿ ಚಿಕದೇವೇಂದ್ರ ಕರುಣಿಸಂದಭಿನಯದ
ಸಡಗರದಿ ಬೇರೊಂದು ಸವಿಯ ನೆನೆಯಿಸುವ ||೫||

೨. ಈ ಎರಡನೆಯ ತ್ರಿಪದಿಯೊಳ್ ಮುಗುದೆ ಪೊಸಸುಸಿಲ್ಗೊಡಬಡುವ ಬೆಡಗಂ ಭಾವಿಸುವರ್.

ರಾಗ: ಕೇದಾರಗೌಳ; ಆದಿತಾಳ

ಸುಗುಣೆಯಿನಿಸು ನಾಣ್ಚುವ ಸೊಬಗು ಜೀಱು ಸೊ
ಬಗು ಮೆಯ್ಸಿರಿಯ ಸಲ್ಪಗೆಯು ಪೊಸಜವ್ವನದ ||ಪಲ್ಲವಿ||

ಬಳಿವರುವ ಕೆಳದಿಯರ ಒಲುಮೆಯೊಳು ಸಜ್ಜೆವನೆ
ಯೊಳಪೊಕ್ಕು ಸೆಳೆಮಂಚದೊತ್ತಿಲಿ ಸಿಂದು
ಒಳುವೊಗವ ಸಸುಮಣಿಸಿ ಉಂಗುಟದಿ ನೆಲನ [ಬ] ರೆ
ದೊಳಗೊಳಗೆ ಕಡೆಗಣ್ಣನೋಸರಿಸಿ ನಿಟ್ಟಿಸುತ ||೧||

ಘಳಿಲನೆರ್ದೆ ಸೆಱಗ ಕೀಳ್ಗೆಳೆದು ಪೊಂ
ಜೆಳೆಯ ಜಕ್ಕುಳಿಪ ಮೆಯ್ಯಂದವನು ಕುಱಿತು ನೋಡೆ
ಅಳವಳಿದು ಹಮ್ಮೃಸಿಯವ್ಪಗಯ್ಗಳಸೆದೆಯೊ
ಳಳವಡಿಸಿ ಮೆಯ್ಮುರಿದು ಮುಳಿದುವೋಡಿಯೊಳು ನೋಡುತ
||೨||

ನಿಱಿದುಡುಕೆ ಪೆಱದೆಗೆದು ಸೈಗರೆವಳೊಡವಾಯೆ
ಸೆಱಿತು ನೋಡುವಳೊಡಲ ಸೇಡಿಗೊಳಿಸುವಳು
ಪಱಿದು ವಡೆ (?) ವುಡೆ ಸೂಲು ಬಸವಳಿದು ಕುಳ್ಳಿರ್ದು
ಬಿಱುಬಿನೊಳು ಕೈದಳದಿ ಬೆದಱುಗಂಗಳ ಮುಚ್ಚುತ ||೩||

Dr. Urmila Sharma Collection, Varanasi

CC0. In Public Domain, Digitizagtion by eGangotri

೩. ಈ ಮೂಱನೆಯ ತ್ರಿಪದಿಯೊಳ್ ಕ್ರಮದಿಂ ಸಂಭೋಗದಾದಿ ಮಧ್ಯಾಂತದೊಳ್ ಪಳಂಚುವ ಕಾಂತೆಯಸು ಪಂಚಿಸುವರ್.

ರಾಗ: ಯರಕಲಕಾಂಬೋಧಿ

ಎಂತು ಸೈರಿಪಳೊ ಮತ್ತೇಗೈವಳೊ
ಅಂತು ಸಂತಸದೊಳಿರುವೆಮಗಿಂತಿದೇನೇನು ಬಂತು ||ಪಲ್ಲವಿ||

ಮುದದಿ ಮುಂಬರಿದೆನ್ನ[1] ಮೊಗನೋಡಿ[1] ಮೋಹಿಸಿ
ಮದವೇಱು ಮೈ[2]ಯ್ಯುಕ್ಕಿ ಮನಸು ಸೊಕ್ಕಿ
ಹದವಿಾಱು ಎಳೆವಳೆದೆಗರಗಿ ಕೊರಗಿ
ಕದುಬಿ ಕಾತರಗೊಂಡು ಕದುಬಿಱುದು ಮೇಲ್ವಿಳುವಳಿಂ. ||೧||

ಮುಗುಳುವೊ[ಲೆ]ಗಳಿಂ ಮುಂಮೊನೆದೋಱಲಿಱುದೊತ್ತಿ
ಬಿಗಿಬಿಗಿದಮರ್ದಪ್ಪಿ ಬೆಂಬಿಡದೆ ಬಗೆ
ಬಗೆಯುಲಿದೋಱು ಬಾಯ್ದೆರೆಯ ಸವಿದೆನ್ನ
ಮೊಗದೊಳು ಮೊಗವಿಟ್ಟು ಮುಳುಗಿ ಮುದ್ದಿಸುವಳಿಂ || ೨ ||

ಕ್ರಮದಿ ತನ್ನಯ ಪರಾಕ್ರಮವ ಕಾಣಿಸುತ ಸಂ
ಭ್ರಮದಿ ಚಿಕ್ಕದೇವೇಂದ್ರ ಪಾಲಿಸೆಂದು
ಶ್ರಮದಿಂದತಿಸುಯ್ವ ಸಾರಿಗೆ ಸುಡಿದು
ಬೆಮರಿ ಮೆಯ್ಸ್ನವಿರೇಱ ಬೆಂಡೆದ್ದೊಱಗುವಳಿಂ || ೩ ||

೪. ಈ ನಾಲ್ಕನೆಯ ಪಂಚಪದಿಯೊಳ್ ಪೆಱತೊಂದು ಲೀಲೆಯಿಂ ಮೆಯ್ಮಱೆದಿರ್ದ ಕಾಂತೆ ತನ್ನಂ ಕಂಡು ಗಕ್ಕನೆದ್ದುನಿಂದ ಸೊಗಸಂ ಇದಿರ್ವಂದ ಸೊಬಗಂ ಲತಾವೇಷ್ಟನಮೆನಿಸುವಾಲಿಂಗದೊಳಮಱದಂದಮಂ ಗಂಡುಗೂಟದೊಳೆಸೆವ ದೇಶಿಯಂ ರತಾಂತ ಶ್ರಾಂತಿಯಂ ಭಾವಿಸುವರ್.

ರಾಗ: ಮುಖಾರಿ

ಕಣ್ಣೊಳು ಕಟ್ಟಿದವೋಲು ಕಾಣಿಸುತಿದೆ
ಒಣ್ಣದುಟಿಯ ಒಲ್ಮೊಲೆಯ ಬಾಲೆ ಮೆಯ್ದೋಱಳಕಟಾ
||ಪಲ್ಲವಿ||

---

[1] ಮೊಗವನೋಡಿ (ಕ).
[2] ಯಿ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ಪಸರಿಸೆ ತೆಳ್ವಸುರ್ದೆರೆ ಪೊಸತೆನಿಸೆ ಬಡ
ನಸುಸರಿಯೆ ನಿಱುಪ್ಪೈಸರಿಸೆ ಮೇಲುದು ತುಱುಬಿಳಿ
ದೆಸೆಯೆ ಫಲಿರೆಂದೆನಗಿದಿರೆದ್ದು ನಿಂದ ಬಗೆಯೆನ್ನ || ೧ ||

ಒರುಗೈಯೊಳೆದೆ ಸೆಱಗನೊಡಬಡಿಸುತಲೆ ಮ
ತ್ತೊರುಗೈಯಿಂ ನಿಲದಿಳಿವ ನಿಱಿಯ ನೆಲೆಗೊಳಿಸಿ
ಪೊಱವಾಱ ಬಲ್ಮೆಯ ಪೊಱಲಱಿಯದಡಿ ತರಹರಿಸೆ
ಕಿಱುನಗೆ ನಾಣ್ಗೂಡಿಯೆನಗಿದಿರು ಬರುವ ಬಗೆಯೆನ್ನ || ೨ ||

ಎಡಗಾಲಗೊನೆಯುಸು ಎನ್ನಡಿಯ ಮೇಲೂಱಿ ಮೋಹದಿ
ಕಡುಗಿ ಬಲಗಾಲಿಂದೆನ್ನೆಡದ ತೊಡೆಯ ತೊಡರಿ
ಒಡನೊಡನೆರ್ದೆಯ ಸಿಮಿರ್ದೊತ್ತಿ ಬಟ್ಟವೊಲೆಗಳಿಂ
ಮುಡಿವಿಡಿದು ಮೊಗನೆಗಹಿ ಮುದ್ದಿಸುವ ಬಗೆಯೆನ್ನ || ೩ ||

ಬಳಿಕಂಜೆದುಪ್ಪಳುವಾಸಿಗೆಳದೊಯ್ದು ಗಂಡುಗೂಟ
ಕೆಳಸಿ ಮೇಲ್ವಾಯ್ದು ಕೂರಲ ಸುಡಿಯನೊದವಿಸಿ
ತಳುವದೆ ಮುಂಗಾರ ಮಿಂಚನಿಳಿಕಯ್ದು ಎನ್ನೆದೆ
ಯೊಳು ನಲಿನಲಿದು ನಲವೇಱಿ ನರ್ತಿಸುವ ಬಗೆಯೆನ್ನ || ೪ ||

ಬೆಳಕಿಗೆ ಕಣ್ಣಲರ್ದು ತೇಲ್ದು ತೊಳಲಿತೊಳಲಿ ಬೆಂಡೇಳ್ವ
ಕೆಳಸರದಿ ಚಿಕದೇವರಾಜೇಂದ್ರ ನಲಕನುತ
ಬಳಲಿ ಬಳಲಿ ಬಾಯೂಱಿ ಬಾಯ್ದೆರೆಯುಂಡು ಬಳಲ್ಕೆ
ಗಳಿದು ಪರಮಾನಂದ ಸಾಗರದೊಳೋಲಾಡುವ ಬಗೆಯೆನ್ನ
|| ೫ ||

೫. ಈ ಐದನೆಯ ತ್ರಿಪದಿಯೊಳ್ ತಮ್ಮಿರ್ವರ ಕ್ರೀಡಾರಸಾವೇಶಮಂ ಭಾವಿಸುವರ್.

ರಾಗ: ಮೋಹನ

ಪೋದಪೊತ್ತಱಿಯದೆ ಪೋದುದು
ಆ ದಿನದಿರುಳೆಮಗ ರಗಳಿಗೆಯವೊಲು || ಪಲ್ಲವಿ ||

Dr. Urmila Sharma Collection, Varanasi

CC0. In Public Domain, Digitizagtion by eGangotri

ಮೊಗವ ಸೋಪದ ಮುನ್ನ ಮುಗ್ಗಿ ಮುಂಬರಿದೊತ್ತಿ
ಜಿಗಿಬಿಗಿದಪ್ಪುವ ಜೆಸುಗೆ ಏಱು
ಒಗುವ ಬಾಯ್ದೆರೆಜೇನಸುಂಡೂಡಿ ತಣಿಯದೆ
ಮೊಗವೊಗವಗಲದೆ ಮುಳುಗಿ ಮುಂಡಾಡುತ ||೧||

ಅಡಿಗೊಸೆಯಿರ್ಕುಳಿಂದುಡೆಯ ತೊಲಗಲೊತ್ತಿ
ಕಡುಗಿ ಮೆಲ್ವಾಸುಗೆ ಗಾಸಿಗೊಳೆ
ಒಡಲುಬುರ್ಕೊರ್ಬಿಸೂಳುರವಣಿಸುತ ತೃಪ್ತಿ
ವಡೆಯದೆ ಲೀಲೆಯ ಪಲ್ಲಟಿಸುತಲಿಂತು ||೨||

ಕಿಱು ಬೆಮರಿಗೆ ಮುಡಿ ಕೆದಱೆ ಸುಯ್ಯೊದವೆ ಮೆ
ಯ್ಮೆಱೆಯೆ ಕಣ್ಮಲರುಗಳ್ಕಾತರಿಸೆ
ಒಱಗಿ ಸೊಗದೊಳೊರ್ವರದೆಯೊಳೆ
ಜ್ಜಱುತ ಸಂತಸದೊಳೆಜ್ಜಱುಸಿಯುಬ್ಬುಗಿಸುತ ||೩||

೬. ಈ ಆಱನೆಯ ತ್ರಿಪದಿಯೊಳ್ ಪ್ರಾಣಕಾಂತೆಯ ಕ್ರೀಡಾ ರಸಾಭಿವೇಶಮಂ ಭಾವಿಸುತ್ತೆ, ತಾಂ ಪರವಶರಾಗಿ ಭಾಷಾಂತರದೊಳ್ಪೇಳ್ವರ್.

ಎಟುಲವೋರ್ಚುನೊ ಭಾಮ ಏಮಾಯನೋ ಚಲಿ
ಕಟಕಟಾ ವಿಧಿಯೇಮ ಕಲ್ಪಿಂಚೆಸಿಪುಡು ||ಪಲ್ಲವಿ||

[1]ಪ[1]ಡತಿನಾ ಕೋಡವಿಂದ ಬಾ[2]ಸಿ[2]ಸುಂಡುಗಾ ಚಲುಲ
ಪೊಡಗಾಂಚಿ ಗಕ್ಕುನನೆ ಪೊರಳೆನಪ್ಪಳಿ
ಜಡಿಯಕುಮುಸಿ ನಸ್ನು ಚಾಲಾ ದಟ್ಟಿಂಪುಚು
ಅಡುಗಡುಕುಮೋ ನೀ ಯಾಸುನಾ[3]ಚಾ[3]ನಾ ||೧||

ಕಲಕಿ ಮುನ್ನೊಕನಾಡು ಕಲಕನನ್ನೆಡಬಾಗಿ
ಕಲವರಿಂಚಕನೇ[4]ಸು[4] ಕ[5]ಲುಂ[5]ಗಿಟ ಜಿಗಿಯು

---

[1] ವ (ಖ).
[2] ಣ (ಕ).
[3] ಜಾ (ಖ).
[4] ಸು (ಕ).
[5] ವೆಂ (ಖ).

Dr. Urmila Sharma Collection, Varanasi

CC0. In Public Domain, Digitizagtion by eGangotri

ತಲಚಿಯೆಪ್ಪಟಕಿ ವಿರಹತಾಪ ವೇದನಕಾಸು
ಕೌಲಿ[1]ಕಿ ಕಡುವ್ವಥಲ ಚೇಕಂ ನೀರುಗುಕ್ಯ. ||೨||

ಸುರತ ಕೇಳಿನೀ ರಮಣಿ ಸೋಲಿ[ಂಚಿ] ಕಾಸು ನಾಡು
ಯಿರವುಸನಿದಿರಿಂಚಿರದುಟು ಸಲೌಚಿ[2]
ಅರಿಗೆಸಂತೊವೆಳ ಅದೆರಾ ಪಶ್ಚಿಮ ರಂಗ
ಕರುಣಿಂಚು ಮನಿಕಾನೆ ಕಲಯು ನಾಚಾನಾ ||೩||

೭. ಈ ಏಳನೆಯ ತ್ರಿಪದಿಯೊಳಾ ಮಱವೆ ಮಿತಿಮೀಱೆ ಮನದೊಳ್ ಭಾವಿಸಿದುದಂ ಕಣ್ಣೊಳ್ಕಂಡಂತೆಣಿಸಿ ಪೇಳ್ವಳ್.

ರಾಗ: ಕಲ್ಯಾಣಿ

ಇನಿಯಳೀಪ್ರೊತ್ತಿನೊಳಿರುವಳು ಅವ
ಳಿನಿಗೆಯ್ತ್ತಗಳು ಕಣ್ಗೆದಿರಾಗುತಲಿದೆ ||ಪಲ್ಲವಿ||

ತಡೆಯೆ ಮುನಿದು ಪೋಪ ತರುಣಿಯ ಸೆಱಗಾಸು
ಪಿಡಿದಾಸೆಳೆಯಃ ಕೂಡೆ ಮಡಮುಱಿದು
ಗುಡಿಗೊಳೆ ನಿಡುಪುರ್ಬುರ್ ಕೂರ್ನೋರ್ಟವೆಸಗುತ
ಬಿಡುಬಿಡೆಸುತ ಸಿಂದ ಬೆಡಗಿದೆಕೋ ತೋರ್ಪು ||೧||

ಕಡುಗಿ ಬಾಯ್ದೆರೆಯನು ಗಾಸಿವಡಿಸಿ ಮೊಗ
ಗೊಡಹಿ ಮುಗಿದು ಪೂರ್ಲಗುಡಿಗೊಳಿಸಿ
ಒಡನೆಳೆ ನವಿರು ಮೆಲ್ಲೊಡಲ ಸುೞಿಗೊಳಿಸಿ
ಬಿಡದೆ ಕಯ್ಯೊದಱುವ ಬೆಡೆಯುವಿದೆಕೊ ತೋರ್ಪು. ||೨||

ಪಿಡಿದು ನೀವಿಯ ನೀಳತೊಡೆಯ ಬೆಸುಗೆಗೆಯ್ದೊಱುವ
ಜಡಿದೆನ್ನ ಕೈಗಳ ಸಡಿಲಿಸುತ
ಮುಡಿಯೊಳು ತುಱುಗಿದ ಮೊಲ್ಲೆಯ ಸರಗಳಿಂ
ದೊಡನಡಿಪನ ಪೊಯ್ವೊಂದೋಜೆಯಿದೆಕೊ ತೋರ್ಪು. ||೩||

---

[1] ಡು (ಕ).
[2] ಚಿರ್ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

೫. ಶೃಂಗಾರಭಾವ ದಶಪದಿ

೧. ಈ ಐದನೆಯ ದಶಪದಿಯೊಳ್ ಕಾಂತೆಯರ್ಗೆ ಸಾಜದಿಂ ಪುಟ್ಟುವ ಪತ್ತು [೦] ಶೃಂಗಾರ ಭಾವಂಗಳಂ ಕ್ರಮದಿಂ ಭಾವಿಸುವರ್. ಅದೆಂತೆನೆ—

ಶ್ಲೋಕ || "ಪ್ರಿಯಾನುಕರಣಂ ಲೀಲಾವಾಗ್ಭಿರ್ಗತ್ಯಾಥ ಚೇಷ್ಟಿತೈಃ"[1] ||

ಪ್ರಾಣಕಾಂತನ ನುಡಿನಡೆ ಉಡೆ ತೊಡವು ತಿಲಕಂ ಮೊದಲಾದುವು ಮನಂಗೊಳೆ ತಾನುಮದಱಂತೆಸಗುವ್ರದು ಲೀಲೆಯೆನಿಪುದು.

ಈ ಭಾವಮನೀ ಮೊದಲ ತ್ರಿಪದಿಯೊಳ್ ನಿರವಿಸುವರ್.

ರಾಗ: ಘಂಟಾರವ; ತಾಳ: ಝಂಪೆ.

ಇನಿಯಳೆದೆಯಿರವನಿ [ನ್ನೆಂತೆಂ]ದು ಬಣ್ಣಿಸುವೆ
ಮನವಚನ ಕಾಯಗಳು ಮಾಱುವೋದವೊ ನಿನಗೆ || ಪಲ್ಲವಿ ||

ಅರಸ ಕೇಳ್ನೀನು ಬರವಿರುವ ನೋಡುವ ನಗುವ
ಪರಿಯ ತನ್ನೆದೆಯೊಳುರೆ ಬಂದಿವಿಡಿದು
ಪರವಶದೊಳಾ ತೆಱದಿ ಬಂದಿರ್ದು ನೋಡಿ ನಗು
ತಿರದೆ ಮೆಯ್ಮೆಯ್ಯೊಳೊಡೆವೆರೆದಪ್ಪಿ[ನೊ]ಳ್ನಲಿವ || ೧ ||

ಸುಗುಣ ಕೇಳ್ನಿನ್ನ ಸಿರಿಮೊಗದಿ ನೊಗಯಿಪ ಪೊಸ
ಬಗೆಯ ನಾಮವ ತನ್ನ ಪಣೆಗೆ ಧರಿಸಿ
ನೊಗಸುಮಿಗೆ ನಿಂದಿದಿರ್ಗೆ ನುಳಿನುಳಿದು ಮೆಯ್ದೋಱು
ಮೊಗದಿ ಮೊಗವಿಟ್ಟಾಂಕಿ ಮುದ್ದಿಸಿದವೊಲ್ನಲಿವ || ೨ ||

ರಸಿಕ ಶ್ರೀ ಚಿಕದೇವರಾಯ ಕೇಳ್ನೀನು ಮು
ನ್ನೆನುಡ್ದ ನವಿನುಡಿಯ ನೆನೆದೊಡಲು ಮಱೆತು
ನಸುನಗುತ ಸರಸಿ ಎನ್ನರಸಿ ಬಾರೆನುತ ನಿಂ
ದೆನೆವ ಚೆಂಡುಟಿ ಜೇನ ಸವಿದೀಂಟಿದೋಲ್ನಲಿವ || ೩ ||

---

[1] ಈ ಶ್ಲೋಕಗಳು ಧರ್ಮಸೂರಿಯ 'ಸಾಹಿತ್ಯ ರತ್ನಾಕರ'ದಲ್ಲಿ ಕಾಣಬರುವುದೆಂಬ ಅಂಶದತ್ತ ನನ್ನ ಗಮನ ಹರಿಸಿದವರು ಪೂಜ್ಯರಾದ ಪ್ರೊ. ಡಿ. ಎಲ್. ಎನ್. ಅವರು.

Dr. Urmila Sharma Collection, Varanasi

CC0. In Public Domain, Digitizagtion by eGangotri

೨. ಶ್ಲೋಕ || ತತ್ಕಾಲಿಕೋ ವಿಕಾರಸ್ಸ್ಯಾದ್ವಿಲಾಸೊ ದಯಿತೇಕ್ಷಣೇ.

ಪ್ರಾಣಕಾಂತನಂ ನೋಡುವಾಗಳ್ತೋಱುವ ಪೊಸವಗೆಯ ಮೆಯ್ಸಿರಿಗಳ್ ವಿಲಾಸವೆನಿಪುದು. ಈ ಭಾವಮನೀಯೆರಡನೆಯ ತ್ರಿಪದಿಯೊಳ್ ನಿರವಿಸುವರ್.

ರಾಗ : ಯರಕಲಕಾಂಭೋಧಿ ; ತಾಳ ; ಝಂಪೆ

ಸುಳಿಸುಳಿದು ಕಣ್ಮಸವ ನೋಟಿಗೊಂಡಳಿಂದು
ಸುಳಿಗುರುಳ ಸುಣ್ಮೊಗದ ಸೊಬಗಿಯೊರ್ವಳು ಬಂದು || ಪಲ್ಲವಿ ||

ಪಡಿಮೊಗಕೆ ನಡೆವುತೆಡಬಲನನೆಣಿಸದೆ ಕದುಬಿ
ಕುಡಿನೋಟದಿಂದೆನ್ನ ಕೂರ್ತು ನೋಡಿ
ಒಡನೆ ನಸುನಾಣುವಡೆದೊದವಿ ಮೊಗದೆಗೆದು ನಾ
ಲ್ಕಡಿಯಿಡುತ ಲೀಲೆಯಿಗೆ ಮಡಮುರಿದು ನೋಡುತ || ೧ ||

ಕೆಳದಿಯೊರ್ವಳ ಮುಗ್ಗುಲನೇರಿ ಮಯ್ಮಱಸಿ
ಒಳುವೊಗವನೊಂದು ಕಡೆಗೋರೆಗೊಯ್ದು
ಎಳನಗೆಯ ಸೂಸಿ ಮನದಿರವನಿದಿರಿಡುತ ಕ
ಣ್ಗೊಳಪಿನಿಂದೆನ್ನಳವ ತಲೆಕೆಳಕು ಗೆಯ್ಯುತ || ೨ ||

ಮಡದಿ ಚಿಕದೇವೇಂದ್ರನಡಿಗಳಿಗೆ ನೋಲ್ವನೆಂ
ದೊಡವರುವ ಸಖಿಗೆ ತನ್ನೊಳವುನುರುತ
ಅಡಿಗಡಿಗೆ ಎನ್ನಡಿಯನೋರೆನೋಟದಿ ನೋಡಿ
ಕುಡುವುರ್ವ ನಿಱಿವಿಡುವು ಕೊಡಲ ಜಡ ಮುರಿವುತ (?) || ೩ ||

೩. ಶ್ಲೋಕ || ವಿಚ್ಛಿತ್ತಿ ರತಿರಮ್ಯತ್ವಂ ಸ್ವಲ್ಪೈರಪಿ ವಿಭೂಷಣೈಃ ||

ತೊಡವುಗಳ್ಕಿಱಿದಾದೊಡಮಂದವಾಗಿರ್ಪ ಬಗೆ ವಿಚ್ಛಿತ್ತಿಯೆನಿಪುದು. ಈ ಭಾವಮನೀ ಮೂಱನೆಯ ತ್ರಿಪದಿಯೊಳ್ ನಿರವಿಸುವರ್

ರಾಗ : ಮಧುಮಾಧವಿ

ಒಡಲ ತನಿಸೊಬಗೊಂದು ತೊಡಿಗೆಯನೆ ತೋಱುತಿದೆ
ಮಡದಿಯಿಂದಕೆ ಪಡಿಯಿಡುವಡೆನ್ನಳವೆ || ಪಲ್ಲವಿ ||

Dr. Urmila Sharma Collection, Varanasi

CC0. In Public Domain, Digitizagtion by eGangotri

ಎಸಳು[1]ಗಂಗಳು ಕಿವಿಯೊಳೆಸೆವ ಕನ್ನೈದಿಲುಗ
ಳೆಸಕವನು ನೋಡವರಿಗೆಸಗುತಲಿದೆ
ಉಸುರ ಸೞುಗಂಪು ಪೊಸ ಮಿಸುನಿವಣ್ಣದ ಮೆಯ್ಯೊ
ಳೆಸೆವ ಕತ್ತುರಿತಿಗುರ ಜಸವಡೆದು ತೋಱುತಿದೆ. || ೧ ||

ಮಿಱುಪ ಮೊಸೆವಲ್ವೈಳಗು ಮೇಲು ಮುತ್ತಿಸ ಸರದ
ಮುಱುಕವನು ಕಡೆಗಣಿಸಿ ಮುಸುಕುತಲಿದೆ.
ಪೊೞಸೂಸುವಂಗರುಚಿ ಪೊದೆದ ಪೊಂಬಟ್ಟೆಯನು
ಜಱೆದು ದೆಸೆಗಳ ಪರ್ವಿ ತೋಱುತಿದೆ. || ೨ ||

ಸರಸ ಚಿಕದೇವೇಂದ್ರ ಗರುವೆಯುಗುರಿನ ಪೊಗರು
ಕರಯುಗದ ವಜ್ರಕಂಕಣದಂತಿದೆ
ಸರಸಿಜ[ವ] ಪೋಲ್ವ ಪದತಳದ ತಸಿಗಂಪು ಮು
ಬರಿವಲತಿಗೆಯ ರಸವ ಪರಿಹಾಸ ಗೆಯ್ಯುತಿದೆ || ೩ ||

೪. ಶ್ಲೋಕ || " ವಿಭ್ರಮಸ್ತ್ವರಯಾಕಾಲೇ ಭೂಷಾಸ್ಥಾನ ವಿಪರ್ಯಯಃ " ||

ಕಡುಬಿನಿಂ ತೊಡವುಗಳ ಪಲ್ಲಟಿಸಿ ತೊಡುವುದು ವಿಭ್ರಮವೆನಿಪುದು. ಈ ಭಾವಮಸೀ ನಾಲ್ಕನೆಯ ತ್ರಿಪದಿಯೊಳ್ ಸಿರವಿಸುವರ್.

ರಾಗ: ಕುರಂಜಿ.

ತರುಣಿ ತೊಡಿಗೆಯು ತೊಟ್ಟ ಪರಿಯನೇವಣ್ಣಿಸುವೆ ನಿನ್ನ
ಬರವ ಬಣ್ಣಿಸಿ ಭಾವೆಯರ ನಗಿಸುತಾ. || ಪಲ್ಲವಿ ||

ಇ[1]ನಿ[1]ಯನೆಲ್ಲಿದನು ನೀನೆಲ್ಲಿ ಸಂಧಿಸಿದೆ ಎನ್ನನು
ವಸವನಡೆಯೊಳೇನಂದಱುಹಿದೇ ಎನು
ತೆಸುತ ಮೆಯ್ನ ಪಿರೇಱು ಉರ್ಬುವ ಘನ
ಸ್ತನಕೆ ಕಾಂಚಿಯ ಕಂಠಸರವ ನಡುವಿಗೆ ಧರಿಸಿ || ೧ ||

---

[1] ಳಸು (ಖ).
[1] ನೆ (ಕ)

Dr. Urmila Sharma Collection, Varanasi

CC0. In Public Domain, Digitizagtion by eGangotri

ಆಳ್ದನೆಣಿಸಿರುವ ಪರಿಯಾವುದವನಿನ್ನೊಳೀ
ವೇಳ್ದನೆಸಗಬಹುದು ತಡನೇತಕೆಂದು
ಕೇಳ್ದು ಕಡುತವಕದಿಂ ಕಿವಿಗೆ ಮೂಗುತಿಯ ನಸು
ನೀಳ್ದ ನಾಸಾಂಚಲಕೆ ನಿಲಿಸಿ ನೀಲದ ಮುರುಹ ॥ ೨ ॥

ಎನ್ನರಸ ಚಿಕದೇವೇಂದ್ರ ಬಂದನೆ ದಿಟವೆ
ಎನ್ನಾಣೆ ಪೇಳುಪೇಳೆಂದೆನುತ
ಪೊನ್ನ ಜಾಜಿಯ ಸರವ ಪೂಜಿಸಿ ಪೆರ್ಮೊಲೆಗೆ ಭಾ
ವನ್ನದಣ್ಪಸು ಜಡೆಯ ಬಳಸಿ ಲೇಪಿಸುತ ॥ ೩ ॥

೫. ಶ್ಲೋಕ ॥ ರೋಷಾಶ್ರುಹರ್ಷಭೀತ್ಯಾದೇ ಸಂಗರಃ ಕಿಲಿಕಿಂಚಿತಂ.

ಮುನಿಸು ಕಂಬನಿ ಸಂತಸಂ ನಾಣಂಜಿಕೆ ಮೊದಲಾದುವೊಂದುವೆರೆಯೆ ಕಿಲಿಕಿಂಚಿತಮೆನಿಪುದು. ಈ ಭಾವಮನೀ ಐದನೆಯ ತ್ರಿಪದಿಯೊಳ್ ನಿರವಿಸುವರ್.

ರಾಗ : ಸಾರಂಗಿ

ನೆನೆನೆನೆದು ಎನ್ನ ಮನ ನೆಱೆ ಮೋಹಿಸುತಿದೆ
ಎನ್ನಿನಿಯಳಂದಿನ ದಿನದೊಳೆಸಗಿದಿಸಿಗೆಯ್ಮೆಗಳ ॥ ಪಲ್ಲವಿ ॥

ವನಿತೆಯೆನ್ನೊಳೇಕಾಂತವಾಡಿದ ಬಿನದವಾತಿ
ನನುವ ಸಖಿಯರಿಗಾನಱುಹಲುಜ್ಜುಗಿಸೆ
ಕೊಸರಿಡುವ ಲಜ್ಜೆಯಂ ಕುದಿದು ಕೈಗಳಂ ಮುಗಿದು
ಕನಲಿ ಕಂಬನಿದುಂಬಿ ಕಾತರಿಪ ಬಗೆಯ ॥ ೧ ॥

ಚೆಲುವೆಯನು ದಾಯದೊಳು ಗೆಲಿದು ನಸುನಗೆದೋಱ
ಕೆಳದಿಯರ ಮುಂಗಡೆಯೆ ಕೆಣಕಿ ನುಡಿಸೆ
ಅಳಲು ನಗೆಯನು ಸೂಸುತಳವಳಿದು ಗದುಗದದಿ
ತಳುವೇತಕೆನುತ ಪೊಸವಾಯವೆಸಗುವ ಬಗೆಯ ॥ ೨ ॥

ರಸವಶದಿ ಚಿಕದೇವರಾಯ ಎಂಬರೆನುಡಿಯ
ಕೊಸರಿ ನುಡಿವುದ ನಾನು ಕೂರ್ತುನೋಡೆ
ನಸುನಾಣು ಮುನಿಸು ಸಂತಸ ಕದುಬು ಕಾತರಗ
ಳೆಸೆಯೆ ಮೊಗದೊಳು ಮೊಗವನಿಟ್ಟು ಮಱಿಸುವ ಬಗೆಯ ॥ ೩ ॥

Dr. Urmila Sharma Collection, Varanasi

CC0. In Public Domain, Digitizagtion by eGangotri

೬. ಶ್ಲೋಕ || ಮೋಟ್ಟಾಯಿತಂಸ್ಯಾದಿಷ್ಟಸ್ಯ ಕಥಾದೌ ಭಾವಸೂಚನಂ ||

ಪ್ರಾಣಕಾಂತನಂ ನೋಡುವೆಡೆಯೊಳಮವನ ವೃತ್ತಾಂತಮಂ ಕೇಳುವೆಡೆಯೊಳಂ ಅವನು ಭಾವಿಸುವ ತನ್ನ ಮನದಿರವಂ ಸೂಚಿಪುದು ಮೋಟ್ಟಾಯಿತಮೆನಿಪು[ದು]. ಈ ಭಾವಮನೀ ಆಱನೆಯ ತ್ರಿಪದಿಯೊಳ್ ನಿರವಿಸುವರ್.

ರಾಗ: ಕಾಂಬೋಧಿ; ತಾಳ: ಝಂಪೆ

ಇನ್ನೇನು ಮದನ ನಿನಗಿದಿರಿಡುವೆನವಳ
ಎನ್ನಾಣೆ ಕೇಳು ದಿಟವಿಜ್ಟ ಕದ ನುಡಿಯಲ್ಲ. || ಪಲ್ಲವಿ ||

ಬಾಯಾರ್ದ ಕಣ್ಗಳಿಗೆ ಪನ್ನೀರನೀವಂತೆ
ಜೀಯ ನಿನ್ನಯ ಭಾವಚಿತ್ರವನು ನೋಡಿ
ಓಯಾರದಿಂ ಮೊಗವನೊಂದಿಸಿಸು ಬಾಗಿಸುತ
ಲಾಯತಾಪಾಂಗದಿಂದರೆ ನೋಟವೆಸಗುವಳು || ೧ ||

ಪಸಿದ ಕಿವಿಗಳಿಗಮೃತ ಪಾರಣೆಯ ನೀವಂತೆ
ರಸಿಕ ನಿನ್ನಿರವ ಲಾಲಿಸಿ ಕೇಳುತ
ಅಸಿಯೊಡಲು ಜಡಮುರಿವ[1]ತಲಸುತಾಳೋಚಿಸುತೆ[1]
ಬಸವಳಿದು ಕಣ್ಪುರ್ಬುಪಲವು ಬಗೆಗೆಯ್ಯುವಳು || ೨ ||

ಅಱುವಿಲ್ಲದೆರ್ದೆಗೆ ದಿವ್ಯೌಷಧವ ಕೊಡುವಂತೆ
ನೆಱೆದು ಚಿಕ್ಕದೇವೇಂದ್ರ ನಿಜಭಾವದಿ
ಸಿಱುಗೊಳುವೆ ಪುರ್ಬುಲರ್ವ ನಿಡುಗಣ್ಣು ನಸುನಡುಕ
ಕಿಱುಬೆಮರುಸುಯ್ಗಳಿಂ ಕೆಳದಿಯರಿಗಱುಹುವಳು. || ೩ ||

೭. ಶ್ಲೋಕ || ಸಮ್ಮರ್ದೇಽಪಿ ಸುಖಾಧಿಕ್ಯಂ ರತೌ ಕುಟ್ಟಮಿತಂ ಮತಂ ||

ಸಮ್ಭೋಗದೊಳ್ ಪ್ರಾಣಕಾಂತನೆಸಗುವ ಸಿಂಗರದೆಸಕಂಗಳ್ಗೆ ಮೆಯ್ಗೊಟ್ಟು ಸಂತಸಂ ಬಡೆವುದು ಕುಟ್ಟಮಿತಮೆನಿಪುದು. ಈ ಭಾವಮನೀ ಏೞನೆಯ ತ್ರಿಪದಿಯೊಳ್ನಿರವಿಸುವರ್.

---

[1] (ಕ, ಖ) ತಾಳೋಚಿಸುತ.

Dr. Urmila Sharma Collection, Varanasi

CC0. In Public Domain, Digitizagtion by eGangotri

ರಾಗ: ನೀಲಾಂಬರಿ; ತಾಳ: ಝಂಪೆ

ಅಗಲಸೈರಿಪುದೆಂತೊ ಅಕಟಕಟ ಅವಳ ಎನ್ನ
ಬಗೆಯಱಿತು ಬಳಿಸಲ್ವ ಪ್ರಾಣವಲ್ಲಭೆಯ || ಪಲ್ಲವಿ ||

ಬರಸೆಳೆದು ಮೇಲ್ವಾಯ್ದು ಬಯಲ್ಗೈದು ಮೇಲುದಸು
ಧರದೊಳುರದಿಂದೊತ್ತಿ ಬಳಿ . . . . . . ರಿ
ಎರಡು ಮೈಯ್ಯೊಂದೆಸಿಪ ತೆಱದಿ ಬಿಗಿಯಪ್ಪಲೆದೆ
ಗರಗಿ ತವಕದಿ ಲಲ್ಲೆಗರೆದು ಕಾತರಿಪಳ || ೧ ||

ಜಡೆದುಡುಕಿ ಲೀಲೆಯಿಂ ಜಡಿದು ಪಿಂದಕ್ಕೆ ಗಲ್ಲ
ವಿಡಿದೆತ್ತಿ ಚೆಂದುಟಿಯ ವಿ . . . . . . ರ್ದು
ಕಡುಗಿ ಪಲ್ಮೊನೆಗಳಿಂ ಗಾಸಿಗೆಯ್ಯಲು ಕೊರಳ
ನುಡಿತದಾಲಾಪಗಳನುಪ್ಪಡಿಸುವವಳ || ೨ ||

ತೊಡೆತೊಡೆಯನುರವುರವ ತೋಳ್ತೋಳನಗಲದಿಂ
ತೊಡೆವೆರೆವುತೆಡೆಯೆಡೆಯನುಗುರೊಳೌಂಕಿ
ಸಡಿಲ್ದು ಬಿಗುಹಿಂ ಸಣ್ಣಸರದಿ ಚಿಕದೇವೇಂದ್ರ
ಬಿಡುಬಿಡೆಂದೆನ್ನೊಡನೆ ಬೆಂಡೇಳುವವಳ || ೩ ||

೮. ಶ್ಲೋಕ|| ಮನಾಕ್ಪ್ರಿಯ ಕಥಾಲಾಪೇ [1]ಬಿ[1]ಬ್ಬೋಕೋನಾರದಕ್ರಿಯಾ.

ಮನಸ್ಸಿನೊಳ್ ಪ್ರೀತಿವಿಶೇಷಮಾಗಿರ್ದೊಡಂ ಸಲಿ[2]ಗೆ[2]ಯಿಂದಾದೊಡಂ ನಾಣಿಂದಾದೊಡಂ ಇಸಿಸು ಬಿಗಿತೆಗೆಯ್ವುದು ಬಿಬ್ಬೋಕಮೆನಿಪುದು. ಈ ಭಾವಮನೀ ಎಂಟನೆಯ ತ್ರಿಪದಿಯೊಳ್ನಿರವಿಸುವರ್.

ರಾಗ: ಅಸಾವೇರಿ; ತಾಳ: ಝಂಪೆ

ಭಾವವೆನ್ನಯ ಬಗೆಯ [3]ಬಂ[3]ದಿವಿಡಿವುತ್ತಿದೆ.
ಈ ವಿಧದೊಳಿನಿಗೆಯ್ತುವೆಸಗುವೆನ್ನಿನಿಯಳಾ || ಪಲ್ಲವಿ ||

---

[1] ಬೊ (ಖ).
[2] (ಕ) ದಲ್ಲಿಲ್ಲ.
[3] ಬಿ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ಮೊಗನೋಡಲೆಳಸಿ ಮಿಗೆ ಮುಂಬಱಿವ ಮನದ ತನಿ
ಬಗೆ ಇದೀಪರಿಯೆಂದು ಬಣ್ಣಿಪವೋಲು
ಒಗಿಸಿ ಹರ್ಷಾಶ್ರುಗಳನು ಜೇಳ್ದ ದಿಟ್ಟಿಗಳ
ಜಿಗಿವಿಡಿದು ಜಿಗಿವಿಡಿದು ಜೆಂಡೇಳುವವಳ ||೧||

ತಕ್ಕವಿಸಲೆಳಸಿ ಮೇಲಿಕ್ಕುವೆನ್ನಯ ಮೆಯ್ಯ್ಗೆ
ಸೊಕ್ಕಿದೀ ತೆಱನೆಂದು ಸೂಚಿಪವೊಲು
ಉಕ್ಕಿ ಬಹ ಗದುಗದವನೊಡನೇಳ್ಪ ನವಿರುಗಳ
ಹೆಕ್ಕಳವ ಸಿಲಿಸಿಲಿಸಿ ಕಕ್ಕಸಂಗೊಳುವವಳ ||೨||

ನಲ್ಲ ಶ್ರೀ ಚಿಕದೇವನಾಥ ನಿನಗೊಲಿದೆನ್ನ
ಮೆಲ್ಲೆರ್ದೆಯ ಹರುಷಮೇವೇರೆ ಎಂದು
ಸೊಲ್ಲುವವಳೊಡನೊಡನೆ ಪುಲ್ಲವಿಸಿ ನಸುಬೆಮರು
ಗಲ್ಲವನು ಮಱಮಱಿಸಿ ತಲ್ಲಣಿಸುವವಳ ||೩||

೯. ಶ್ಲೋಕ || ಸುಕುಮಾರಾಂಗ ವಿನ್ಯಾಸೋ ಲಲಿತಂ ಪರಿಕೀರ್ತ್ಯತೇ||

ಮೆಲ್ಲಿತಾದ ನಡೆನುಡಿ ಮೊದಲಾದುವು ಲಲಿತವೆನಿಪುದು. ಈ ಭಾವಮನೀ ಒಂಭತ್ತನೆಯ ತ್ರಿಪದಿಯೊಳ್ ವಿವರಿಸುವರ್.

ರಾಗ: ಯರಕಲಕಾಂಬೋಧಿ

ಮನದನ್ನಳೀಗಲೀ ಮಾರ್ಗವಿಡಿದೆಯ್ದಿದಳು
ತನ್ನ ಮನೆಗೆಯ್ದಿದಳೊ ಎನ್ನ ಮನಕೆ ತಾನೆಯ್ದಿದಳೊ || ಪಲ್ಲವಿ ||

ತಡೆಯದೊಂದೊಂದಾಗಿ ದನಿಗೆಯ್ವ ಗಂಟೆ ಸರ
ನುಡಿವ ಪೊಂದುಂಬಿಗಳ ಗಡಣವೆನಿಸೆ
ಪೊಡವಿಯನು ಲೀಲೆಮಿಗೆ ಪೂಜಿಸುವ ತೆಱದಿ ಮೆ
ಲ್ಲಡಿಯೊಳಲರ್ದಾವರೆಯ[1]ನಡೆಯೆಡೆಯೊಳರ್ಪಿಸುತ ||೧||

ಇಱದೆ ನಿಗುರುವ ಪುರ್ಬಿನೆಸಕ ಕುಸುಮಾಯುಧನ
ತಿರುವೇಱಿಸಿದ ಬಿಲ್ಲ ತೆಱದಿ ತೋಱಿ
ತರಬರದೊಳೆನ್ನೆರ್ದೆಯ ತಟ್ಟುರ್ಚಲಂತೆಸೆವ
ತರಳತರಾಪಾಂಗ ಶರವನೇಳಿಸುತ ||೨||

1 ಯಿ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ಒಡವರುವ ಜೀವಸಖಿಯೊಡನೆ ಚಿಕದೇವೇಂದ್ರ
ನಡಿಗೆ ದಕ್ಕಿದೆನೆಂಬ ನುಡಿಯ ನುಣ್ಪು
ಜಡಿಯೆ ಕೋಗಿಲೆ ದನಿಯ ಚಿಗುರುಡೋರಣದ ನೀರು
ಕಡೆಗೆ ಕಟ್ಟುವ ತೆಱದಿ ಕೈದಳಿರನೊಲೆದೊಲೆದು. || ೩ ||

೧೦. ಶ್ಲೋಕ || ವಿಹೃತಂ ಪ್ರಾಪ್ತಕಾಲಸ್ಯ ವಾಕ್ಯಸ್ಯಾಕಥನಂ. . .

. . . ಣ್ಮಱುಕಂ ಮೊದಲಾದುವಱಿಂ ನುಡಿಯತಕ್ಕ ಮಾತಂ ನುಡಿಯದೆ ತಡೆವುದು ವಿಹೃತಮೆನಿಪುದು ಈ ಭಾವಮನೀ ಪತ್ತನೆಯ ತ್ರಿಪದಿಯೊಳ್ನಿರವಿಸುವರ್.

ರಾಗ : ?

ನೆನೆಯಲೆನಗಿದಿರ್ವಂದು ನಿಂದು ಮೆಯ್ದೋಱುತಿರೆ
ಎನ್ನಿನಿಯಳಂದಿನ ದಿನದೊಳೆನಗಿದಾ ಸೊಗಸುವಗೆ || ಪಲ್ಲವಿ ||

ತರುಣಿ ನೀನೀ ಪರಿಯ ಕಳಂಕಗೋಳದಿರೆ
ನೆರೆಯೂರ್ಗೆ ಪೋಗಿ ಬಹೆನೆನಲಿದಿರೊಳು
ಪರಿಸಿ ಕಣ್ಣೀರ್ದೊಱೆಯ ಪಾದಾಗ್ರದಿಂ ನೆಲನ
ಬರೆವುತ್ತ ಪೋದಡೆಂದಡೆನುಡಿದು ತಡೆವ ಬಗೆ || ೧ ||

ಬೆಡಗಿ ನಿನ್ನಯ ದೇಹ ಬಡವಾಗಿ ಬಿಳುಚಾಯೆ
ವಡೆದು ನಸುನಡುಗುವೀ ಬಗೆಯೇನನೆ
ನುಡಿವುತಿದು ಸಹಜವೆಂದೊಡಲನೊಂದೆಸೆಗೊಲಿದು
ಬಿಡುದೊಗುವ ಕಂಬನಿಯ ತೊಡೆದೊಡನೆ ನುಯ್ವಬಗೆ || ೨ ||

ಮಡದಿಯರು ಪಲಬಗೆಯೊಳೊಡಬಡಿಸಿ ಎನ್ನ ಮುಂ
ಗಡೆಯೊಳೊಂದೆರಡು ಪದಗಳ ಪಾಡಿಸೆ
ಎಡೆ ಎಡೆಗೆ ಚಿಕ್ಕದೇವೇಂದ್ರಯೆಂಬೀ ಸೊಲ್ಲ
ನುಡಿಯಲೆಳಸುತ ನಾಣ್ಚುತೊಡಲ ನುಲಿಗೆ[1]ಯ್ವ[1]ಬಗೆ || ೩ ||

ಇಂತು ಪಿಂತಣಂ ಸಪ್ತಪದಿ ದಶಪದಿಗಳೊಳ್ ಶ್ರೀ ಚಿಕದೇವಮಹಾರಾಯಂ ಪ್ರಾಣಕಾಂತೆಯನಗಲ್ದಿರ್ಪ ವಿಪ್ರಲಂಭ ಶೃಂಗಾರಮಂ ನಿರೂಪಿಸಿದರ್.

[1] ಯ್ಯುವ (ಕ, ಖ)

Dr. Urmila Sharma Collection, Varanasi

CC0. In Public Domain, Digitizagtion by eGangotri

೬. ಕಾಂತೆ ಸಮ್ಮೊಗದೊಳ್ನುಡಿವ ಬಗೆಗಳ ಸಪ್ತಪದಿ

ಈ ಆಱನೆಯ ಸಪ್ತಪದಿಯೊಳ್ ಶ್ರೀ ಚಿಕ್ಕದೇವ ಮಹಾರಾಯ ನೊಳಪರಾಧ ಚಿಹ್ನಂಗಳಂ ಕಂಡ ಕಾಂತೆ ಸಮ್ಮೊಗದೊಳ್ನುಡಿವ ಬಗೆಗಳಂ ಪೇಳ್ವರ್.

೧. ಅದಱೊಳೊರ್ಮೊದಲ ತ್ರಿಪದಿಯೊಳ್ತಾಂ ಪ್ರತ್ಯಕ್ಷವಾಗಿ ಕಂಡ ತಪ್ಪುಗಳಂ ತನ್ನ ಚೌರ್ಯದಿಂದ ಪಲವಿಸುವ ಕಾಂತನೊಳ್ ಧೀರಾಧೀರೆಯಪ್ಪ ಕಾಂತೆಯೊರ್ವಳ್ ನುಡಿವಳ್. ಕಾಂತನೊಳ್ ತನಗುಂಟಾದ ಪ್ರೀತಿ ಕೋಪಂಗಳಂ ತನ್ನ ನಡೆನುಡಿಗಳಿಂ ಪ್ರಕಟಮಾಗದಂತೆ ವ್ಯಂಗ್ಯಮರ್ಯಾದೆಯಿಂ ತೋಱುವವಳ್ ಧೀರೆಯೆನಿಸುವಳ್. ಪ್ರಕಟಮಾದಂತೆಯುಮಾಗದಂತೆಯು ಮೆಸಗುವಳ್ ಧೀರಾಧೀರೆಯೆನಿಸುವಳ್. ಅತ್ಯಂತ ಪ್ರಕಟಮಪ್ಪಂತೆಸಗುವಳ್ ಅಧೀರೆಯೆನಿಸುವಳ್.

ರಾಗ : ಕಾಂಬೋಧಿ

ಅಂದವೇ ಈವಗೆಯ ಮಾಯ
ಆಯಿತಾಯಿತೇಳು ಚಿಕ್ಕದೇವರಾಯ || ಪಲ್ಲವಿ ||

ಒಲ್ಲೆ ಒಲ್ಲೆ ನಯ್ಯ ನಿನ್ನ ಬಗೆಯನೆಲ್ಲ
ಬರಿಯ ಬಿನ್ನಣಗಳ್ಲಿ ಬಳಸಸಲ್ಲ
ನಿನ್ನ ಬೆಲ್ಲಮಾತಿಗೆ ನಾನು ಬೆರೆವಳಲ್ಲ
ಬೇಡ ಬೇಡ ಇನ್ನು ಮೇಲೆ ಬಿನದವಲ್ಲ || ೧ ||

ಇದಿರು ನುಡಿಯತಕ್ಕವಳೆಯಲ್ಲ ನಾನು
ಎನ್ನ ವಂಚಿಸಿ ಬರುವ ಭಾಗ್ಯವೇನು
ಮೊದಲು ದಯದಿ ನಡಸಿದುದಿಲ್ಲವೆ ನೀನು
ಮುನಿಯೆ ದೆಯ್ವವಾರು ಇನ್ನು ಗೆಯ್ವುದೇನು || ೨ ||

ಅಹುದು ಕೇಳಿ ಒಲ್ಲೆ ಬಿಡು ಬಿಡು ಕೈಯ
ಆನು ಈ ಗರುಡಿಯೊಳಾಡಿದವಳಯ್ಯ
ಸಹಜವೆ ನಿನಗಿನಿತು ಚಾಯಮಾಯ
ಸಾಕು ಸುಮ್ಮನಿರು ಚಿಕ್ಕದೇವರಾಯ || ೩ ||

Dr. Urmila Sharma Collection, Varanasi

CC0. In Public Domain, Digitizagtion by eGangotri

ಈ ಪದದೊಳ್ ಅಂದವೆಮೀವಗೆಯ ಮಾಯವೆಂದೊಡಬಡಿಸುವುದಱುಂದೆಯುಂ, ಆರು ಇನ್ನು ಗೆಯ್ವುದೇನೆಂದು ಪಂಹರಿಸುವುದಱುಂದೆಯುಂ ತನ್ನ ಕೋಪಮನಿಸಿಸು ಮಱಸುವಳ್, ಆಯಿತಾಯಿತೇಳು ಬಲ್ಲೆ ಬಲ್ಲೆ ನಯ್ಯ, ಬಿಡು ಬಿಡು ಕೈಯ, ಇವು ಮೊದಲಾದ ಪಲವುಂ ಮಾತುಗಳಿಂ ಕೋಪಮಂ ಪ್ರಕಟಿಸುವಳ್, ಅದಱುಂದೀ ಕಾಂತೆ ಧೈರ್ಯಾಂಶಂ ಸ್ವಲ್ಪಮುಮಧೈರ್ಯಾಂಶಮಧಿಕಮುಮಾದ ಧೀರಾಧೀರೆಯೆನಿಸುವಳ್.

೨. ಈ ಎರಡನೆಯ ತ್ರಿಪದಿಯೊಳ್ ಧೀರಾಧೀರೆ ಪೇಳ್ವಳ್.

ರಾಗ : ನಾಗಗಾಂಧಾರಿ ; ತಾಳ : ಝಂಪೆ

ನಲ್ಲಳೆಸಗಿದ ತಪ್ಪು ನಲ್ಲ ನಿನಗೊಪ್ಪು
ನೀನೊಲ್ಲದೆನ್ನೊಳ್ಪು ನಿನಗೊಡಂಬಡದ ತಪ್ಪು || ಪಲ್ಲವಿ ||

ಇನಿಸು ದಯೆದಾಕ್ಷಿಣ್ಯವಿಲ್ಲದಡಱೊಳು ಮಱು
ಮೊನೆದೋಱು ಕರ್ದುಂಕಲದು ಮುದ್ದಾದುದು
ಮನಗರಗಿಯಾಗಾಯಮಾದುಡೊ ಇಲ್ಲವೆಂದನು
ವನಾರೈದೆನದು ಮುನಿಸಾದುದಕಟಾ || ೧ ||

ಕೂರುಗುರ್ಗಳೆಂಬ ಪೊಸಗೊಂತದಿಂದಿಱದಿಱದು
ಗಾರುಗೆಯ್ದುದು ಸರಸಗತಿಯಾದುದು
ಆರೈದು ಸಿರಿಗಂಧದಣ್ಪಿಡುತ ತವಕದಿಂ
ದೋರೊರ್ಮೆ ಪುಟ್ಟಲದು ದೋಷವಾದುದಕಟಾ || ೨ ||

ಸೂಸೆ ಪೊಸಬೆಮರು ನಿಡುಸುಯ್ಲ್ಗೊದವಿ ಮೆಯ್ಯುಱಿಗೆ
[1]ಗಾ[1]ಸಿಗೆಯ್ದುದು ನಿನಗೆ ಲೇಸಾದುದು
ಆ ಸೊರಗುವಗೆಯ ತಿಳಿದಳವಳಿದು ವಿಜ್ಜಣಿಗೆ
ಬೀಸಿದುದು ನಿನಗೆ ಮಿಗೆ ಬೇಸಱಾದುದಕಟಾ || ೩ ||

೩. ಈ ಮೂಱನೆಯ ದ್ವಿಪದಿಯೊಳ್ ಧೀರಾಧೀರೆ ಪೇಳ್ವಳ್.

---

[1] ರಾ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ರಾಗ : ಸೈಂಧವಿ

ಕುಱುಪುಸುಡಿಯ ಪೇಳ್ವೆ ಕೋಪಗೊಳ್ಳದಿರು ಎ
ನ್ನೆಱೆಯ ಶ್ರೀ ಚಿಕದೇವೇಂದ್ರ ಮಾಜದಿರು ॥ ಪಲ್ಲವಿ ॥

ಎಳೆವೆಱೆನಾಮ ಸುಣ್ಣಾಣೆ ಬಟ್ಟಮೊಗ
ಗಳಿಂದೆಸೆವ ಸೊಬಗಿಯ ಕಂಡೆದೆಗರಗಿ
ಮೊಳೆತು ಬಳೆದು ತುಂಬಿತು ಪೆಱೆಯೆಂದೊರೆ
ದಳವು ಮಿಾಱಿದ ಗೆಯ್ಮೆಯಸುಗೊಳಿಸಿದೆ ಗಡ ॥ ೧ ॥

ಒಳೆವಂದೊಳಿಗವೆಸಗುವ ಬಗೆಗಾತಿ
ಯೊಳು ಸಲ್ಲಸಗೆಯ ಬಾಯ್ದೆರೆಯ ಕಂಡು
ತೊಳಗುವ ಮೊಗಸಿರಿ ನನೆ ಪೂಪಣ್ಗಳ
ತಳ್ಪಯಿತೆಂದೊರೆದು ನೀ ತವಕವಡದೆ ಗಡ ॥ ೨ ॥

೪. ಈ ನಾಲ್ಕನೆಯ ತ್ರಿಪದಿಯೊಳ್ ಧೀರೆ ಪೇಳ್ವಳ್.

ರಾಗ : ಕಾಂಬೋಧಿ ; ಆದಿತಾಳ

ಚಿತ್ತವಿಸು ಚಿಕ್ಕದೇವೇಂದ್ರ
ಚಿತ್ತವಿಸು ಚಿಕ್ಕದೇವರಾಜೇಂದ್ರ ಶುಭಗುಣಸಾಂದ್ರ
॥ ಪಲ್ಲವಿ ॥

ನುಡಿವುದೆಂತು ನಿನ್ನೊಳು ಮನದನ್ನ
ಕಡೆಗಣ್ಣಿಡಡಿದೆ ನುಡಿಯದ ಮುನ್ನ ನಿ
ನ್ನಡಿಗೆಱಗುವೆ ನೀ ನುಡಿಸದಿರೆನ್ನ
ನುಡಿಗಳು ತತ್ತರವಡುತಿದೆ ನಿನ್ನ ॥ ೧ ॥

ಒಳುಮೊಗದೊಳುಬ್ಬೆಗದೊದವಿದೊ ನೀಱ
ಮುಳಿವರೆ ಈ ಪರಿ ಮೋಹನಾಕಾರ ನಾ
ತಿಳಿದೆ ತಿಳಿದೆನೀ ತೆಱದ ವಿಚಾರ
ಬಳಲಿದೆ ಸಾಕಿನ್ನು ಒಱೆಯುಪಚಾರ ॥ ೨ ॥

Dr. Urmila Sharma Collection, Varanasi

CC0. In Public Domain, Digitizagtion by eGangotri

ಅಡಿಗಡಿಗೌಡಗಿಯದಿರೆಸ್ನೋಪ ಬಿಡಗ
ಸೊಡಮಡಲಿಡುತಿದೆ ಕೋಪ ಎ
ನ್ನೆಡೆಯೊಳುಚಿತವೆ ಇನಿತಾಟೋಪ
ಬಿಡುಬಿಡು ಚಿಕದೇವೇಂದ್ರ ಮಹೀಪ ॥ ೩ ॥

೫. ಈ ಐದನೆಯ ತ್ರಿಪದಿಯೊಳುಂ ಧೀರೆ ನುಡಿವಳ್.

ರಾಗ : ಕಾಂಬೋಧಿ

ಏನಿದೆತ್ತಣ ಸೊಬಗೆತ್ತಣ ಗೆಲವು
ಮಾನವ ಮದನ ಮಿಗೆ ಮಟ್ಟುಮಾಱದೆ ನಿಂದು ॥ ಪಲ್ಲವಿ ॥

ಹೊಸದಾವರೆಯ ಪೇರೆಸಳ ಮೆಯ್ಸಿರಿದಳೆ
ದೆಸೆವ ಕಣ್ಗಡೆ ಕೆಂಪು ಮಸಗುತಿದೆ
ಎಸಗಿ ಕೆಳದಿಯರೊಳಣಿಕೆಗಾಳಗವಸು
ಬಸವಳಿಸಿ ಬಂದೊಂದು ಭಾವ ತೋಱುತಿದೆ ॥ ೧ ॥

ಕಳೆದು ಕಱೆಯನು ತುಂಬಿ ಬೆಳೆವ ಚಂದಿರನಂತೆ
ತೊಳಪಸುಣ್ಮೊಗ ಬೆಮರಳಿವುತಿದೆ
ಮುಳಿದು ಮಧುರಾಧರ ಮೊಗವ ನೆಗಹದಂತೆ
ಹಿಳಿದು ಹಿಪ್ಪೆಗೆಯ್ವೊಂದು ಹಮ್ಮದೋಱುತಿದೆ. ॥ ೨ ॥

ಶ್ರೀಮಂತಕೆಱೆಯ ಶ್ರೀ ಚಿಕದೇವರಾಯ ನಿ
ಸ್ಸೀಮ ನಿನ್ನಂಗ ಪೊಸಸಿರಿವೆತ್ತಿದೆ
ಈ ಮಹಿಯೊಳು ನಿನಗೆಣೆಯಿಲ್ಲವೆನೆ ಸತ್ಯ
ಕಾಮ ಶಿವಾಜಿಯ ಗೆದ್ದಗಾಡಿದೋಱುತಿದೆ. ॥ ೩ ॥

೬. ಈ ಆಱನೆಯ ತ್ರಿಪದಿಯೊಳ್ ಧೀರೆ ಪೇಳ್ವಳ್.

ರಾಗ : ಯರಕಲಕಾಂಬೋಧಿ

ಒಲಿದು ಲಾಲಿಪುದು ಲೇಸು
ಒಲಿದು ಲಾಲಿಪುದು ಲೇಸು
ಒಲ್ಲದಿರ್ದಡೊಂದು ಲೇಸು
ಒಲಿದಲ್ಲದೆ ಚೆಲ್ಲಾಡುವರೆ
ಚಿಕದೇವೇಂದ್ರ ॥ ಪಲ್ಲವಿ ॥

Dr. Urmila Sharma Collection, Varanasi

CC0. In Public Domain, Digitizagtion by eGangotri

ಚಲವಿಡಿದಾನು ನಿನ್ನ ಹಂಬಲನೆಂದೊಡಮಾ
ಬಲುಮೆಯೊಳು ಬಗೆಗೆ ಒರ್ಪರೆ ಭಾವಜಾಕಾರ
ಪಲಸೋಂತ ಭಾಮೆಯರ ಕೈಬಿಸಮಾಡವನೆನ್ನ ನೆನಹ
ನೆಲೆವೀಡುಗೊಂಬುದು ನಿತವೆ ನೆಱೆ ನೇಮಗಾಱ ॥ ೧ ॥

ಕರಗಿ ಕರಗಿ ಕುಂದಿಕುಂದಿ ಕರಕರೆಯೊಳಿರುವೆನ್ನ
ಕರಣಗಳ ಕಳವುಗೊಂಬರೆ ಕನ್ನಡರಾಯ
ಮರುಳುಗೊಂಡಿನಿಸು ಪೊತ್ತು ಮಱೆಯಲೀಸದೆನ್ನ ಮುಂದೆ
ಬರಬರದೆ ಬವಣೆಗೊಂಬರೆ ಬಣ್ಣಿಗಗಾಱ ॥ ೨ ॥

ಇನಿಯ ಚಿಕದೇವೇಂದ್ರ[1] ಕೇಳಿನಿಸು ನಿದ್ದೆಗೊಳದ
ಮುನ್ನ ತನುಮನವ ದಕ್ಕಗೊಂಬರೆ ತಚ್ಚನಗಾರ
ಅನಿತಱೊಳು ಸೊಗವ ಸುಗ್ಗಿಯನು ಭಾವಿಸಲೀಸದೆ
ಇನಿತು ಸೊಕ್ಕನೇಱಿಸುವರೆ ಚಿಕ್ಕದೇವೇಂದ್ರ ॥ ೩ ॥

೭. ಈ ಏಳನೆಯ ತ್ರಿಪದಿಯೊಳಾಧೀರೆಯೆನಿಪ್ಪ ತೆಲುಂಗಿತ್ತಿಯೊರ್ವಳ್ ಪೇಳ್ವಳ್.

ರಾಗ: ಶಂಕರಾಭರಣ

ರಾರಾ ರಾರಾಟುಲುಮಾನ
ವೇರಾವೆ ರಾಜಾಲು ಪೋರಾ ಪೋರಾಮುಲುಮನ
ಲೇರಾಲೆ ರಾಯಿಂಕಿ ॥ ೧ ॥

ಅಂತರಂಗರಂಗಮ್ಮೈ ಗೋ
ರಂತಸನಿ ಶ್ರೀಮಂತ
ಮಂತನ ಮುಂಸನಿ ಏಸ್ತ
ಏಂತ ಚೇತುರಾ ॥ ೨ ॥

ಏರಾ ಏರಾಜಸಮಿಂಕ
ತೀರ ತೀರ ದೇವೇಂದ್ರು
ಮಾರಾಮು ರಮ್ಮನಿಮೊ
ವೀರ ಚಿಕದೇವೇಂದ್ರ ॥ ೩ ॥

[1] ದೇವರಾಜೇಂದ್ರ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

೭. ಸ್ವಾಧೀನ ವಲ್ಲಭೆಯರ ವೃತ್ತಾಂತ ಸಪ್ತಪದಿ

೧. ಈ ಏಳನೆಯ ಸಪ್ತಪದಿಯೊಳ್ ವಿರಹೋತ್ಕಂಠಿತೆಯಪ್ಪ ಸ್ವಾಧೀನ ವಲ್ಲಭೆಯರ ವೃತ್ತಾಂತಮಂ ನಿರೂಪಿಸವರ್. ಅದಱೊಳೊರ್ಮೊದಲ ತ್ರಿಪದಿಯೊಳ್ ವಿರಹಿಣಿಯೊರ್ವಳ್ ಪ್ರಾಣಕಾಂತನಂ ಚಿಂತಿಸುತ್ತೆ ಸ್ನಾನಭೋಜನ ತಾಂಬೂಲಾನುಲೇಪನ ಭೂಷಣಾದಿ ವಿಷಯಂಗಳೊಳರುಚಿ ಪುಟ್ಟಿರ್ಪುದಂ ಕಂಡು ಮಱುಗಿ ನಯ ಭಯದಿಂ ಬುದ್ಧಿವೇಳ್ವ ಕೆಳದಿಯರಂ ಮೊಗಮುರಿಸಿ ನುಡಿವಳ್.

ರಾಗ: ಸೌರಾಷ್ಟ್ರ

ಎಮ್ಮ ಚಿಂತೆಯಿವರವರಿಗೇತಕಮ್ಮ
ಎಮ್ಮ ಸುಕೃತದ ಫಲವೆಂತಂತಿರುವೆವು ನಾವು || ಪಲ್ಲವಿ ||

ಮೊಗ ಕಿಱುದಾದರೇನು ಮೌನದೊಳಿದ್ದರೇನು
ದುಗುಡದೋಱಿದರೇನು ದೂಗಿದರೇನು.
ದುಗುಲವಾಸಿದರೇನು ತೊಡಿಗೆಯಿಲ್ಲದಿರೇನು
ಏಗುವೆ ನಾವೆಂತಿದ್ದರು[1] ಇದಕೆಲ್ಲ ತಮಗೇನು || ೧ ||

ಮರುಳು ವಿೂಱಿದರೇನು ಮೈ ಕರಗಿದರೇನು
ಕರಣಗುಂದಿದರೇನು ಕಂದಿದರೇನು
ಕುರುಳು ತಿದ್ದಿದರೇನು ಅರಳು ಸುತ್ತಿದರೇನು
ಇರುವ ತೆಱದೊಳೆಲ್ಲಯಿರುವೆವು ತಮಗೇನು || ೨ ||

ಮಿಕ್ಕು ವಿೂಱಿದರೇನು ಮೇರೆಯೊಳಿದ್ದರೇನು
ಚಿಕ್ಕದೇವರಾಜೇಂದ್ರಗೆ ಸಿಕ್ಕಿದರೇನು
ಚೆಕ್ಕಸ ಜೆಱಗಾದರೇನು ಬೆಗಡುದೋಱಿದರೇನು
ಅಕಟಾ ನಾವೆಂತಿದ್ದರು ಅದಕೆಲ್ಲ ತಮಗೇನು || ೩ ||

೨. ಈ ಎರಡನೆಯ ತ್ರಿಪದಿಯೊಳ್ ಇಂತು ಸೋಲ್ತೊಡೆ ಕಾಂತನೌದಾಸೀನ್ಯಂ ಗೆಯ್ವನೆಂದು ನುಡಿವ ನಲ್ಗೆಳದಿಯುಂ ಮಗುಳ್ದಿಂತು ಬುದ್ಧಿವೇಳ್ದಂತೆ

[1] (೩) ದಲ್ಲಿಲ್ಲ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಮೊಗಗೆಡಿಸಿಯವನಡಿಗೆ ಸೋಲ್ವುದೆ ತಸಗೆ ಪರಮ ಲಾಭಮೆಂದು ಕಾಂತೆ ಪೇಳ್ವಳ್.

ರಾಗ: ಅಸಾವೇರಿ

ಈ ಗುಣವ ಬಿಡುವಡೆಸಗಾಗದಾಗದು
ಮೇಗೆ ಬಂದುದೆಲ್ಲಾ ಬರಲಿ
ಭೋಗಿಪೆ ಪುಣ್ಯವಿದ್ದಂತೆ ॥ ಪಲ್ಲವಿ ॥

ಮುಚ್ಚಿದರಚ್ಚರಿಯೇನು
ಮೆಚ್ಚಿದಡೆಯಲ್ಲಿ ಮಸವ
ಬಿಚ್ಚಿ ಬಿನ್ನವಿಸೆ ಬಂದವೆಗ್ಗದಾವುದು
ಹೆಚ್ಚಿಗೆಯಿದೆಯೆಮಗೆಂ
ಮಿಚ್ಚಿಗೆ ಬಂದಂತೆ ನಾವು
ಮುಚ್ಚುಮಱೆಯೇತಕಿಂದು
ಮೊದಲಿಂತು ನುಡಿಯದಿರೆ ॥ ೧ ॥

ಸೋತರೆ ಸೋಜಿಗವೇನು
ಸೋತೆಡೆಗಂತರಂಗವ
ಜೀತವಿರಿಸಲು ಬಂದ
ಭೀತಿಯಾವುದು
ಸೀತವಿದೆಯಮಗೆಮ್ಮ ರೀತಿಗೆ ಬಂ
ದಂತೆ ನಾವು ಮಾತುಗಳಿಂ ಫಲವೆ ನೀ
ನೀ ತೆಱದಿ ನುಡಿಯದಿರೆ ॥ ೨ ॥

ಸಿಕ್ಕಿದರೆ ಸಿಕ್ಕೇನು
ಚಿಕದೇವೇಂದ್ರಸೀತಸುವ
ದಕ್ಕುಗೊಳಿಸಲು ಬಂದ ತಪ್ಪದಾವುದು
ಹೆಕ್ಕಳವಿದೆಮಗೆ ಎಮ್ಮ ಮನ ಬಂದಂತೆ ನಾಸು
ಮಿಕ್ಕಮಾತೇಸು ನಾಸಿನ್ನು ಮೇಲಿಂತು ನುಡಿಯದಿರೆ. ॥ ೩ ॥

೩. ಈ ಮೂಱನೆಯ ತ್ರಿಪದಿಯೊಳ್ ಕಾಂತಸೊಳೊಡವೆರೆದು ಸಂತಸ

[1] ರ್ದರೆ (ಕ).

Dr. Urmila Sharma Collection, Varanasi

CC0. In Public Domain, Digitizagtion by eGangotri

ದೊಳಿರುವ ಕಾಂತೆ ಮುಂ ತಾನನುಭವಿಸಿದ ವಿರಹ ಸಂತಾಪಮಂ ಪ್ರಕಟವಾಗಿ ಪೇಳದೆ ತನ್ನನೊಡಂಬಡಿಸಲೆಂದು ಕಾಡುವ ಕೆಳದಿಯರ ಸುಡಿಗಳ ನೆವದೊಳೆ ಕಾಂತಂಗೆ ತಿಳುಪುವಳ್.

ರಾಗ: ಮಧುಮಾಧವಿ.

ಹಲವು ತೆಱದಿ ಸುಡಿವಗರ್ುತ್ತ್ರದವಾಡಲಾಱೆನು
ಚಲುವರರಸ ನಿನ್ನನಗಲ್ದ ಚಿಂತೆಯಿಲ್ಲ ಶಿಖಿತೆಯಿಲ್ಲ? || ಪಲ್ಲವಿ ||

ಮೊಗವೇತಕಿನಿತು ಕಿಱುದಾಯಿತೆಂದು
ಮೌನಸಾಕು ಮಾತನಾಡೆಂದು
ಏಗುವೆ ಏಗುವೆ ಬಾಯೊಳು ಏಳೆಯವೇತಕಿಲ್ಲೆಂದು
ದುಗುಲವಿದೆಲ್ಲಿ ದೊರೆಕೊಂಡುದೆಂದು
ತೊಡಿಗೆಯನೇತಕೆ ತೊಡ[ಲೊ]ಲ್ಲೆನೆಂದು
ಮುಗುದೆ ತಾನದೊಳೀಪರಿ ಮೋಹ ಕಂಡು ಕೇಳಿದುದಲ್ಲವೆಂದು || ೧ ||

ಇನ್ನು [ಮುಖ] ಮಜ್ಜನವೇತಕಿಲ್ಲೆಂದು
ಇನಿತು ನಾಮವ ಇಡಬೇಕೆಂದು
ಅನ್ನವೆಂಬ ಮಾತೆ ಸೇರದಿನ್ನಾವ ಹದನೆಂದು
ನಿನ್ನ ಮೆಯ್ಯ ಸೀನೆ ನೋಡೆಂದು
ನನ್ನ ಗಿಂದಿಗೆ ಕರಗಿತೆಂ[1]ದು
ಮೊನ್ನೆ ಸುತ್ತಿರ್ದ ಹಸರವಿನ್ನು ಮುಡಿಯೊಳಿರ್ಪುದು[1] ಕಡುಚೋದ್ಯವೆಂದು.
|| ೨ ||

ಬೆಕ್ಕಸು ಬೆಱಗುವಡೆಯದಿರೆಂದು
ಬೀಸಿ ಬೀಸಿ ಸುಸುಳ್ದು ಬೆಡಾವೆಂದು?
ಚಿಕ್ಕದೇವರಾಯಗೆ ನಾವು ತಿಳುಹುವೆವೆಂದು
ಸುಕ್ಕುಗುರು[ಳ್][2] ತಿದ್ದಿಕೊಳ್ಳೆಂದು
ಸೋಜಿಗವೆಂದು ಕೈಗೆಡುವುದೆಂದು
ಅಕ್ಕಟ[2] ನಿನ್ನವ್ರೋಲೀಪರಿ ಮೆಯ್ಯ ವೋಲಕ್ಕಱುಲ್ಲದರನಱಿಯೆವೆಂದು. || ೩ ||

---

[1] (ಖ) ದಲ್ಲ ಲುಪ್ತ.
[2] (ಖ) ದಲ್ಲ ಲುಪ್ತ.

Dr. Urmila Sharma Collection, Varanasi

CC0. In Public Domain, Digitizagtion by eGangotri

೪. ಈ ನಾಲ್ಕನೆಯ ತ್ರಿಪದಿಯೊಳ್ ಕಾಂತೆ ಮುಂ ತನ್ನ ಸಂತಾಪದ ವೇಳೆಯೊಳೇಡಿಸುವ ಸವತಿಯರ ಸುಡಿಗಳ ನೆವದಿಂದ ಕಾಂತನೊಳ್ತನ್ನ ಪ್ರೀತಿಯುಂ ಪ್ರಕಟಿಸುವಳ್.

ರಾಗ : ಘಂಟಾರವ

ಈಗಲು ನೆನೆಯೆ ದಿಗುಲೆಸುತಾಲಿದೆ
[1]ಆಗ ನಾನಿದ್ದಿರವು ಹಾಗೇ[ನಾ]ದರು ಬೇಡ[2]ವೆಂದಿಗೂ
|| ಪಲ್ಲವಿ ||

ಒಱದೆ ಬಳಲಿದಳೆಂದು
ಪಡೆದು ಒಂದುದಿಸಿತೆಂದು
ಅಱತು ಅಱಯಳಯ್ಯಯ್ಯೊ ಅಕಟಾಯೆಂದು
ನೆರೆದಲ್ಲಿ[3]ದುಳಿಯಳೆಂದು
ನಿಜಮೋಹದಿರವೇಕೆಂದು[4]
ಮಱತೆಱಯಿಲ್ಲದಾಡುವ ಮಡದಿಯರ ಮಾತನೆಲ್ಲ || ೧ ||

ಇವಳಿಚ್ಛೆ ಸಂದಪುದೆಂದು
ಈ ಕಣ್ಣಾಲಿ ನೋಳ್ಪೆವೆಂದು
ಇವಳಿಗೆ ಹಿತವ[5]ರಾರು ಇಲ್ಲವೆ ಎಂದು
ಅವರವರಾಯತಗಳ
ಅವರವರ್ ಬಲ್ಲರೆಂದು
ತವಕೂಡಗೂಡಿ ನುಡಿವ ಕಾಂತೆಯರ ಮಾತನೆಲ್ಲ || ೨ ||

ಎಕ್ಕಸಕ್ಕ ಏವ[ಳ]ಂಗೆಂದು
ಇಲ್ಲಗಿದು ಸಲ್ಲದೆಂದು
ಮಿಕ್ಕಮಾತೇನುಮ್ ಮರುಳು ಏಾಱತೆಂದು

---

[1] (ಖ) ದಲ್ಲಿ ಲುಪ್ತ.
[2] (ಖ) ದಲ್ಲಿ ಲುಪ್ತ.
[3] (ಖ) ದಲ್ಲಿ ಲುಪ್ತ.
[4] (ಖ) ದಲ್ಲಿ ತ್ರುಟಿತ.
[5] (ಖ) ದಲ್ಲಿ ತ್ರುಟಿತ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಚಿಕ್ಕದೇವರಾಯ ಧೀರ
ಸಿಕ್ಕದಿರು ಇವ'ಳಿಗೆಂದು
ಸೊಕ್ಕುತಲೆಗೇಱಿ ನುಡಿವ ಸವತಿಯರ ಮಾತೆಲ್ಲ || ೩ ||

೫. ಈ ಐದನೆಯ ತ್ರಿಪದಿಯೊಳ್ ಕಾಂತೆ ತನ್ನೊಳ್ [1]ಕಾಂತನತ್ಯಂತ ಪ್ರೀತಿಗೆಯ್ವುದಂ ಕಂಡು ಕಱುಬುವ ಸವತಿಯರ ನುಡಿಗಳ ನೆವ[2]ದಿಂ ತನ್ನ ನಂಬುಗೆಯಂ ತಿಳುಪುವಳ್.

ರಾಗ: ವಸಂತ ಭೈರವಿ

ಎನ್ನ ಮಾನಾವಮಾನವು ನಿನ್ನ ದೆನಗೇಸು
ಚೆನ್ನಿಗ ಚಿಕದೇ[3]ವರಾಯ ನಿನ್ನ ಚಿತ್ತವೆನ್ನ ಭಾಗ್ಯ || ಪಲ್ಲವಿ ||

ಇಂದಲ್ಲದಿನ್ನೆಂ[1]ದಿಗೆಂದು ಎಂದಿಗು ಇಂತು ಸಲ್ಲೆಂದು
ಮಂದಿವಾಳವಿದು ತಳಮಗುಚದಿರದೆಂದು
ಹಿಂದೆಣಿಸಿ ಪಲವನೆಮ್ಮೊಂದಲಿಂತು ಒಂದುದೆಂ[4]ದು
ನೆವವಿಲ್ಲದಾಡುವರ ಮುಂದೆ ತೆರದಲ್ಲಿ ನಡಸಿದರು[4] (?) || ೧ ||

ಇವಳಿಗಿಂತೇತಱುಂದೆಂದು ಇಂದಿಗೆ ನಾಳೆ ಬೇಱೆಂದು
ನವ [5]ಮೋಹ[6]ದಲ್ಲಿ ನಾವೆಲ್ಲ ನಡೆದ ತೆಱನೆಂದು
ಇವಳೇಸುಗೆಯ್ವು[6]ಳುಪಾಯ ಅವನ ದಯದಿರವಿಂತೆಂದು
ನೆವವಿಲ್ಲ[6]ದಾಡುವರ ಮುಂದೆ ತೆರದಲ್ಲಿ ನಡಸಿದರು || ೨ ||

ಉಕ್ಕಿದೊಗವುದೆಂದು(?) ಸೊಕ್ಕು ತರವಲ್ಲವೆಂದು
ತಕ್ಕಂತೆ ನಡೆಯಲದು ಸಲ್ಲುವುದೆಂದು
[7]ಚಿಕ್ಕದೇವೇಂದ್ರನ ಬಗೆ ಸಿಕ್ಕದಿನ್ನು ಇವಳಿಗೆಂ[7]ದು
ಕಕ್ಕುಸಗೊಂಡಾಡುವರ ಕಣ್ಣಮುಂದೆಂತು ನಡಸಿದರು. || ೩ ||

[1] (ಖ) ದಲ್ಲಿ ತ್ರುಟಿತ.
[2] (ಖ) ದಲ್ಲಿ ತ್ರುಟಿತ.
[3] (ಖ) ದಲ್ಲಿ ತ್ರುಟಿತ.
[4] (ಖ) ದಲ್ಲಿ ತ್ರುಟಿತ.
[5] ಲೋಹ (ಕ).
[6] (ಖ) ದಲ್ಲಿ ತ್ರುಟಿತ.
[7] (ಖ) ದಲ್ಲಿ ತ್ರುಟಿತ.

Dr. Urmila Sharma Collection, Varanasi

CC0. In Public Domain, Digitizagtion by eGangotri

೬. ಈ ಆಱನೆಯ ತ್ರಿಪದಿಯೊಳ್ ಕಾಂತೆ ಕಾಂತನೊಳ್ ತನಗುಳ್ಳ ನೇ[1]ಹನಂಬುಗೆ ಸಲಿಗೆಗಳಂ ಕೆಳದಿಯರ ದೂಱುವ ನೆವದೊಳ್[1] ತೆಲುಂಗ ಗೆಳತಿಯೊರ್ವಳ್ಗೆ ಪೇಳ್ವಳ್.

ರಾಗ: ಮೋಹನ

ವಾರಿಕಿ ವಾರಿಂತೆಗಾನೆವ್ವರಿಕೆವ್ವರಮ್ಮ ನಾ
ವಾರಲೆನಾಪ್ಯೆ ಸಿಲೆ ಸೀ ನೇರಮೆಂಚುಕೊನೆರಂತೆ || ಪಲ್ಲವಿ ||

[2]ಅಂತಿಂತಟ ತಿರುಗುನನಿ ಆಯುವುಕನು[2]ಗೊನೆನನಿ
ಇಂತಿಯೊಕ್ಕತೆ ಚಾಟುನಸೆತ್ತಿಂಚುನನಿ
ಚೆಂತಜೇರಿ ನಿಲಿಚಿತಾನೆ ಚ್ಯೆಲಾಗು ಕಮದುನನಿ
ಅಂತರಂಗವ್ಯೆನ ಚಲುಲೆ ಅಡಿಕಾಗಾನಾಡೆರಂಟೆ || ೧ ||

[3]ಚನವಾರುಲ ಮಿಂಚೆನನಿ ಸರಸನಿಕಿ[3] ಹನೆನನಿ
ಮನಸಿಗಾ ತಾಸಂದಿರಿಕಿ ಮಾಟಾಡುನನಿ
ಕಸಿಕರ ಮುನಿ ನಾಟಿಕಿಗನ ಮುಜೆಗುವೋನೆನನಿ
ಎನಸಿ ನಾ ತೊಯಕ ವ್ಯೆನ ಇಂತುಲೆ ಎಡನಾಡೆ[ರ]ಂಟೆ ||೨||

ಏಡೆ ಚಿಕ್ಕದೇವೇಂದ್ರುನಿ ವೆನಿವೆಂಟ ತಿರುಗುನನಿ
ಎಡ ಮೋನಿಗೂಚುನೆ ಮೇಮೊ ನಿನ್ನ ಎಂಚುನನಿ
ಪಡಕಿಂಟಿಪನುಲುತನ ಪಾಲೆಜೆಸು ಕೊನೆನನಿ
ಎಡಯನಿನೆಸರುಗುಲು ನಿಸಹಿತವರುಲೇ ದೂರೆರಂಟೆ || ೩ ||

೭. ಈ ಏಳನೆಯ ತ್ರಿಪದಿಯೊಳ್ ಶ್ರೀ ಚಿಕದೇವ ಮಹಾರಾಯಂ ನೆವಮಿಲ್ಲದ ನೇಹದಿಂ ತನ್ನಂ ಕಾಪಿಟ್ಟು ಲಾಲಿಸುವತಿಶಯಮುಮಂ ಸೈರಿಸದ ಸವತಿಯರ್ ಬೆದಱುಸಿ ನುಡಿವ ಮಾತಿಂಗಳ್ಕಿ ಒಂದು ಕೇಳ್ದ ಕೆಳದಿಯರೊಡನೆ ತಮ್ಮ ಸ್ವಾತಂತ್ರ್ಯದಿಂ ಪೆರ್ಚಿದರ್ಗ್ಯೆಸೆ ಭಯಂ ಅವಂ ನಡೆಸಿದಂತೆ ನಡೆ ವೆಸಗಾವಗಂ ನಿರ್ಭಯಮೆಂದು ತನ್ನ ಸೌಭಾಗ್ಯಮುಂ ಮೆಱೆವಳ್.

[1] (ಖ) ದಲ್ಲಿ ತ್ರುಟಿತ.
[2] (ಖ) ದಲ್ಲ ತ್ರುಟಿತ.
[3] (ಖ) ದಲ್ಲಿ ತ್ರುಟಿತ.

Dr. Urmila Sharma Collection, Varanasi

CC0. In Public Domain, Digitizagtion by eGangotri

ರಾಗ: ಮಧುಮಾಧವಿ

ಎದೆಯ ಮೆಟ್ಟಿನಿಂದವೊಲಿರುವೆ ಮತ್ತೇನು
ಇದಱ ಮೇಲೆ ಬರುವುದೇನು ಬಂದರೆ ಬರಲಿ ॥ ಪಲ್ಲವಿ ॥

ಕಱುಬಿ ಕರೆಗೊಳುವರ ಗರುಮುರುಗುಟ್ಟುವರ
ಬೆಱಗುವಟ್ಟು ನಿಲುವರ ಬೆದಱುಸುವರ
ಕೊಱತೆಯನೆಣಿಸುವರ ಕುಚಿತವಾಗಿ ಕಾಂಬರ
ಬೆಱೆತು ನುಡಿವರ ಸೆಱೆತು ನೋಡುವರ ॥ ೧ ॥

ಚಿಂತಿಸಿಯಳಲುವರ ಸಿಡಿಮಿಡಿಗೊಳುವರ
ಪಂತವನಾಡಿಕೊಂಬರ ಬಲ್ಮೆದೋರ್ಪರ
ತಂತಮ್ಮ ಪೊಗಳಿಕೊಂಬರ ತರಹರಿಸಲಾಱದವರ
ಅಂತರವನಱಿಯದವರ ಅಂತಿಂತೆಂದು ನುಡಿವರ ॥ ೨ ॥

ಮೊಗದಿರುಗುವವರ ಮೋನದೊಳಿರುವರ
ಹಗೆಯ ಸಾಧಿಸುವರ ಹಮ್ಮೈಸುವರ
ಮುಗುಳು ನಗೆದೋಱುವರ ಮೋಡಿಯ ಕಾಣಿಸುವರ
ಏಗುವೆ ಚಿಕದೇವರಾಯನೇನು ಮೆಚ್ಚಿದನೆಂಬರ ॥ ೩ ॥

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

ಪರಿಶಿಷ್ಟ ೧

ಅರ್ಥಕೋಶ

[ಮೊದಲನೆಯ ಸಂಖ್ಯೆ ಪುಟವನ್ನೂ ಎರಡನೆಯದು ಪದ್ಯವನ್ನೂ ಸೂಚಿಸುತ್ತದೆ. ಪ=ಪಲ್ಲವಿ, ವ=ವಚನ.]

ಅಂಗಭವ=ಮನ್ಮಥ, 26—2
ಅಂದುಗೆ=ಕಾಲಗಡಗ, 34—1 ವ
ಅರಳು=ಹೂವು. 53—2
ಅಲತಿಗೆ=ಅಲಕ್ತಕ (ಸಂ), ಅರಗು, 42—3
ಅಳ್ಳಿಱವಾಡು=ಸ್ಪಂದನ, ಕಂಪನ 27—2

ಆಯತ=ಯೋಗ್ಯತೆ 56—2
ಆಯತಾಪಾಂಗ=ದೀರ್ಘವಾದ ಕಡೆಗಣ್ಣಿನ ನೋಟ 18—1 ಪ

ಇಳೆಯಾಣ್ಮ=ರಾಜ, 16—1

ಈಡು ಜೋಡು=ಸರಿಸಮ 20—7

ಉಯ್ಯಲ್=ಉಯ್ಯಾಲೆ 23—2 ಪ
ಉಜ್ಜುಗ=ಉದ್ಯೋಗ 23—2

ಎಕ್ಕಸಕ್ಕ=ಅಸಹನೆ, ಎಡವಟ್ಟುತನ 56—3

ಕಂತುಶರ=ಮನ್ಮಥಬಾಣ 26—1
ಕರ್ಕಸ=ಕಠಿಣ 21—5
ಕರ್ದುಂಕು=ಎಸೆ 49—1
ಕರ್ದುಕು=ಚುಚ್ಚು 27—2
ಕಮ್ಮಲರು=ಸುವಾಸನೆಯುಳ್ಳ ಪುಷ್ಪ 30—2
ಕರಣ=ಸಾಮರ್ಥ್ಯ 53—2
ಕಲ್ಪಶಾಖಿ=ಕಲ್ಪವೃಕ್ಷ 17—1
ಕಾಪು=ರಕ್ಷಣೆ 17—1
ಕುಱುಪು=ಗುರುತು 50—ಪ
ಕುಸುಮಾಯುಧ=ಮನ್ಮಥ 46—2
ಕೋವಿದ=ವಿದ್ವಾಂಸ 20—7

ಗಗನಮಣಿ=ಸೂರ್ಯ 17—2
ಗಡಣ—ಸಮೂಹ 46—1
ಗಾಡಿಕಾಱ=ಸೊಬಗುಕಾರ 20—7

ಚಂದ್ರಗಾವಿ—ಕೆಂಪು ಅಂಚುಳ್ಳ ಸೀರೆ 34—1 ವ
ಚಟುಲತೆ=ಚಟುವಟಿಕೆ, ಕಂಪನ 34—1ವ
ಚಲ್ಲವಡು=ಸರಸವಾಡು 19—2
ಚೌದಾಯಿ=ನಾಲ್ಕನೆ ಒಂದು ಭಾಗ 21—3

ಜಾಲ=ಮೋಸ, ಬಲೆ 19—6
ಜಕ್ಕುಳಿಸು— ನಿಂದಿಸು, ದೂರ 35—2
ಜೊನ್ನ=ಬೆಳದಿಂಗಳು 33—3

ಡೋಱುಗೊಱೆ=ತೂತುಕೊರೆ 26—1

ತಣ್ಪು=ತಂಪು 33—3
ತಱಗು=ಒಣಗಿದ ಎಲೆ 32—1
ತರವಱಿ=ರೀತಿಯನ್ನು ತಿಳಿ ? 24—2
ತೋರಶಿಖೆ=ಉದ್ದವಾದ ಜಡೆ 17—2
ಠಾಣಕ=ಸ್ಥಾನಕ, ನಿಲುವಿನಭಂಗಿ 34—1 ವ
ತಿರುಗು=ಸುವಾಸನೆ 42—1
ತಿರುವೇಱಿಸು=ಹೆದೆಯೇರಿಸು 46—2

Dr. Urmila Sharma Collection, Varanasi

CC0. In Public Domain, Digitizagtion by eGangotri

ದಾಯ=ಬಹುಮಾನ 43—2
ದುಗುಲ=ರೇಷ್ಮೆ ಬಟ್ಟೆ 53—1

ನಱುಗಂಪು=ಸುವಾಸನೆ 23—2

ಪಂದಲೆ=ಹಸಿತಲೆ, ಆಗತಾನೆ ಕತ್ತರಿಸಿದ ತಲೆ 21—4
ಪಗದಿ=ಪೊಗದಿ 21—3
ಪಡಿಬರಿಸು=ಮುತ್ತಿಗೆ ಹಾಕು 20—9
ಪಳಯಿಗೆ=ಬಾವುಟ 19—5
ಪಾಡೞಿಸು=ಸ್ಥಾನಚ್ಯುತಿ ಮಾಡು, ಮುಖಭಂಗ ಮಾಡು 18—3
ಪಾದಪೆಂಡೆಯ=ಕಾಲಂದುಗೆ 22—3
ಪಾವುಗೆ=ಮೆಟ್ಟಲು 30—1
ಪುಂಡರೀಕಾಕ್ಷ=ವಿಷ್ಣು 15—1
ಪುಲ್ಲವಿಸು=ಪುಸಲಾಯಿಸು, 46—3
ಪೆಂಪು=ಹಿರಿಮೆ 18—3
ಪೊಗರು=ಕಾಂತಿ 22—1
ಪೊಱವಾೞಿ=ನಿತಂಬ 37—2
ಪೊಲಬು=ದಾರಿ 29—3
ಪೊಂಗದಪು=ಚಿನ್ನದ ಬಣ್ಣದ ಕೆನ್ನೆ 22—2
ಪೊಂಬರಿಗೆ=ಹೊನ್ನಿನ ಪಟ್ಟಿ ? 22—1
ಪೌಜು=ದಂಡು, ಸೇನೆ, 20—8

ಬೞಿಕಾಲಿಕಲ್ಸರ=ಕಾಲಿನ ರತ್ನಸರ 32—2
ಬಸವಳಿಸು=ಆಯಾಸ ಪಡಿಸು 15—1
ಬಿಗುಹು=ಬಿಗುಮಾನ 28—1 ವ
ಬಿಡುತೆ=ಬಿಡುವಿಕೆ, ನಾಟ್ಯದಲ್ಲಿನ ಒಂದು ಭಂಗಿ 35—4
ಬಿಡುಬು=ಬಿಡುವು, ನಾಟ್ಯಭಂಗಿ 35—4
ಬಿಱುಬು=ಆವೇಶ, ಉತ್ಕಟ 26—2
ಬಿಸುಪು=ಕಾವು 32—2

ಮಂದಿವಾಳ=ಅಸಂಬದ್ಧ, ಅಪ್ರಸಕ್ತ 57—1
ಮಣಿಪಾವುಗೆ=ವಜ್ರವೈಢೂರ್ಯದಿಂದ ಮಾಡಿದ ಪಾದರಕ್ಷೆ 31—3
ಮುಱುಕು=ಬಳುಕಾಟ, ಬಿಟ್ಟು ? 42—2

ಲಂಘನೆ=ಹಾರುವಿಕೆ, ನಾಟ್ಯ ಭಂಗಿ 35—4
ಲಗಡೆಱಗು=ದಡಿಯಂತೆ ಬೀಳು 21-3
ಲತಾವೇಷ್ಟನ=ಬಳ್ಳಿಯಂತೆ ಸುತ್ತಿಕೊಂಡ 36 ವ
ಲಳಿಮಸಗು=ಅತ್ಯಧಿಕವಾಗು 26-2
ಲಾಗು=ಲಘುತ್ವ, ನಾಟ್ಯಭಂಗಿ 35-4

ವಾಜಿ=ಕುದುರೆ 21-4
ವಿಜ್ಜಣಿಗೆ=ಬೀಸಣಿಗೆ 49-3
ವಿತರಣ=ಔದಾರ್ಯ 18-5 ವ
ವಿಪಕ್ಷ=ವೈರಿ 15-1
ವೀರಾಯತ=ವೀರೋಚಿತ 18-5 ವ

ಸಬಾರವಶ್ಯ=ಭಾವಾವೇಶ, ಹರ್ಷೋದ್ವೇಗ 33-ವ
ಸುಸಿಲ್=ರತಿ 35-ವ
ಸೆಗಳಿಕೆ=ಝಳ 26-2
ಸೆಜ್ಜೆವನೆ=ಮಲಗುವ ಮನೆ 32-3
ಸೋಗೆ=ಗುಂಡುನವಿಲು 32-2

ಶ್ರಿಖಿತೆ=? 55 ಪ

ಹೞಿವೆಣಿಸು=ಪರಿಹಾರಮಾಡು 31-5
ಹೆಕ್ಕಳ=ಅತಿಶಯ ಆಧಿಕ್ಯ 46-2

Dr. Urmila Sharma Collection, Varanasi

CC0. In Public Domain, Digitizagtion by eGangotri

ಪರಿಶಿಷ್ಟ—೨

ಪದ್ಯಗಳ ಅಕಾರಾದಿ

[ಮೊದಲ ಸಂಖ್ಯೆ ಸಪ್ತಪದಿಯನ್ನೂ ಎರಡನೆಯ ಸಂಖ್ಯೆ ಪದವನ್ನೂ ಮತ್ತು ಮೂರನೆಯ ಸಂಖ್ಯೆ ಚರಣವನ್ನೂ ಸೂಚಿಸುತ್ತದೆ.]

ಅಗಣಿತ ಪುಣ್ಯೋದಯ	೩-೭-೧
ಅಡಿಗಡಿಗೆ	೬-೪-೨
ಅಡಿಗೊನೆಯಿರ್ಕುಳಿಂ	೪-೫-೩
ಅಡಿದೊಡರ್ವನಿದು	೪-೧-೪
ಅಱಿಸಂಚೆವಱಿಯು	೨-೫-೨
ಅರಸಕೇಳ್ನೀನು	೫-೧-೧
ಅಱಿತು ಅಱಿಯದೆ	೨-೭-೧
ಅಱಿವಿಲ್ಲದೆರ್ದಗೆ	೫-೬-೨
ಅಱೆನೋಂತು ಮುನ್ನ	೨-೭-೩
ಅವನ ನೋಡಿದಂದು	೩-೨-೧
ಅಸಮುಖದೊಳು ಬಂದು	೧-೬-೧
ಅಹುದು ಕೇಳಿಬಲ್ಲೆ	೬-೧-೪
ಆನಾರದಾದ್ಯರಂತಾನಂದ	೧-೧-೨
ಆಳ್ದನೆಣೆಸಿರುವ ಪರಿ	೫-೪-೩
ಇಂದಲ್ಲದಿನ್ನೆಂದಿಗೆ	೭-೫-೩
ಇದಿರು ನುಡಿಯ	೬-೧-೩
ಇನ್ನು ಮೊ [ಖ]	೭-೨-೩
ಇನಿಯ ಚಿಕ್ಕದೇವೇಂದ್ರ	೬-೬-೨
ಇನಿಯನೆಲ್ಲದನು	೫-೪-೧
ಇನಿಸು ದಯೆದಾಕ್ಷಿಣ್ಯ	೬-೩-೧
ಇಱಿದೆ ನಿಗುರುವ	೫-೯-೩
ಇವಳಿಗಿಂತೇಕಱಿಂ	೭-೫-೩
ಇವಳಿಚ್ಛೆ	೭-೪-೩
ಈಮೆನು ಈರೀತಿ	೩-೪-೧
ಉಕ್ಕಿದೊಗವುದೆಂದು	೭-೫-೨
ಎಕ್ಕಸಕ್ಕವಿವಳ	೭-೪-೨
ಎಡಗಾಲು ಗೊನೆಯನು	೪-೪-೨
ಎಡಬಲವಗೆಗಳು	೧-೫-೧
ಎಡವಿಡದೆ ಬಂದೆರಗುವ	೧-೨-೧
ಎನ್ನರಸ ಚಿಕದೇವೇಂದ್ರ	೫-೪-೨
ಎನ್ನಾಳ್ದ ಚಿಕದೇವೇಂದ್ರ	೩-೭-೨
ಎನ್ನಾಳ್ಯ ನೇಸಟು	೩-೪-೨
ಎಱೆಯ ಚಿಕ್ಕದೇವೇಂದ್ರ	೩-೬-೨
ಎಲ್ಲ ನಾಡುಗಳ	೧-೬-೩
ಎಸಳುಗಂಗಳು	೫-೨-೧
ಎಳೆವೆರೆ ನಾಮ	೬-೨-೧
ಏವಿದ ಮುನವಚ್ಚೆ	೩-೪-೩
ಏರಾ ಏರಾಜ	೬-೭-೨
ಒಕರಿತೋನ ಮಾಟ್ಲಾಡಕ	೩-೫-೩
ಒಗುವ ಕಂಬನಿಯ	೩-೬-೩
ಒಡುವರುವ ಜೀವ	೫-೯-೨
ಒಸೆದು ಪನ್ನೀರೆರೆದು	೨-೫-೩
ಒಳುಮೊಗದೊಳುಬ್ಬೆಗ	೬-೪-೩
ಅಂತರಂತ	೬-೭-೩
ಅಂತಿಂತಟ ತಿರುಗು	೭-೬-೧
ಕಂತು ಶರಹತಿಗೆನ್ನ	೩-೬-೧
ಕಂಡರಸಿದಂತೆವೊಲು	೩-೧-೨
ಕಡುಗಿ ಬಾಯ್ದುರೆ	೪-೭-೨
ಕಡುಗೆಸಱನೊಳಾನೆ	೧-೭-೧
ಕಱಿಗ ಕಱಿಗ	೬-೬-೩

Dr. Urmila Sharma Collection, Varanasi

CC0. In Public Domain, Digitizagtion by eGangotri

ಕಱುಬಿ ಕಱೆ	೭-೭-೧
ಕರುಬಿ ಕುತುಪಶಾಹ	೧-೬-೫
ಕಲಸಿ ಮುನ್ನೊಕನಾಡು	೪-೬-೨
ಕಳೆದು ಕಱೆಯನು	೬-೫-೨
ಕಿಱುಬೆಮಂಗೆ ಮುಡಿ	೪-೫-೩
ಕುದುರೆಯೆಣ್ಬಾಸಿರ	೧-೬-೮
ಕುಲಗೋತ್ರಗಳ	೧-೫-೩
ಕೂಱುಗುರ್ಗಳೆಂಬ	೬-೨-೨
ಕೆಳದಿ ನೋಡುತಿರೆಂದು	೩-೪-೨
ಕೆಳದಿಯೋರ್ವಳ ಮಗ್ಗುಲ	೫-೨-೨
ಕೊನರ್ವ ಮನಮುಚ್ಚನ	೨-೨-೨
ಕ್ರಮದಿ ತನ್ನಯ	೪-೩-೩
ಗಡಿಯ ಎನ್ನೋಯುಗ	೨-೫-೧
ಗಜವಾಜಿಯುಂಟೆಂಬ	೧-೭-೪
ಘುಳಲನೆರ್ದಸೆರಗ	೪-೨-೨
ಚತನವಾರುಲ ಬಂಜಿನನಿ	೭-೬-೨
ಚರಣಕೆರಗಿದರ	೧-೧-೨
ಚಲವಿಡಿದಾನು ನಿನ್ನ	೬-೬-೧
ಚಿಕ್ಕದೇವೇಂದ್ರ	೩-೩-೩
ಚಿಕ್ಕದೇವೇಂದ್ರ ನಿನಗೆ	೩-೧-೩
ಚನ್ನಲರ ನೆಮ್ಮದಿನಿ	೨-೫-೩
ಚೆಲುವರಸ ನಿನಗೆ	೩-೧-೨
ಚೆಲುವೆಯನು	೫-೫-೨
ಚಿಂತಿಸಿನಿಯುಳಲುವರ	೭-೭-೨
ಜಡೆದುಡುಕಿ ಲೀಲೆಯಿಂ	೫-೭-೨
ಜನಜನಿತವಾಗಿ	೨-೩-೩
ಜನನಿ ಬಸವಳಿಯದಿರು	೩-೨-೨
ಜಱುಗೈಯ್ಯೊಳದೆ	೪-೪-೨
ತೆಕ್ಕವಿಸಲೆಳಸಿ	೫-೮-೨
ತಡೆಯದೊಂದೊಂದಾಗಿ	೫-೯-೧
ತರುಣಿ ನೀನೀಪಱಿಯ	೫-೧೦-೧
ತಡೆಯೆ ಮುನಿದು	೪-೭-೧
ತುಡುತುಡುತ ಕೆಳದಿ	೩-೪-೧
ತೊಡೆ ತೊಡೆಯ	೫-೭-೩
ದಕ್ಕುಗಾತಿ ಸೊಕ್ಕದಿರು	೩-೨-೩
ನರಪತಿಯ ಬಯಸಿ	೨-೩-೨
ನಲ್ಲ ಶ್ರೀಚಿಕದೇವ	೫-೮-೩
ನಳತೋಳನೆರಡ	೪-೧-೩
ನಾಡೊಳಿರುವ ನೆಲೆವೀಡು	೧-೬-೭
ನಿಱದುಡುಕೆ ಪೆರದೆಗೆದು	೪-೨-೩
ನುಡಿದರೆ ನಿಜ	೩-೩-೧
ನುಡಿವುದೆಂತು ನಿನ್ನೊಳು	೬-೪-೧
ನೆರೆಗೊಂಡ ದುಂಡು	೨-೧-೨
ನಂಬಿ ಸೇರಿದ ಜನರ	೧-೩-೩
ಪಗೆವರಂ ಪಿಡಿದ	೧-೩-೨
ಪಡತಿನಾ ಕೊಡಲಿ	೪-೬-೧
ಪಡಿವೊಗಕೆ ನಡೆ	೫-೨-೧
ಪದಿನೈದು ಕಲೆಗಳ	೧-೫-೨
ಪರಿತಂದ ಧರ್ಮ	೧-೧-೧
ಪಲವಹ ಮನೋರಥ	೨-೨-೩
ಪಸರಿಸೆ ತಳ್ತಾಸು	೪-೪-೧
ಪಸಿರ್ದ ಕಿವಿಗಳ್ಗೆ	೫-೬-೨
ಪಿಡಿದು ನೀವಿಯ	೪-೭-೩
ಪೂಸಿಪನ್ನೀರ	೩-೬-೧
ಪೊಱೆಯೆತ್ತಿದೇಳಲಿ	೩-೬-೨
ಪೊಳೆವ ಪೊಂಬರಿಗೆ	೨-೧-೧
ಪೊಸದಾವರೆಯ	೬-೫-೧
ಪೊಂದುಡಿಗೆಗಳ	೪-೧-೧
ಬನ್ನಣೆಮಾತು	೩-೩-೨
ಬರಸೆಳೆದು ಮೇಲ್ವಾಯ್ದು	೫-೭-೧
ಬಱಿದೆ ಬಳಲಿದಳೆಂದು	೭-೪-೧
ಬಲ್ಲ ಬಲ್ಲನಯ್ಯ	೬-೧-೧
ಬಳಸಿಯೆಣ್ದೆಸೆಯೊಳು	೧-೬-೯
ಬಳಿಕಂಚೆ ದುಪ್ಪಳು	೪-೪-೪
ಬಳಿವಂದೂಳಿಗವೆಸಗುವ	೬-೩-೨
ಬಳಿವರುವ ಕೆಳದಿಯರ	೪-೨-೧

Dr. Urmila Sharma Collection, Varanasi

CC0. In Public Domain, Digitizagtion by eGangotri

ಬಾಯಾರ್ದ್ದ ಕಣ್ಗಳಿಗೆ ೫-೬-೧
ಬಿಡದೇಳೆ ಬೆಮರ್ಗಳಿಡೆ ೪-೧-೫
ಬಿಕ್ಕಸ ಬೆಜಗು ೨-೩-೩
ಬೆಡಗಿ ನಿನ್ನಯ ೫-೧೦-೭
ಬೆಡಗಿ ನೆರೆಯೂರ್ಗೆ ೩-೭-೧
ಬೆಳಕಿಗೆ ಕಣ್ಣಲರ್ದು ೪-೪-೫
ಬೆಳೆವ ಬೇಟದ ೭-೭-೧

ಮಡದಿ ಚಿಕದೇವೇಂದ್ರ ೫-೭-೩
ಮಡದಿಯರು ಪಲಬಗೆ ೫-೧೦-೩
ಮಧುರೆ ತಂಜಾವೂರ ೧-೨-೭
ಮಱುಳು ಮಾರಿದರೇನು ೨-೧-೭
ಮಿಕ್ಕು ಮಾಱಿದರೇನು ೨-೧-೩
ಮಿಱುಪ ಮೊನೆ ೫-೩-೭
ಮಿಸುಗೆ ನಸುನಗೆ ೪-೧-೭
ಮುಗಿಲ ನಾಡನಿತಕ್ಕೆ ೧-೨-೩
ಮುಗುಳು ಮೊನೆಗಳಿಂ ೪-೩-೭
ಮುದದಿ ಮುಂಬರಿದೆನ್ನ ೪-೩-೧
ಮುದದಿ ವಂಶೋದ್ಧಾರ ೧-೭-೧
ಮುದದೊಳವನ ಮುದ್ದು ೭-೨-೭
ಮೆಚ್ಚಿದರಚ್ಚರಿ ೨-೭-೧
ಮೆಲುವಯ್ದಿಯ್ತಂದು ೧-೬-೬
ಮೊಗಕಿಱಿದಾದರೇನು ೨-೧-೧
ಮೊಗದಿರುಗುವವರ ೨-೨-೩
ಮೊಗನೋಡಲೆಳಸಿ ೫-೮-೧
ಮೊಗವ ನೋಡದ ಮುನ್ನ ೪-೫-೧

ಮೊಗವೇತಕಿಸಿಷು ೨-೩-೧

ಯೊದುಲಶಾಹನನಿರವು ೧-೬-೪

ರನ್ನ ತಿಲಕದಂತೆ ೧-೪-೧
ರಸವಶದಿ ಚಿಕದೇವ ೫-೫-೩
ರಸಿಕ ಶ್ರೀಚಿಕದೇವ ೫-೧-೩

ಲೂಟಿಯ ಮಾಯ ಮರಾಟ ೧-೬-೩

ವನಿತೆಯೆನ್ನೊಳೇಕಾಂತ ೫-೫-೧
ವಿಡೆ ಚಿಕ್ಕದೇವೇಂದ್ರ ೨-೬-೩

ಶ್ರೀಮಂತಱಿಱೆಯ ೬-೫-೩

ಸಡಗರದೊಳೆದ್ದು ೩-೫-೧
ಸರಸ ಚಿಕದೇವೇಂದ್ರ ೫-೫-೩
ಸಲುವರ ಸಂತಸ ೧-೭-೭
ಸಸಿಗಲ್ಲ ಬಟ್ಟಲೊಳು ೩-೬-೩
ಸಿಕ್ಕಿದರೆ ಸಿಕ್ಕೆನು ೨-೭-೩
ಸ್ಥಿರ ಚಿಕ್ಕದೇವೇಂದ್ರ ೧-೭-೩
ಸಿಱಿಯೊಡಲ ಗುಣ ೩-೨-೩
ಸುಗುಣ ಕೇಳ್ನಿನ್ನ ೫-೧-೭
ಸುಗುಣ ನಿನಗೆ ೩-೧-೧
ಸುರತ ಕೇಳಿ ನೀ ೪-೬-೩
ಸೊಕ್ಕಿ ಮೇಲ್ವಾಯ್ದು ೧-೨-೫
ಸೂಸಿ ಪೊಸಬೆಮಱು ೬-೭-೩
ಸೋತರೆ ಸೋಜಿಗ ೨-೭-೭

ಹದಮಾರಿ ನಿನ್ನೆಡೆಗೆ ೩-೪-೩

Dr. Urmila Sharma Collection, Varanasi

CC0. In Public Domain, Digitizagtion by eGangotri

ಪರಿಶಿಷ್ಟ—೩

ಪಲ್ಲವಿಗಳ ಅಕಾರಾದಿ

[ಪಲ್ಲವಿಯ ಮುಂದಿನ ಸಂಖ್ಯೆ ಪುಟಸಂಖ್ಯೆಯನ್ನು ಸೂಚಿಸುತ್ತದೆ]

ಆಗಲ ಸೈರಿಪುದೆಂತೊ ೪೫
ಆದೆಬಂದನಿದೆಬಂದ ೨೦
ಅವಳ ಕಡುನೇಹ ೩೧
ಆಗಲಾಗಲಾಗಲದಕೇನು ೨೭
ಆಡುಬುಟ್ಟು ೨೫
ಇನಿಯನನುವ ೨೩
ಇನಿಯಳೀ ೩೯
ಇನಿಯಳೆದೆಯಿರವ ೪೦
ಇನ್ನೇನು ಮದನ ೪೪
ಈಗಲು ನೀನೆ ೫೬
ಈ ಗುಣವ ೫೪
ಎಂತು ಸೈರಿಪಳೊ ೩೬
ಎಂದಿಗೆ ಮೊಗನೋಡುವೆ ೨೨
ಎದೆಯ ಮೆಟ್ಟಿಸಿಂದ ೫೯
ಎನ್ನ ಮಾನಾವಮಾನ ೫೭
ಎಟುಲಪೊರ್ಬ್ಬುನೊ ೩೮
ಎಮ್ಮ ಚಿಂತೆ ೫೩
ಏನಿದೆತ್ತಣ ೫೧
ಏಮಿಶೇಯುದು ೨೪
ಏವೆಯನ್ನದೆ ೨೬
ಒಡಲತನಿ ೪೧
ಒಲಿದು ಲಾಲಿಪುದು ೫೧
ಅಂದವೇ ಈವಗೆ ೪೮
ಕಣ್ಣೊಳು ಕಟ್ಟಿದ ೩೯
ಕನ್ನೆರನ್ನೆಯ ೩೪
ಕಳೆದಳೀಪರಿ ೩೦
ಕಾಣದಿರಲಾರೆನೆ ೨೩
ಕುರುಪುನುಡಿಯ ೫೦
ಚಿತ್ತವಿಸು ೫೦
ತರುಣಿ ತೊಡಗೆಯ ೪೨
ತೊಳಪನೊರ್ವ್ವನೆ ೧೬
ದುಂಡುದೋಳ ೧೭
ದೊರೆಗೊಳಿಸುವೆ ೧೮
ನಲ್ಲಳೆಸಗಿದ ತಪ್ಪು ೪೯
ನೆನೆನೆನೆದು ಎನ್ನ ೪೩
ನೆನೆಯಲೆನಗಿರ್ವಂದು ೪೭
ನೋಡಕೂಡದು ೩೨
ಪೇಳಿದೆನು ಮಾಯ ೨೯
ಪೋದಪೊತ್ತರಿಯದೆ ೩೭
ಮನದನ್ನಳೀಗಲೀ ೪೬
ಮಡಿಕವಾತನು ೩೩
ಮುನಿವದುಚಿತ ೨೮
ಮಂಗಳ [ಂ]ಮಹಿಶೂರ ೧೫
ರಾಜಿಪನು ಚಿಕದೇವ ೧೬
ರಾಯ ಪರಾಕು ೧೨
ರಾರಾ ರಾರಾ ೫೫
ವಾರಿಕಿ ವಾರಿಂತೆ ೫೮
ಸಾರಿದೆ ನಾಡಿದ ೨೯
ಸುಗುಣೆಯಿನಿಸು ೩೫
ಸುಳಿಸುಳಿದು ೪೧
ಹಲವು ತೆರದಿ ೫೫

Dr. Urmila Sharma Collection, Varanasi

CC0. In Public Domain, Digitizagtion by eGangotri

ಅನುಬಂಧ

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

ಚಿಕದೇವರಾಯ ಸಪ್ತಪದಿ ಮತ್ತು ಗೀತಗೋಪಾಲಗಳಲ್ಲಿ ಸಂಗೀತ

ರಾ. ಸತ್ಯನಾರಾಯಣ (ಮೈಸೂರು ಸಹೋದರರು), ಸಂಗೀತಶಾಸ್ತ್ರಗೌರವ ಪ್ರಾಧ್ಯಾಪಕ, ಶ್ರೀವರಲಕ್ಷ್ಮೀ ಲಲಿತಕಲಾ ಅಕಾದೆಮಿ, ಮೈಸೂರು.

ವಿಜಯನಗರ ಸಾಮ್ರಾಜ್ಯದ ಪತನವಾದಮೇಲೆಯೂ ಕನ್ನಡನಾಡು ತನ್ನ ಐಕ್ಯವನ್ನೂ ವೈಶಿಷ್ಟ್ಯವನ್ನೂ ಹಿರಿಮೆಯನ್ನೂ ಉಳಿಸಿಕೊಳ್ಳಲು ಮೈಸೂರಿನ ಅರಸರಾದ ಒಡೆಯರ ವಂಶವು ಬಹುಮಟ್ಟಿಗೆ ಕಾರಣವಾಗಿದೆ. ಈ ಮನೆತನದ ಪ್ರಭುಗಳು ಪರಾಕ್ರಮಿಗಳೂ ವಿವೇಕಿಗಳೂ ಪ್ರಜಾವತ್ಸಲರೂ ಆಡಳಿತದಲ್ಲಿ ದಕ್ಷರೂ ಆಗಿದ್ದುದರಿಂದ ಕನ್ನಡನಾಡು ಬಹುವಾಗಿ ವಿಸ್ತರಿಸಿ ಬಹುಕಾಲ ಶಾಂತಿ ಸಮೃದ್ಧಿಗಳು ನೆಲಸಿದವು. ಆದುದರಿಂದ ಮೈಸೂರು ಕಲೆ ಮತ್ತು ಸಂಸ್ಕೃತಿಗಳ, ಸರಸ್ವತೀ ಶಕ್ತಿಯ ಪೀಠವಾಯಿತು; ಸುಮಾರು ಎರಡು ಶತಮಾನಗಳ ಕಾಲದಲ್ಲಿ ಕನ್ನಡನಾಡು ಸಂಗೀತ ನೃತ್ಯಗಳಲ್ಲಿ ಪಡೆದಿದ್ದ ನಾಯಕತ್ವವನ್ನು ಉಳಿಸಿಕೊಂಡು ಭಾರತೀಯ ಸಂಸ್ಕೃತಿಗೆ ಬೃಹತ್ತು ಮಹತ್ತುಗಳಲ್ಲಿ ಸಮನಾದ ಸೇವೆಯನ್ನು ಸಲ್ಲಿಸಲು ಸಾಧ್ಯವಾಯಿತು. ಈ ಭವ್ಯಪರಂಪರೆಯನ್ನು ಈ ಅರಸುಗಳು ಮೈಸೂರಿನಲ್ಲಿ ರಾಜತ್ವವು ರದ್ದಾಗುವವರೆಗೂ ರಕ್ಷಿಸಿಕೊಂಡು ಬಂದರು.

ಇದರಲ್ಲಿ ಚಿಕದೇವರಾಯನ ಆಳ್ವಿಕೆಯ ಕಾಲವು (ಕ್ರಿ. ಶ. 1673 ರಿಂದ 1704) ಮೈಸೂರಿನ ಕಲಾ ಇತಿಹಾಸದಲ್ಲಿ ಸುವರ್ಣಯುಗವೇ ಸರಿ. ಇವನ ಹಿಂದೆ ಆಳಿದ ನರಸರಾಜೇಂದ್ರನು ರಣಧೀರಕಂಠೀರವನಾಗಿದ್ದುದಷ್ಟೇ ಅಲ್ಲದೆ ಸ್ವತಃ ಸಂಗೀತ ಸಾಹಿತ್ಯಗಳಲ್ಲಿ ಪಾಂಡಿತ್ಯವನ್ನೂ ಪ್ರತಿಭೆಯನ್ನೂ ಗಳಿಸಿದ್ದವನು, ಸಂಗೀತ ಸಾಹಿತ್ಯ ಶಾಸ್ತ್ರವಿಶಾರದನೆಂಬ ಬಿರುದು ವಹಿಸಿದ್ದವನು. ಅವನ ಆಸ್ಥಾನದಲ್ಲಿ 'ಪಾಣಿಪಲ್ಲವದೆ ಪಿಡಿದು ವಲ್ಲಕಿಯ ಕಟ್ಟಾಣಿ ಮುತ್ತಿನ ಚೌಕುಳಿಯ ಮಾಣದೆ ಧರಿಸಿಹ ಬಯಕಾರ'[1] ವೀಣಾಕೃಷ್ಣಯ್ಯನೂ, 'ಶೃಂಗಾರಕವಿ ಬಾಲಕವಿ ಸಂಗೀತದುತ್ತುಂಗನೆನಿಪ'[2] ಭಾರತಿನಂಜನೂ ಮೈಸೂರಿನ ಸಂಗೀತ ಸೌರಭ ಸಂಭ್ರಮವನ್ನು ಸಾರುತ್ತಿದ್ದ ಕಾಲವದು. ಅವನ ರಾಜಧಾನಿಯಾದ ಶ್ರೀರಂಗಪಟ್ಟಣವು ಹೀಗೆ ಇತ್ತೆಂದು ಗೋವಿಂದ ವೈದ್ಯನು ವರ್ಣಿಸುತ್ತಾನೆ:

Dr. Urmila Sharma Collection, Varanasi

CC0. In Public Domain, Digitizagtion by eGangotri

ಗಾಯಕ ನಟನಾಯಕ ಪರಿಹಾಸಕ | ಧೀಯುಕ್ತರಹ ವಿನೋದಿಗಳ |
ಆಯತವಡೆದ ಕೇರಿಗಳೊಪ್ಪಿ ಮೆರೆವ ಸು | ದಾಯವನೇನ ಬಣ್ಣಿಪೆನು ||
ಪ್ರಾಣೇಶನನಗಲಿದ ನೀರೆ ಧರ ರುದ್ರ | ವೀಣೆಯ ಕರದಲ್ಲಿ ಪಿಡಿದು |
ಮಾಣದೆ ನುಡಿಸುತಿರಲು ಭೀತಿಯಿಂ ಪಂಚ | ಬಾಣನಲ್ಲಿಂ ತೆರಳಿದನು ||
ಬಳಿಕೊಂದೆಡೆಯಲಿ ತಾಳಮದ್ದಳಗೀತ | ಗಳ ವೇಳದರ್ತಿಯೊಳಾಗ |
ಎಳೆವೆಂಗಳಿಗೆ ನಾಟ್ಯಕಲಿಸುವ ಭರತಜ್ಞ | ರುಲುಹೊಪ್ಪಿತಾ ಬೀದಿಯೊಳಗೆ ||[3]

ಅವನ ಆಸ್ಥಾನದಲ್ಲಿನ ಸಂಗೀತಪ್ರಾಧಿಮೆಯನ್ನೂ ಅವನು ಮನಮುಟ್ಟು ವಂತೆ ಬಣ್ಣಿಸಿದ್ದಾನೆ.[4] ಈ ಪರಂಪರೆ ಚಿಕದೇವರಾಯನ ಆಸ್ಥಾನದಲ್ಲಿಯೂ ಅನುಸ್ಯೂತವಾಗಿ ಹರಿದು ಬಂದಿತು. ಅಲ್ಲಿ ಹೊಸಗನ್ನಡಕ್ಕೆ ಬುನಾದಿ ಕಟ್ಟಿದ ಪ್ರಖ್ಯಾತಕವಿಗಳು ಹಲವರಿದ್ದರು; ಆಧುನಿಕ ಕರ್ಣಾಟಕ ಸಂಗೀತದ ಕಣ ಸನ್ನು ಕಂಡ ಗಾಯಕರು ಹಲವರಿದ್ದರು. ಇಂತಹವರಲ್ಲಿ 'ಆಸ್ಥಾನಸಮುಖದ' ವೀಣಾವೆಂಕಟಸುಬ್ಬಯನೂ ಒಬ್ಬನು.[5] ಅಷ್ಟೇ ಅಲ್ಲ, ಚಿಕದೇವರಾಯನೇ ಸ್ವತಃ ಕವಿಯೂ ವೈಣಿಕನೂ ಆಗಿದ್ದವನು. ಅವನ ವೀಣಾಕೌಶಲವನ್ನು ತಿರುಮಲಾರ್ಯನು ಚಿಕದೇವರಾಜವಿಜಯದಲ್ಲಿ ಎತ್ತಿಹೇಳಿದ್ದಾನೆ:

ಜಾಣಂ ಬೀಣೆಯಿನೀ ಕುಮಾರ ಚಿಕದೇವಂ ಬಾಜಿಸುತ್ತಿರ್ಪಿನಂ |
ಪ್ರಾಣಂ ಬಂದುದು ಜಂತ್ರಜಿಜ್ಞೆಗೆ, ಜಸಂ ಪೋಗಿತ್ತು ಸಂಗೀತಕಂ |
ಪೂಣಲ್ಕಾದುದು ದೇವಗಾನದಿರವಿಂಗಾಮೆಲ್ಲರುಂ ಜೆಲ್ಲದಿಂ |
ಪಾಣಿಪ್ರಾಂತದೊಳಾಂತುದಿಂದುಚಿತಮಾಯ್ತುವಾಣಿಯುಂ ವೀಣೆಯಾ |

ಅನಿತುಂ ತಂತ್ರಿಗಳಿಂದಮೊಂದೆ ದನಿಯುಣ್ಮಿತ್ತೆಂಬಿನಂ ಕೂಡೆ ಸು
ಣ್ಣನೆ ಕಂಬಚ್ಚಿನೊಳೀಳ್ದ ಪೊಜರಿಗೆಯುಂ ಪೋಲ್ವುಗ್ಗಂ, ಶ್ರುತಿಸ್ಫೂರ್ತಿ ಕ
ಮ್ಮಗೆ ಕಸ್ತೂರಿಯುಂ ಕಂಪಿನಂತೆ ಕವಿಗುಂ ನಾದಂ, ಸ್ವರಪ್ರಕ್ರಮಂ
ಘನ ರತ್ನಾವಳಿಯಂತೆ ತೋಱಿ ಚಿಕದೇವಂ ಬಾಜಿಕುಂ ವೀಣೆಯಂ ||[6]

ಇದೇ ಗ್ರಂಥದಲ್ಲಿ ಪುನಃ ಪುನಃ ಚಿಕದೇವರಾಯನ ವೀಣಾವಾದನ ವೈದಗ್ಧ್ಯವನ್ನು ವರ್ಣಿಸಿದರೂ ಕವಿಯು ತಣಿಯದೆ ಹೋಗಿದ್ದಾನೆ. ಅಂತಹ ವನು 'ರಸಿಕಜನ ಕರ್ಣರಸಾಯನೀಕೃತ ಸಂಗೀತವಿಸ್ತರ'ನೆಂಬ ಬಿರುದು ವಹಿಸಿದ್ದರಲ್ಲಿ ಅತಿಶಯವೇನೂ ಇಲ್ಲ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಚಿಕದೇವರಾಯ ಸಪ್ತಪದಿ

ಈ ಹಿನ್ನೆಲೆಯಲ್ಲಿ ಚಿಕದೇವರಾಯ ಸಪ್ತಪದಿಯನ್ನೂ ಗೀತಗೋಪಾಲವನ್ನೂ ಅಭ್ಯಾಸಮಾಡಬೇಕು. ಏಕೆಂದರೆ ಇವೆರಡೂ ಶುದ್ಧವಾಗಿ ಹಾಡಿ, ನುಡಿಸಲೆಂದೇ ರಚಿತವಾದ ಹಾಡುಗಬ್ಬಗಳು; ಅವು ತಮ್ಮ ರಚನಾಕಾಲದ ಸಂಗೀತಸ್ಥಿತಿಗೆ ಯಥಾವತ್ತಾಗಿ ಕನ್ನಡಿ ಹಿಡಿಯುತ್ತವೆ. ಎರಡನ್ನೂ ಗೀತರೂಪಕಗಳಾಗಿ, ನೃತ್ಯರೂಪಕಗಳಾಗಿ ರಂಗದಮೇಲೆ ತರಬಹುದು. ಇವುಗಳನ್ನು ಚಿಕದೇವರಾಯನೇ ರಚಿಸಿದ್ದರೆ ಆಶ್ಚರ್ಯವೇನೂ ಆಗುತ್ತಿರಲಿಲ್ಲ; ಇದಕ್ಕೆ ಬೇಕಾದ ರಸಿಕತೆ, ಕಲ್ಪನಾವಿಲಾಸ, ಭಾವಸಂಪತ್ತಿ, ಶಬ್ದಸಂಪತ್ತಿಗಳೂ ವಾಕ್–ಗೇಯ ರಚನಾಸಾಮರ್ಥ್ಯವೂ ಅವನಲ್ಲಿದ್ದವು.

ಚಿಕದೇವರಾಯ ಸಪ್ತಪದಿಯೆಂಬುದು ಗ್ರಂಥದ ಹೆಸರೇ ಎಂಬುದು ಸ್ಪಷ್ಟವಾಗಿಲ್ಲ. ಕಾವ್ಯದಲ್ಲಂತೂ ಹಾಗೆಂದು ಎಲ್ಲಿಯೂ ಹೇಳಿಲ್ಲ. ಆದರಲ್ಲಿ ಸಪ್ತಪದಿಗಳ ಮೂಲಕ ವಿಭಾಗವನ್ನೇನೋ ಮಾಡಿದೆ; ವಿಭಾಗಗಳಿಗೂ ಈ ಶಬ್ದದಲ್ಲಿಯೇ ಮುಗಿಯುವ ಹೆಸರುಗಳನ್ನೇ ಕೊಟ್ಟಿದೆ. ಆದರೆ ಗೀತಗೋಪಾಲದಲ್ಲಿಯೂ ಹೆಚ್ಚುಕಡಿಮೆ ಇದೇ ಪದ್ಧತಿಯನ್ನು ಅನುಸರಿಸಿದೆ. ಇದು ಹೇಗೇ ಇರಲಿ, ಸಪ್ತಪದಿಯೆಂಬ ಮಾತು ವಿಶಿಷ್ಟರೀತಿಯ ಪ್ರಬಂಧವೊಂದು ಎಂಬ ಅರ್ಥದಲ್ಲಿಯೂ ಏಳು 'ಪದಿ'ಗಳಲ್ಲಿ ರಚಿತವೆಂಬ ಸಾಮಾನ್ಯಾರ್ಥದಲ್ಲಿಯೂ ಇಲ್ಲಿ ಪ್ರಯುಕ್ತವಾಗಿದೆ. ಮೊದಲನೆಯ ಅರ್ಥದಲ್ಲಿ ಅದು ಜಯದೇವನ ಗೀತಗೋವಿಂದದಿಂದ ನಿಸ್ಸಂಶಯವಾಗಿ ಸ್ಫೂರ್ತಿಪಡೆದುದು. ಗೀತಗೋಪಾಲವಂತೂ ಗೀತಗೋವಿಂದದೊಡನೆ ನಾಮಸಾದೃಶ್ಯ, ವಸ್ತುಸಾದೃಶ್ಯ ಮತ್ತು ರಚನಾಸಾದೃಶ್ಯಗಳನ್ನು ಸ್ಪಷ್ಟವಾಗಿ ಹೊಂದಿದೆ. ಜಯದೇವ ಕವಿಯಾದರೂ ಅಷ್ಟಪದಿಯೆಂಬುದನ್ನು ವಿಶಿಷ್ಟಛಂದೋಬಂಧವುಳ್ಳ, ಪ್ರತಿಯೊಂದರ ಅಂತ್ಯದಲ್ಲೂ ಪಲ್ಲವಿಯಂತಹ ಧ್ರುವಪದವೊಂದು ಪುನರಾವರ್ತಿತವಾಗುವ, ಎಂಟು ನುಡಿಗಳ ಪ್ರಬಂಧ ಪ್ರಕಾರವೆಂದು ವ್ಯವಹರಿಸಿದರೂ ಈ ಲಕ್ಷಣವು ಸಂಗೀತಶಾಸ್ತ್ರದಲ್ಲಿ ಪುನಃ ಎಂದೂ ವರ್ಣಿತವೂ ಆಗಲಿಲ್ಲ, ಲಕ್ಷ್ಯದಲ್ಲಿ ಸ್ಥಿರರೂಪನ್ನು ಪಡೆಯಲೂ ಇಲ್ಲ. ಅದು ಸಂಗೀತಲಕ್ಷ್ಯದಲ್ಲಿ ಏಕೈಕವಾಗಿ ಉಳಿದುಕೊಂಡಿದೆ. ಶಿವಾಷ್ಟಪದಿ, ಉಪನಿಷದ್‌ಬ್ರಹ್ಮನ ರಾಮಾಷ್ಟಪದಿ, ವೆಂಕಟಮಖಿಯ ತ್ಯಾಗರಾಜಾಷ್ಟಪದಿ ಮುಂತಾದವುಗಳು ಗೀತಗೋವಿಂದದ ಅಷ್ಟಪದಿಯ ರಚನೆಯಿಂದಲೇ ಸ್ಫೂರ್ತಿ ಪಡೆದು ರಚಿತವಾದ ಸಂಸ್ಕೃತ ಕಾವ್ಯಗಳು; ಸಂಗೀತಕ್ಕೆಂದು ಬರೆದ ಹಾಡುಗಳು. ಅಷ್ಟಪದಿಯೆಂದು ಸಂಗೀತಲಕ್ಷ್ಯದಲ್ಲಿ ಶೃಂಗಾರ

Dr. Urmila Sharma Collection, Varanasi

CC0. In Public Domain, Digitizagtion by eGangotri

ಗಾಯಕ ನಟನಾಯಕ ಪರಿಹಾಸಕ | ಧೀಯುಕ್ತರಹ ವಿನೋದಿಗಳ |
ಆಯತವಡೆದ ಕೇರಿಗಳೊಪ್ಪಿ ಮೆರೆವ ಸು | ದಾಯವನೇನ ಬಣ್ಣಿಪೆನು ||
ಪ್ರಾಣೇಶನಸಗಲಿದ ನೀರೆ ಧರ ರುದ್ರ | ವೀಣೆಯ ಕರದಲ್ಲಿ ಪಿಡಿದು |
ಮಾಣದೆ ನುಡಿಸುತಿರಲು ಭೀತಿಯಿಂ ಪಂಚ | ಬಾಣನಲ್ಲಿಂ ತೆರಳಿದನು ||
ಬಳಿಕೊಂಡೆಡೆಯಲಿ ತಾಳಮದ್ದಳಗೀತ | ಗಳ ವೇಳದರ್ತಿಯೊಳಾಗ |
ಎಳೆವೆಂಗಳಿಗೆ ನಾಟ್ಯಕಲಿಸುವ ಭರತಜ್ಞ | ರುಲುಹೊಪ್ಪಿತಾ ಬೀದಿಯೊಳಗೆ ||[3]

ಅವನ ಆಸ್ಥಾನದಲ್ಲಿನ ಸಂಗೀತಪ್ರೌಢಿಮೆಯನ್ನೂ ಅವನು ಮನಮುಟ್ಟುವಂತೆ ಬಣ್ಣಿಸಿದ್ದಾನೆ.[4] ಈ ಪರಂಪರೆ ಚಿಕದೇವರಾಯನ ಆಸ್ಥಾನದಲ್ಲಿಯೂ ಅನುಸ್ಯೂತವಾಗಿ ಹರಿದು ಬಂದಿತು. ಅಲ್ಲಿ ಹೊಸಗನ್ನಡಕ್ಕೆ ಬುನಾದಿ ಕಟ್ಟಿದ ಪ್ರಖ್ಯಾತಕವಿಗಳು ಹಲವರಿದ್ದರು; ಆಧುನಿಕ ಕರ್ಣಾಟಕ ಸಂಗೀತದ ಕಣಸನ್ನು ಕಂಡ ಗಾಯಕರು ಹಲವರಿದ್ದರು. ಇಂತಹವರಲ್ಲಿ 'ಆಸ್ಥಾನಸಮುಖದ' ವೀಣಾವೆಂಕಟಸುಬ್ಬಯನೂ ಒಬ್ಬನು.[5] ಅಷ್ಟೇ ಅಲ್ಲ, ಚಿಕದೇವರಾಯನೇ ಸ್ವತಃ ಕವಿಯೂ ವೈಣಿಕನೂ ಆಗಿದ್ದವನು. ಅವನ ವೀಣಾಕೌಶಲವನ್ನು ತಿರುಮಲಾರ್ಯನು ಚಿಕದೇವರಾಜವಿಜಯದಲ್ಲಿ ಎತ್ತಿಹೇಳಿದ್ದಾನೆ:

ಜಾಣಂ ಬೀಣೆಯಿನೀ ಕುಮಾರ ಚಿಕದೇವಂ ಬಾಜಿಸುತ್ತಿರ್ಪಿನಂ |
ಪ್ರಾಣಂ ಬಂದುದು ಜಂತ್ರಬಿಜ್ಜೆಗೆ, ಜಸಂ ಪೋಗಿತ್ತು ಸಂಗೀತಕಂ |
ಪೂಣಲ್ಕಾದುದು ದೇವಗಾನದಿರವಿಂಗಾಮೆಲ್ಲರುಂ ಚೆಲ್ಲದಿಂ |
ಪಾಣಿಪ್ರಾಂತದೊಳಾಂತುದಿಂದುಚಿತಮಾಯುತ್ತುವಾಣಿಯುಂ ವೀಣೆಯಾ |

ಅನಿತುಂ ತಂತ್ರಿಗಳಿಂದವೊಂದೆ ದನಿಯುಣ್ಮಿತ್ತೆಂಬಿನಂ ಕೂಡೆ ಸು
ಣ್ಣಾನೆ ಕಂಬಚ್ಚಿನೊಳೀಳ್ದ ಪೊಂಜರಿಗೆಯುಂ ಪೋಲ್ಗುಂ, ಪ್ರತಿಸ್ಫೂರ್ತಿ ಕ
ಮ್ಮಗೆ ಕಸ್ತೂರಿಯುಂ ಕಂಪಿನಂತೆ ಕವಿಗುಂ ನಾದಂ, ಸ್ವರಪ್ರಕ್ರಮಂ
ಘನ ರತ್ನಾವಳಿಯಂತೆ ತೋಱೆ ಚಿಕದೇವಂ ಬಾಜಿಕುಂ ವೀಣೆಯಂ ||[6]

ಇದೇ ಗ್ರಂಥದಲ್ಲಿ ಪುನಃ ಪುನಃ ಚಿಕದೇವರಾಯನ ವೀಣಾವಾದನ ವೈದಗ್ಧ್ಯವನ್ನು ವರ್ಣಿಸಿದರೂ ಕವಿಯು ತಣಿಯದೆ ಹೋಗಿದ್ದಾನೆ. ಅಂತಹವನು 'ರಸಿಕಜನ ಕರ್ಣರಸಾಯನೀಕೃತ ಸಂಗೀತವಿಸ್ತರ'ನೆಂಬ ಬಿರುದು ವಹಿಸಿದ್ದರಲ್ಲಿ ಅತಿಶಯವೇನೂ ಇಲ್ಲ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಚಿಕದೇವರಾಯ ಸಪ್ತಪದಿ

ಈ ಹಿನ್ನೆಲೆಯಲ್ಲಿ ಚಿಕದೇವರಾಯ ಸಪ್ತಪದಿಯನ್ನೂ ಗೀತಗೋಪಾಲವನ್ನೂ ಅಭ್ಯಾಸಮಾಡಬೇಕು. ಏಕೆಂದರೆ ಇವೆರಡೂ ಶುದ್ಧವಾಗಿ ಹಾಡಿ, ನುಡಿಸಲೆಂದೇ ರಚಿತವಾದ ಹಾಡುಗಬ್ಬಗಳು; ಅವು ತಮ್ಮ ರಚನಾಕಾಲದ ಸಂಗೀತಸ್ಥಿತಿಗೆ ಯಥಾವತ್ತಾಗಿ ಕನ್ನಡಿ ಹಿಡಿಯುತ್ತವೆ. ಎರಡನ್ನೂ ಗೀತರೂಪಕಗಳಾಗಿ, ನೃತ್ಯರೂಪಕಗಳಾಗಿ ರಂಗದಮೇಲೆ ತರಬಹುದು. ಇವುಗಳನ್ನು ಚಿಕದೇವರಾಯನೇ ರಚಿಸಿದ್ದರೆ ಆಶ್ಚರ್ಯವೇನೂ ಆಗುತ್ತಿರಲಿಲ್ಲ; ಇದಕ್ಕೆ ಬೇಕಾದ ರಸಿಕತೆ, ಕಲ್ಪನಾವಿಲಾಸ, ಭಾವಸಂಪತ್ತಿ, ಶಬ್ದಸಂಪತ್ತಿಗಳೂ ವಾಕ್–ಗೇಯ ರಚನಾಸಾಮರ್ಥ್ಯವೂ ಅವನಲ್ಲಿದ್ದವು.

ಚಿಕದೇವರಾಯ ಸಪ್ತಪದಿಯೆಂಬುದು ಗ್ರಂಥದ ಹೆಸರೇ ಎಂಬುದು ಸ್ಪಷ್ಟವಾಗಿಲ್ಲ. ಕಾವ್ಯದಲ್ಲಂತೂ ಹಾಗೆಂದು ಎಲ್ಲಿಯೂ ಹೇಳಿಲ್ಲ. ಆದರಲ್ಲಿ ಸಪ್ತಪದಿಗಳ ಮೂಲಕ ವಿಭಾಗವನ್ನೇನೋ ಮಾಡಿದೆ; ವಿಭಾಗಗಳಿಗೂ ಈ ಶಬ್ದದಲ್ಲಿಯೇ ಮುಗಿಯುವ ಹೆಸರುಗಳನ್ನೇ ಕೊಟ್ಟಿದೆ. ಆದರೆ ಗೀತಗೋಪಾಲದಲ್ಲಿಯೂ ಹೆಚ್ಚುಕಡಿಮೆ ಇದೇ ಪದ್ಧತಿಯನ್ನು ಅನುಸರಿಸಿದೆ. ಇದು ಹೇಗೇ ಇರಲಿ, ಸಪ್ತಪದಿಯೆಂಬ ಮಾತು ವಿಶಿಷ್ಟರೀತಿಯ ಪ್ರಬಂಧವೊಂದು ಎಂಬ ಅರ್ಥದಲ್ಲಿಯೂ ಏಳು 'ಪದಿ'ಗಳಲ್ಲಿ ರಚಿತವೆಂಬ ಸಾಮಾನ್ಯಾರ್ಥದಲ್ಲಿಯೂ ಇಲ್ಲಿ ಪ್ರಯುಕ್ತವಾಗಿದೆ. ಮೊದಲನೆಯ ಅರ್ಥದಲ್ಲಿ ಅದು ಜಯದೇವನ ಗೀತಗೋವಿಂದದಿಂದ ನಿಸ್ಸಂಶಯವಾಗಿ ಸ್ಫೂರ್ತಿಪಡೆದುದು. ಗೀತಗೋಪಾಲವಂತೂ ಗೀತಗೋವಿಂದದೊಡನೆ ನಾಮಸಾದೃಶ್ಯ, ವಸ್ತುಸಾದೃಶ್ಯ ಮತ್ತು ರಚನಾಸಾದೃಶ್ಯಗಳನ್ನು ಸ್ಪಷ್ಟವಾಗಿ ಹೊಂದಿದೆ. ಜಯದೇವ ಕವಿಯಾದರೂ ಅಷ್ಟಪದಿಯೆಂಬುದನ್ನು ವಿಶಿಷ್ಟಛಂದೋಬಂಧವುಳ್ಳ, ಪ್ರತಿಯೊಂದರ ಅಂತ್ಯದಲ್ಲೂ ಪಲ್ಲವಿಯಂತಹ ಧ್ರುವಪದವೊಂದು ಪುನರಾವರ್ತಿತವಾಗುವ, ಎಂಟು ನುಡಿಗಳ ಪ್ರಬಂಧ ಪ್ರಕಾರವೆಂದು ವ್ಯವಹರಿಸಿದರೂ ಈ ಲಕ್ಷಣವು ಸಂಗೀತಶಾಸ್ತ್ರದಲ್ಲಿ ಪುನಃ ಎಂದೂ ವರ್ಣಿತವೂ ಆಗಲಿಲ್ಲ, ಲಕ್ಷ್ಯದಲ್ಲಿ ಸ್ಥಿರರೂಪನ್ನು ಪಡೆಯಲೂ ಇಲ್ಲ. ಅದು ಸಂಗೀತಲಕ್ಷ್ಯದಲ್ಲಿ ಏಕೈಕವಾಗಿ ಉಳಿದುಕೊಂಡಿದೆ. ಶಿವಾಷ್ಟಪದಿ, ಉಪನಿಷದ್‌ಬ್ರಹ್ಮನ ರಾಮಾಷ್ಟಪದಿ, ವೆಂಕಟಮಖಿಯ ತ್ಯಾಗರಾಜಾಷ್ಟಪದಿ ಮುಂತಾದವುಗಳು ಗೀತಗೋವಿಂದದ ಅಷ್ಟಪದಿಯ ರಚನೆಯಿಂದಲೇ ಸ್ಫೂರ್ತಿ ಪಡೆದು ರಚಿತವಾದ ಸಂಸ್ಕೃತ ಕಾವ್ಯಗಳು; ಸಂಗೀತಕ್ಕೆಂದು ಬರೆದ ಹಾಡುಗಳು. ಅಷ್ಟಪದಿಯೆಂದು ಸಂಗೀತಲಕ್ಷ್ಯದಲ್ಲಿ ಶೃಂಗಾರ

Dr. Urmila Sharma Collection, Varanasi

CC0. In Public Domain, Digitizagtion by eGangotri

ರಸಪ್ರಧಾನವಾದ ವಿಶೇಷ ಪ್ರಬಂಧ ಪ್ರಕಾರವೆಂದು ಇರುವ ಅರ್ಥದಲ್ಲಿಯೇ ಗೀತಗೋಪಾಲವೂ ಚಿಕದೇವರಾಯ ಸಪ್ತಪದಿಯೂ ರಚಿತವಾದವುಗಳು. ಗೀತಗೋಪಾಲದಲ್ಲಿ ಸಪ್ತಪದಿಯೆಂಬ ಹೆಸರು ಗ್ರಂಥವಿಭಾಗದಲ್ಲಿ ಕಂಡರೆ ಚಿಕದೇವರಾಯ ಸಪ್ತಪದಿಯಲ್ಲಿ ಗ್ರಂಥನಾಮದಲ್ಲಿಯೇ ಕಾಣಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಗೀತಗೋಪಾಲವು ಗೀತಗೋವಿಂದದ ಆಚ್ಚಿನಲ್ಲಿ ಮೊದಲು ರಚಿತವಾಗಿದ್ದು, ಅನಂತರ ಪ್ರಭುಸ್ತುತಿಯನ್ನೂ ಸಪ್ತಪದಿಯ ಲಕ್ಷಣದ ಲಕ್ಷ್ಯೋದಾಹರಣೆಯನ್ನೂ ಉದ್ದೇಶವಾಗಿಟ್ಟುಕೊಂಡು ಈ ಸಪ್ತಪದಿಯು ಅನಂತರ ರಚಿತವಾಯಿತೆಂದು ಭಾವಿಸಲು ಅವಕಾಶವಿದೆ.

ಗೀತಗೋಪಾಲದಲ್ಲಿ ಎರಡು ಸಪ್ತಪದಿಗಳಿದ್ದರೆ ಪ್ರಸ್ತುತ ಕಾವ್ಯದಲ್ಲಿ ಒಂದೇ ಇದೆ. ಎರಡರಲ್ಲಿಯೂ ಸಪ್ತಪದಿಯೆಂಬುದನ್ನು ಕವಿಯು ಕಾವ್ಯ ವಿಭಾಗಕ್ಕೂ ಶೃಂಗಾರದ ವಿವಿಧ ಭಾವ, ಚೇಷ್ಟೆ ಮುಂತಾದವುಗಳನ್ನು ಒಳಗೊಂಡ ಹಾಡುಗಳ ಸಮುಚ್ಚಯಕ್ಕೂ ಪ್ರಧಾನವಾಗಿ ಹೇಳಿದ್ದರೂ ಸ್ವಲ್ಪಮಟ್ಟಿಗೆ ಅದರ ಅರ್ಥವನ್ನು ವಿಸ್ತರಿಸಿಯೂ ಇದ್ದಾನೆ. ಹೀಗೆ ವೀರರಸ ಪ್ರಧಾನವಾದ ಬಿರುದಾವಳಿ ಸಪ್ತಪದಿಯೂ, ಭಕ್ತಿರಸಪ್ರಧಾನವಾದ ಮೋಕ್ಷ ಸಾಧನ ಸಪ್ತಪದಿಯೂ ಇವೆರಡು ಕಾವ್ಯಗಳಲ್ಲಿ ಇವೆ. ಭಾರತದ ಇತರ ದೇಶ ಭಾಷೆಗಳಲ್ಲಿ ಇಂತಹ ರಚನೆಗಳು ಕಂಡುಬಂದಿಲ್ಲ; ತೆಲುಗು, ತಮಿಳುಗಳಲ್ಲಂತೂ ಇಲ್ಲ. ಗೀತಗೋಪಾಲ ಚಿಕದೇವರಾಯ ಸಪ್ತಪದಿಗಳೆರಡರಲ್ಲಿಯೂ ರಚನಾ ಬಂಧದಲ್ಲಿಯೂ ವಸ್ತುವಿನಲ್ಲಿಯೂ ವರ್ಣನೆಯಲ್ಲಿಯೂ ಗೇಯ ರೀತಿಯಲ್ಲಿಯೂ ರಾಗತಾಳಗಳ ಅನ್ವಯದಲ್ಲಿಯೂ ವಿಶೇಷವಾದ ಸಾದೃಶ್ಯವಿದೆ. ಆದುದರಿಂದ ಇದೊಂದು ನಿರ್ದಿಷ್ಟ ಸಾಹಿತ್ಯಪ್ರಕಾರವೆಂದೂ ಹಾಡಿನ ಬಗೆಯೆಂದೂ ಸಿದ್ಧವಾಗುತ್ತದೆ. ಆದುದರಿಂದ ನಮ್ಮ ಸಂಗೀತಕ್ಕೂ ಸಾಹಿತ್ಯಕ್ಕೂ ಸಪ್ತಪದಿಯು ಹದಿನೇಳನೆಯ ಶತಮಾನದ ಕನ್ನಡನಾಡು ಕೊಟ್ಟ ವಿಶಿಷ್ಟ ಕಾಣಿಕೆಯೆಂದು ತಿಳಿಯಬಹುದು.

ಸಪ್ತ 'ಪದಿ'

ಕವಿಯು 'ಪದಿ' ಎಂಬ ಶಬ್ದವನ್ನು ಎರಡು ಅರ್ಥಗಳಲ್ಲಿ ಬಳಸಿದ್ದಾನೆ. ಕಾವ್ಯವನ್ನು ಏಳು ಪ್ರಕರಣಗಳಾಗಿ ವಿಭಾಗಿಸಿ ಒಂದೊಂದನ್ನೂ ಕಾವ್ಯಪಾದವೆಂದು ತಿಳಿದು 'ಸಪ್ತ'ಪದಿ ಎಂದು ಹೇಳಿದುದು ಮೊದಲನೆಯದು. ಈ ವಿಭಾಗಗಳಲ್ಲಿರುವ ಪ್ರತಿಯೊಂದು ಹಾಡಿನಲ್ಲಿಯೂ ಇರುವ ಚರಣಗಳನ್ನು, ಎಂದರೆ ನುಡಿಗಳನ್ನು, ಒಂದೊಂದು ಪಾದವೆಂದು ತಿಳಿದು ಅವುಗಳನ್ನು

Dr. Urmila Sharma Collection, Varanasi

CC0. In Public Domain, Digitizagtion by eGangotri

ತ್ರಿಪದಿ, ಪಂಚಪದಿ, ಎಂದು ಮುಂತಾಗಿ ವ್ಯವಹರಿಸಿರುವುದು ಎರಡನೆಯದು. ಈ ಎರಡು ಅರ್ಥಗಳೂ ನಮ್ಮ ಸಂಗೀತಶಾಸ್ತ್ರ ಚರಿತ್ರೆಯ ಬಹು ಮುಖ್ಯವಾದ ವಿಕಾಸಘಟ್ಟವನ್ನು ಸೂಚಿಸುತ್ತವೆ. ಮೊದಲನೆಯ ಅರ್ಥದಲ್ಲಿ ಅನೇಕ ಹಾಡುಗಳ ಸಮುಚ್ಚಯವನ್ನು ಒಂದೇ ಪ್ರಬಂಧವೆಂದು ವ್ಯವಹರಿಸುವುದು ಕರ್ನಾಟಕ ಸಂಗೀತದ ವೈಶಿಷ್ಟ್ಯವೇ ಆಗಿದೆ. ಇಂತಹ ಹಲವು ರಾಗಮಾಲಿಕೆಗಳನ್ನೂ ತಾಳಮಾಲಿಕೆಗಳನ್ನೂ ರಾಗತಾಳಮಾಲಿಕೆಗಳನ್ನೂ ಕನ್ನಡಿಗರು ಬಹುಕಾಲದಿಂದ ಹಾಡಿ ನುಡಿಸುತ್ತಿದ್ದಾರೆಂಬುದನ್ನು ಬೇರೆಡೆಯಲ್ಲಿ ವಿವರಿಸಿದ್ದೇನೆ.[7] ರಾಗಮಾಲಿಕೆ, ಸುಳಾದಿ, ಯಕ್ಷಗಾನಪ್ರಬಂಧ ಮುಂತಾದವುಗಳು ಈ ಅರ್ಥದಲ್ಲಿಯೇ ಇಂದಿಗೂ ರೂಢಿಯಲ್ಲಿವೆ. ತ್ಯಾಗರಾಜನ ನೌಕಾಚರಿತ್ರ, ಪ್ರಹ್ಲಾದಭಕ್ತಿವಿಜಯ ಮುಂತಾದವುಗಳೂ ಕನ್ನಡ ನಾಡಿನ ಹರಿದಾಸರ ಭ್ರಮರಗೀತ ಮೊದಲಾದವುಗಳೂ ಈ ಗುಂಪಿಗೆ ಸೇರಿವೆ. ಪಾಶ್ಚಾತ್ಯ ವಾಗ್ಗೇಯಕಾರರು ಗೀತರೂಪಕಗಳನ್ನು (operas) ಹೀಗೆಯೇ ಅನೇಕ ವಿಭಾಗಗಳಲ್ಲಿ ರಚಿಸಿದ್ದಾರೆಂಬುದನ್ನು ನೆನೆದರೆ ಸಪ್ತಪದಿಯ ಸ್ವರೂಪವು ಸ್ಫುರಿಸುತ್ತದೆ.

ಎರಡನೆಯ ಅರ್ಥವು ವಿಶೇಷ ವಿಸ್ತಾರವನ್ನು ಪಡೆದಿದೆ. ಮೊದಲನೆಯದಾಗಿ, ಕೃತಿ ಅಥವಾ ಕೀರ್ತನೆ ಎಂದು ಈಗ ಅತ್ಯಂತ ಬಹುಳ ಪ್ರಯೋಗವನ್ನು ನಮ್ಮ ಸಂಗೀತದಲ್ಲಿ ಪಡೆದಿರುವ ಹಾಡಿಗೆ ಇದು ಅತ್ಯಂತ ಸಮೀಪವಾಗಿದೆ. ಕೃತಿಯ ರಚನೆ ಹೀಗಿದೆ: ಪ್ರಾರಂಭದಲ್ಲೇ ಇಡೀ ಹಾಡಿನ ಸಾಹಿತ್ಯಾರ್ಥದ ಸಾರಾಂಶವಾದ, ಅಥವಾ ಅದಕ್ಕೆ ಪ್ರವೇಶವನ್ನು ದೊರಕಿಸುವ, ಸ್ಥಾಯಿಭಾವವು ಒಂದು ಅಥವಾ ಎರಡು ಪಙ್ಕ್ತಿಗಳಷ್ಟು ಇರುತ್ತದೆ. ಇದಕ್ಕೆ ಅನುವಾದಿ ಸ್ವರೂಪದ ಸಾಹಿತ್ಯಭಾವವುಳ್ಳ, ಸಾಮಾನ್ಯವಾಗಿ ಪಲ್ಲವಿಯಷ್ಟೇ, ಅಥವಾ ಕೆಲವು ವೇಳೆ ಅದರ ಎರಡರಷ್ಟು, ವಿಸ್ತಾರವುಳ್ಳ ಭಾಗವು ಅನಂತರ ಇರುತ್ತದೆ. ಇದಕ್ಕೆ ಅನುಪಲ್ಲವಿಯೆಂದು ಹೆಸರು. ಅನುಪಲ್ಲವಿಯು ಕೃತಿಯಲ್ಲಿ ಇರಬಹುದು ಅಥವಾ ಇಲ್ಲದಿರಬಹುದು. ಇದರ ಅನಂತರ ಹಾಡಿನ ಮಾತುಗಳಲ್ಲಿರುವ ಸಾರಾಂಶಭಾಗವು, ಎಂದರೆ ಹಾಡಿನ ದೇಹವು, ಒಂದು ಅಥವಾ ಹೆಚ್ಚು ನುಡಿಗಳಲ್ಲಿ ಅಡಕವಾಗಿರುತ್ತದೆ. ನುಡಿಗೆ ಸಂಗೀತದಲ್ಲಿ ಚರಣವೆಂದೂ ಸಂಜ್ಞೆ. ಚರಣವೆಂದರೆ ಪದವಷ್ಟೆ. ಎಂದೇ ಈ ಕಾವ್ಯಗಳ ಕರ್ತೃವು ಹಾಡುಗಳಲ್ಲಿನ ನುಡಿಗಳನ್ನು ಪದಗಳೆಂದು ಕರೆದು ಇವುಗಳನ್ನು ಒಳಗೊಂಡುದರಿಂದ ಹಾಡನ್ನು ಪದಿಯೆಂದು ಕರೆದಿದ್ದಾನೆ. ಚರಣದ ವಿಸ್ತಾರವು ಸಾಮಾನ್ಯವಾಗಿ ಅನುಪಲ್ಲವಿಯ ಎರಡರಷ್ಟಿರುತ್ತದೆ. ಅನುಪಲ್ಲವಿಯು ಇಲ್ಲದೆ ಒಂದೇ ಚರಣವಿದ್ದರೆ ಅದನ್ನು

Dr. Urmila Sharma Collection, Varanasi

CC0. In Public Domain, Digitizagtion by eGangotri

ಸಮಷ್ಟಿ ಚರಣವೆಂದು ಸಂಗೀತ ಸ್ವಸಮಯವು ಕರೆಯುತ್ತದೆ. ಯಾವುದೇ ಹಾಡಿನಲ್ಲಿರುವ ಮಾತುಗಳಿಗೆ ಸಂಗೀತಶಾಸ್ತ್ರದಲ್ಲಿ ಒಟ್ಟಿನಲ್ಲಿ 'ಮಾತು' ಎಂದೇ ಸಂಜ್ಞೆ. ಸಂಗೀತ ಶಾಸ್ತ್ರವು ಕನ್ನಡ ಭಾಷೆಯಿಂದಲೇ ಈ ಶಬ್ದವನ್ನು ತೆಗೆದುಕೊಂಡಿದೆ. ಅಂತೆಯೇ ಹಾಡಿನ ಸ್ವರ-ತಾಳಗಳ ಭಾಗಕ್ಕೆ ಧಾತುವೆಂದು ಹೆಸರು. ಪಲ್ಲವಿಯ ಧಾತುವೂ ಅನುಪಲ್ಲವಿಯ ಧಾತುವೂ ಚರಣಗಳ ಧಾತುವೂ ಸಾಮಾನ್ಯವಾಗಿ ಬೇರೆ ಬೇರೆಯಾಗಿರುತ್ತವೆ. ಕೆಲವು ವೇಳೆ, ಉದಾಹರಣೆಗೆ ತ್ಯಾಗರಾಜನ ಕೃತಿಗಳಲ್ಲಿ, ಪಲ್ಲವಿಯ ಧಾತುವು ಚರಣದ ಮೊದಲನೆಯ ಅರ್ಧದಲ್ಲಿಯೂ ಅನುಪಲ್ಲವಿಯ ಧಾತುವು ಚರಣದ ಎರಡನೆಯ ಅರ್ಧದಲ್ಲಿಯೂ ಸಂಪೂರ್ಣವಾಗಿ ಅಥವಾ ಅಂಶತಃ ಪುನರಾವರ್ತಿತವಾಗುತ್ತವೆ. ಸಾಮಾನ್ಯವಾಗಿ ಎಲ್ಲಾ ಚರಣಗಳಿಗೂ ಒಂದೇ ಧಾತುವಿದ್ದರೂ ಅಪರೂಪವಾಗಿ ಅವು ಬೇರೆ ಬೇರೆ ಚರಣಗಳಿಗೆ ಬೇರೆಯಾಗಿರುವುದೂ ಉಂಟು. ಚರಣಗಳು ಬಹುಮಟ್ಟಿಗೆ ಬೆಸ ಸಂಖ್ಯೆಯಲ್ಲಿರುತ್ತವೆ. ಅನುಪಲ್ಲವಿಯಾದಮೇಲೂ ಪ್ರತಿಯೊಂದು ಚರಣದ ಮೇಲೂ ಪಲ್ಲವಿಯನ್ನು ಪುನಃ ಹಾಡಬೇಕು ಅಥವಾ ನುಡಿಸಬೇಕು.

ಕೃತಿಯನ್ನು ನಮ್ಮ ಸಂಗೀತದಲ್ಲಿ ಸೃಷ್ಟಿಸಿದುದು ಮೊದಲು ತ್ಯಾಗರಾಜನೇ, ಇದು ಆದುದು ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ, ಎಂದು ಆಂಧ್ರರೂ ದ್ರಾವಿಡರೂ ಸಾಮಾನ್ಯವಾಗಿ ನಂಬುತ್ತಾರೆ. ಅವರಲ್ಲಿ ಸೌಮ್ಯವಾದಿಗಳೂ ಸಹ ಕೃತಿಗೆ ಮೇಲೆ ಹೇಳಿದ ರೂಪವು ಲಕ್ಷ್ಯದಲ್ಲಿ ಸ್ಥಿರವಾಗಿ ನಿಂತಿದ್ದು ತ್ಯಾಗರಾಜನಿಂದ, ಅದು ಮೊದಲು ಸೃಷ್ಟವಾದುದು ಮಾರ್ಗದರ್ಶಿ ಶೇಷಯ್ಯಂಗಾರ್ಯ ಮತ್ತು ಮಾತೃಭೂತಯ್ಯನವರುಗಳಿಂದ, ಎನ್ನುತ್ತಾರೆ. ಇದಕ್ಕೆ ಕನ್ನಡ ಸಾಹಿತ್ಯದಲ್ಲಿ ಅವರಿಗೆ ಪರಿಚಯವಿಲ್ಲದುದೇ ಕಾರಣ. ಕನ್ನಡ ನಾಡಿನಲ್ಲಿ ನರಹರಿತೀರ್ಥನಿಂದ ಪ್ರಾರಂಭಿಸಿ ಹದಿನಾಲ್ಕನೆಯ ಶತಮಾನದಿಂದ ಪ್ರತಿಯೊಬ್ಬ ಹರಿದಾಸನೂ ಹದಿನಾರನೆಯ ಶತಮಾನದಲ್ಲಿ ನಿಜಗುಣನಿಂದ ಪ್ರಾರಂಭಿಸಿ ಪ್ರತಿಯೊಬ್ಬ ಶಿವಶರಣನೂ ಸಂಪೂರ್ಣವಾಗಿ ಮೇಲೆ ಹೇಳಿದ ಲಕ್ಷಣವುಳ್ಳ ಗೇಯ ಪ್ರಕಾರಗಳನ್ನು ರಚಿಸಿದ್ದಾರೆಂಬುದು ಪ್ರಶ್ನಾತೀತವಾಗಿದೆ. ತ್ಯಾಗರಾಜನು ಸಂಗೀತ ಸಾಹಿತ್ಯಗಳಲ್ಲಿ, ತನ್ನ ಭಾಗವತದೃಷ್ಟಿಯಲ್ಲಿ, ಪುರಂದರದಾಸನಿಂದ ಹೇಗೆ ಸಂಪೂರ್ಣವಾಗಿ ಪ್ರಭಾವಿತನಾಗಿದ್ದನೆಂಬುದನ್ನು ಬೇರೆಡೆಯಲ್ಲಿ ಹೇಳಿದ್ದೇನೆ. ಕೃತಿಯ ಸಂಪೂರ್ಣಸ್ವರೂಪವು ದಾಸರ 'ಪದ'ಗಳಲ್ಲಿಯೇ ಕಂಡುಬರುತ್ತದೆ. 'ಪದ' ಎಂದರೆ ಹಾಡು ಎಂಬ ಸಾಮಾನ್ಯಾರ್ಥವು ಇಲ್ಲಿ ಗಮನಾರ್ಹವಾಗಿದೆ. ಇದು ಸಂಸ್ಕೃತದಲ್ಲಿಯಾದರೂ,

Dr. Urmila Sharma Collection, Varanasi

CC0. In Public Domain, Digitizagtion by eGangotri

ಸಂಗೀತ ಶಾಸ್ತ್ರದಲ್ಲಿಯಾದರೂ ಬಹು ಪ್ರಾಚೀನ ಕಾಲದಿಂದಲೂ ಇದೇ ಅರ್ಥವನ್ನು ಹೊಂದಿತ್ತೆಂದು ತೋರುತ್ತದೆ. ಏಕೆಂದರೆ ಭರತನು ಪದವೆನ್ನುವುದಕ್ಕೆ ಹೆಚ್ಚುಕಡಿಮೆ ಇದೇ ಅರ್ಥವನ್ನು ಕೊಡುತ್ತಾನೆ;

ಗಾಂಧರ್ವಂ ತ್ರಿವಿಧಂ ವಿದ್ಯಾತ್ ಸ್ವರತಾಲಪದಾತ್ಮಕಮ್ ।
ಛಂದೋವಿಧಿರಲಂಕಾರಾ ಜ್ಞೇಯಃ ಪದಗತೋ ವಿಧಿಃ ।
ನಿಬದ್ಧಾನಿಬದ್ಧಂ ಚ ದ್ವಿವಿಧಂ ತತ್ ಪದಂ ಸ್ಮೃತಮ್ ।

ಆದರೂ ಸಂಗೀತ ಶಾಸ್ತ್ರದಲ್ಲಿಯಾಗಲೀ, ಕನ್ನಡೇತರ ಸಂಗೀತ ಸಾಹಿತ್ಯಗಳಲ್ಲಿಯಾಗಲೀ ಈ ಪದವು ಈ ಅರ್ಥವನ್ನು ಉಳಿಸಿಕೊಳ್ಳಲಿಲ್ಲ. ಕನ್ನಡದಲ್ಲಿ ಮಾತ್ರ, ಬಹುಶಃ ಜನಪದದಲ್ಲಿ, ಇದು ಉಳಿದು ತನ್ನ ಸರಿಯಾದ ಅರ್ಥವನ್ನು ಗೀತಗೋಪಾಲ ಮತ್ತು ಚಿಕದೇವರಾಯ ಸಪ್ತಪದಿಯಲ್ಲಿ ಹೊಂದಿದೆ. ಕೃತಿಯ ಬೆಳವಣಿಗೆಯ ಅಭ್ಯಾಸಕ್ಕೆ ಈ ಸಂಗತಿಯು ಬಹು ಮುಖ್ಯವಾಗಿದೆ. ಏಕೆಂದರೆ ದಾಸರ ಪದಗಳಲ್ಲಿ ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳು ಎಂಬ ಕ್ರಮವು, ಅಪರೂಪವಾಗಿಯಾದರೂ, ಅಲ್ಲಲ್ಲಿ ಕಂಡುಬರುತ್ತದೆ; ಅನುಪಲ್ಲವಿಯ ಲೋಪವೇ ಅಲ್ಲಿ ಹೆಚ್ಚು ಕಂಡು ಬರುತ್ತದೆ. ತ್ಯಾಗರಾಜನಲ್ಲಿ ಅನುಪಲ್ಲವಿಯ ಲೋಪಕ್ಕಿಂತ ಬಳಕೆಯೇ ಹೆಚ್ಚು. ಮುದ್ದುಸ್ವಾಮಿ ದೀಕ್ಷಿತನಲ್ಲಿ ಸಮಷ್ಟಿ ಚರಣ ಪ್ರಯೋಗವೇ ಹೆಚ್ಚು. ಶ್ಯಾಮಾಶಾಸ್ತ್ರಿಯ ಕೃತಿಗಳಲ್ಲಿ ಅನುಪಲ್ಲವಿಯು ಸಾಮಾನ್ಯವಾಗಿ ಇದ್ದೇ ಇರುತ್ತದೆ. ಆದರೆ ಗೀತಗೋಪಾಲ ಮತ್ತು ಚಿಕದೇವರಾಯ ಸಪ್ತಪದಿಗಳಲ್ಲಿ ಅನುಪಲ್ಲವಿಯು ಸಂಪೂರ್ಣವಾಗಿ ಲೋಪವಾಗಿದೆ; ಸಮಷ್ಟಿ ಚರಣದ ಪ್ರಯೋಗವು ಅತ್ಯಲ್ಪವಾಗಿದೆ; ಆದುದರಿಂದ ಇವುಗಳಲ್ಲಿ ಕಂಡುಬರುವ ಕೃತಿಯ ಸ್ವರೂಪವನ್ನು ವಿಶಿಷ್ಟ ವಿಕಾಸ ಸ್ಥಿತಿಯದೆಂದೋ, ನವ್ಯಪ್ರಕಾರವೆಂದೋ ತಿಳಿಯಬೇಕಾಗುತ್ತದೆ. ಆದರೂ ಅನುಪಲ್ಲವಿಯ ಪ್ರವೃತ್ತಿಯು ಇವೆರಡು ಕೃತಿಗಳಲ್ಲಿಯೂ ಇಲ್ಲದಿಲ್ಲ. ಅಪರೂಪವಾಗಿ, ಪಲ್ಲವಿಯ ಉದ್ದವು ಚರಣದ ವಿಸ್ತಾರದೊಡನೆ ಹೋಲಿಸಿದಾಗ ಅಸಹಜವಾಗಿ ಹೆಚ್ಚಾಗಿರುವಂತೆ ಕಂಡುಬರುತ್ತದೆ; ಇವುಗಳನ್ನು ಒಡೆದು ಸಂಗೀತ, ಸಾಹಿತ್ಯ ದೃಷ್ಟಿಗಳಿಂದ ಪಲ್ಲವಿ, ಅನುಪಲ್ಲವಿಗಳೆಂದು ವಿಭಾಗಿಸಲೂ ಸಾಧ್ಯವಿದೆ. ಚಿಕದೇವರಾಯ ಸಪ್ತಪದಿಯ ಬಿರುದಾವಳಿಯ ನಾಲ್ಕನೆಯ ಏಕಪದಿ, ಅಲ್ಲಿಯೇ ಆರನೆಯ ನವಪದಿ, ವಿರಹಸಪ್ತಪದಿಯ ಆರನೆಯ ತ್ರಿಪದಿ, ಆರನೆಯ ಸಪ್ತಪದಿಯ ಆರನೆಯ ತ್ರಿಪದಿ ಗೀತಗೋಪಾಲದಲ್ಲಿ ಪ್ರಥಮ ಭಾಗದ ಎರಡನೆಯ ಸಪ್ತಪದಿಯ ಐದನೆಯ ಏಕಪದಿ, ಉತ್ತರಭಾಗದ ಐದನೆಯ ಸಪ್ತಪದಿಯ ಮೊದಲ

Dr. Urmila Sharma Collection, Varanasi

CC0. In Public Domain, Digitizagtion by eGangotri

ನೆಯ ಸಪ್ತಪದಿ ಮುಂತಾದವುಗಳು ಇದಕ್ಕೆ ಉದಾಹರಣೆಗಳು. ಅನುಪಲ್ಲವಿಯೆಂಬ ಮಾತನ್ನಾಗಲೀ ಅದರ ಅರ್ಥವನ್ನಾಗಲೀ ಕವಿಯು ಎಲ್ಲಿಯೂ ಬಳಸಿಲ್ಲ. ವಾಗ್ಗೇಯಕಾರನು ಗಾಯಕ ವಾದಕರಿಗೆ ಇಲ್ಲಿ ಹೀಗೆ ಒಡೆಯಬಹುದಾದ ಸ್ವಾತಂತ್ರ್ಯವನ್ನು ಕೊಟ್ಟಿರುವಂತೆ ಕಾಣುತ್ತದೆ.

ಇದೇ ಸಂದರ್ಭದಲ್ಲಿ ಇನ್ನೂ ಒಂದು ಸ್ವಾರಸ್ಯಸಂಗತಿಯನ್ನು ಗಮನಿಸಬೇಕು. ತಾಳಸಹಿತವಾದ ಹಾಡುಗಳಲ್ಲಿ ಮೊದಲು ಅಥವಾ ಕೊನೆಯಲ್ಲಿ ತಾಳರಹಿತವಾದ, ಕೇವಲ ರಾಗಾಲಾಪನೆಯಿಂದ ನಿರ್ವಹಿಸಲ್ಪಟ್ಟ ಮಾತು ಅಲ್ಲಲ್ಲಿ ನಮ್ಮ ಸಂಗೀತದಲ್ಲಿ ಬರುತ್ತದೆ. ಸುಳಾದಿಯ ಅಂತ್ಯದಲ್ಲಿ ಉಗಾಭೋಗವು ಹೀಗೆ ಕೇವಲ ತಾಳರಹಿತವಾಗಿದ್ದು ಈಗಿನ ಗಮಕ (ಕಾವ್ಯವಾಚನ) ರೀತಿಯಲ್ಲಿ ಪ್ರಯುಕ್ತವಾಗುತ್ತಿತ್ತೆಂದು ಅನ್ಯತ್ರ ತೋರಿಸಿದ್ದೇನೆ.[10] ಹಾಗೆಯೇ ಪ್ರಾಚೀನಕಾಲದ ಸೂಳಾದಿ ಪ್ರಬಂಧದ ಮೊದಲಿನಲ್ಲಿ ಕಂದವನ್ನು ಹಾಡಬೇಕೆಂಬ ನಿಯಮವಿದ್ದುದನ್ನು ಅಲ್ಲಿಯೇ ಹೇಳಿದ್ದೇನೆ. ಅಂತಹ ಪದ್ಧತಿಯು ಕೃತಿಗೆ ಅನ್ವಿತವಾದುದನ್ನು ಗೀತಗೋಪಾಲದಲ್ಲಿ ಕಾಣಬಹುದು. ಮೊದಲನೆಯ ಐದು ಸಪ್ತಪದಿಗಳಲ್ಲಿ ಪ್ರತಿಯೊಂದು ಹಾಡಿಗೂ ಕಂದವನ್ನು ಹೇಳಿರುವುದೇ ಅಲ್ಲದೆ ಅದು ಕೇವಲ ವಾಚನೀಯವಾದುದಲ್ಲ, ಪಠ್ಯಮಾತ್ರವಲ್ಲ, ಹಾಡಬೇಕಾದುದು ಎಂಬುದನ್ನು ತೋರಿಸಲು ರಾಗದ ಹೆಸರನ್ನು ಕೊಟ್ಟಿದೆ. ಇದು ಅಪರೂಪವಾದ ಪದ್ಧತಿಯೇ ಆದರೂ ಪೌರಾಣಿಕ ನಾಟಕಗಳಲ್ಲಿ ಹಾಡಿಗೆ ಮುಂಚೆ ಕಂದವನ್ನು ಕೆಲವುಕಾಲ ಹಾಡುತ್ತಿದ್ದ ಅವಶೇಷ ರೂಪದಲ್ಲಿ ಉಳಿದುಬಂದಿತು. ಗೀತಗೋಪಾಲವನ್ನು ಗೀತರೂಪಕವಾಗಿಯೇ, ಹಾಡು-ನಾಟಕವಾಗಿಯೇ ಕವಿಯು ರಚಿಸಿದನೆಂಬುದನ್ನು ಜ್ಞಾಪಿಸಿಕೊಂಡರೆ ಇದರ ಔಚಿತ್ಯವು ಸ್ಪಷ್ಟವೇ ಆಗುತ್ತದೆ. ಆದರೆ ಈ ಪದ್ಧತಿಯು ಚಿಕದೇವರಾಯ ಸಪ್ತಪದಿಯಲ್ಲಿಲ್ಲವೆಂಬುದನ್ನು ಇಲ್ಲಿ ಹೇಳಬೇಕು. ಇಡೀ ಕಾವ್ಯದಲ್ಲಿ ಎಲ್ಲಿಯೂ ಕಂದದ ಸುಳಿವೇ ಇಲ್ಲ. ಇದು ಎರಡೂ ಕಾವ್ಯಗಳಲ್ಲಿರುವ ರಚನಾಭಿನ್ನತೆಗಳಲ್ಲಿ ಒಂದು.

ಸಪ್ತ 'ಪದಿ' ಮತ್ತು 'ಪದ'

'ಪದಿ' ಎಂಬ ಶಬ್ದವು ಈ ಕಾವ್ಯಗಳಲ್ಲಿ ಇನ್ನೂ ಒಂದು ರೀತಿಯಲ್ಲಿ ಸಾರ್ಥಕವಾಗಿದೆ. ದಾಸರ ಪದವೆಂದರೆ ದೇವರನಾಮವೆಂದು ಪ್ರಸಿದ್ಧವಾಗಿರುವ, ನಿರ್ದಿಷ್ಟ ರಚನೆ, ಲಕ್ಷಣಗಳನ್ನುಳ್ಳ ಗೇಯ ಪ್ರಬಂಧವೆಂದು ಹೇಗೆ ಅರ್ಥವಿದೆಯೋ, ಅಂತೆಯೇ, ಪದವೆಂದರೂ ಸಂಗೀತ ಕಲೆಯ ಸ್ವಸಮಯದಲ್ಲಿ ವಿಶೇಷವಾದ ಅರ್ಥವಿದೆ. ರಚನೆಯಲ್ಲಿ ಕೃತಿಯನ್ನೇ ಹೋಲುವ,

Dr. Urmila Sharma Collection, Varanasi

CC0. In Public Domain, Digitizagtion by eGangotri

ಆದರೆ ವಿಳಂಬ ಲಯದ, ಶೃಂಗಾರ ರಸಭೂಯಿಷ್ಠವಾದ, ಸಾಮಾನ್ಯವಾಗಿ ವಿಪ್ರಲಂಭ ಶೃಂಗಾರದ ಭಾವಗಳು, ಚೇಷ್ಟೆಗಳು ಮೊದಲಾದುವನ್ನೇ ವರ್ಣಿಸುವ, ಆದರೆ ಭಕ್ತಿಯಲ್ಲಿ ಪರ್ಯವಸಾನ ಹೊಂದುವ ಗೇಯ ಪ್ರಕಾರಕ್ಕೆ ಪದವೆಂಬ ಸಂಜ್ಞೆ ಸಂಗೀತ ಶಾಸ್ತ್ರದಲ್ಲಿದೆ. ತೆಲುಗಿನಲ್ಲಿ ಮಾತ್ರ ಈ ಬಗೆಯ ಹಾಡು ದೊರೆಯುವುದು. ಪದದ ಲಕ್ಷಣಗಳನ್ನೇ ಹೊಂದಿದ್ದು, ಶೈಲಿ, ವಸ್ತುಗಳಲ್ಲಿ ಗ್ರಾಮ್ಯತೆಯನ್ನು ಹೊಂದಿದ್ದರೆ, ಕೇವಲ ದೈಹಿಕ ಶೃಂಗಾರ ಪ್ರಧಾನವಾದ ವರ್ಣನೆಯಿದ್ದರೆ ಅದಕ್ಕೆ ಜಾವಳಿಯೆಂದು ಹೆಸರು. ಇದು ತೆಲುಗಿನಲ್ಲಿಯೂ ಕನ್ನಡದಲ್ಲಿಯೂ ದೊರೆಯುತ್ತದೆ. ಇವುಗಳಲ್ಲಿ ಪದವೇ ಮೊದಲು ಜನ್ಮವೆತ್ತಿತ್ತು. ಹದಿನೇಳನೆಯ ಶತಮಾನದ ಅಂತ್ಯದಲ್ಲಿ ಕ್ಷೇತ್ರಯ್ಯನೆಂಬುವನು ಈ ಬಗೆಯ ಹಾಡಿಗೆ ಲಕ್ಷ್ಯಪ್ರಸಿದ್ಧಿಯನ್ನೂ ಸ್ಥಿರತೆಯನ್ನೂ ತಂದುಕೊಟ್ಟನು. ಆಂಧ್ರದ ಕೃಷ್ಣಾಜಿಲ್ಲೆಯ ಘಂಟಸಾಲದ ಬಳಿ ಇರುವ ಮುವ್ವಪುರಿಯಲ್ಲಿ ಅಥವಾ ಚಿತ್ತೂರು ಜಿಲ್ಲೆಯಲ್ಲಿ ಚಂದ್ರಗಿರಿ ತಾಲ್ಲೂಕಿನ ಮುವ್ವ ಎಂಬಲ್ಲಿ ಇವನು ಹುಟ್ಟಿದವನು ಅಥವಾ ಇದ್ದವನು ಎಂದು ನಂಬಲಾಗಿದೆ. ಅವನೇ ತನ್ನದೊಂದು ಪದದಲ್ಲಿ[11] ಮಧುರೆಯ ತಿರುಮಲನಾಯಕನ ಆಶ್ರಯದಲ್ಲಿ ಎರಡು ಸಾವಿರ, ವೀರರಾಘವನ ಆಶ್ರಯದಲ್ಲಿ ಒಂದು ಸಾವಿರ, ಗೋಲ್ಕೊಂಡದ ದೊರೆಯ ಆಶ್ರಯದಲ್ಲಿ ಸಾವಿರದನೂರು, ತುಪಾಕುಲ ವೆಂಕಟಕೃಷ್ಣ ಸುಬ್ಬರಾಮನ ಆಶ್ರಯದಲ್ಲಿ ಏಳುನೂರು, ಇವುಗಳನ್ನೂ ಸದ್ಯದಲ್ಲಿ ನಾಲ್ಕು ನೂರಐವತ್ತು, ಹೀಗೆ ಪದಗಳನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಆದರೂ ಇವನ ಮುಖ್ಯ ಕಾರ್ಯಕ್ಷೇತ್ರವು ತಂಜಾವೂರು; ಇವನ ಮೆಚ್ಚಿನ, ನೆಚ್ಚಿನ ಪ್ರಭು ತಂಜಾವೂರಿನ ವಿಜಯರಾಘವಭೂಪಾಲ. ಚೆವ್ವದಿಲಿಂಗ, ವಿಜಯರಾಘವ, ತುಪಾಕುಲ ವೆಂಕಟಕೃಷ್ಣ, ಕಂಚಿವರದ ಎಂದು ಮುಂತಾದ ಅಂಕಿತಗಳಲ್ಲಿ ಕೃತಿರಚನೆಮಾಡಿದರೂ, ಮುವ್ವಗೋಪಾಲನೆಂದೇ ಇವನು ಅಂಕಿತವನ್ನಿಟ್ಟುಕೊಂಡಿದ್ದಾನೆ. ಇವನಿಗಿಂತ ಹಿಂದೆ, ಹದಿನೈದನೆಯ ಶತಮಾನದಲ್ಲಿ ತಿರುಪತಿಯಲ್ಲಿ ಅನ್ನಮಾಚಾರ್ಯನು ಶೃಂಗಾರಕೀರ್ತನಾಲು ಎಂಬ ಶೃಂಗಾರ ರಸಪ್ರಧಾನವಾದ ಹಾಡುಗಳನ್ನು ರಚಿಸಿದ್ದಾನೆ; ಹಾಗೆಯೇ ಅಜ್ಞಾತ ಕವಿಯೊಬ್ಬನ ಶೃಂಗಾರ ರಸಮಂಜರಿಯೆಂಬುದೂ ದೊರೆಯುತ್ತದೆ. ಆದರೂ ಪದವೆಂದು ನಾವು ಈಗ ತಿಳಿಯುವ ತೆಲುಗು ಹಾಡುಗಳ ವಿಶಿಷ್ಟ ರೀತಿಯ ರಚನೆಯನ್ನು ಮೊದಲು ಲಕ್ಷ್ಯೋದಾಹರಣೆಯ ಬಾಹುಳ್ಯದಿಂದ ಸ್ಥಿರಗೊಳಿಸಿದವನು ಕ್ಷೇತ್ರಯ್ಯನೇ ಎಂದು ಭಾವಿಸಲು ಅಡ್ಡಿಯಿಲ್ಲ.

ತೆಲುಗಿನಲ್ಲಿ ಮಾತ್ರವಲ್ಲ, ಕರ್ಣಾಟಕ ಸಂಗೀತದಲ್ಲೇ ಮೊದಲಬಾರಿಗೆ

Dr. Urmila Sharma Collection, Varanasi

CC0. In Public Domain, Digitizagtion by eGangotri

ಪದವನ್ನು ನೆಲೆಯಾಗಿ ನಿಲ್ಲಿಸಿದ್ದು ಎಂಬ ಭಾವನೆಯು ಸರ್ವೇಸಾಮಾನ್ಯವಾಗಿ ಹರಡಿದೆ. ಇದನ್ನು ಗೀತಗೋಪಾಲವೂ ಚಿಕದೇವರಾಯ ಸಪ್ತಪದಿಯೂ ಅಲ್ಲಗಳೆಯುತ್ತವೆ. ವಿಪ್ರಲಂಭ ಶೃಂಗಾರದ ಎಲ್ಲಾ ಭಾವಗಳನ್ನೂ ಚೇಷ್ಟೆಗಳನ್ನೂ ಇಲ್ಲಿನ ಹಾಡುಗಳು ಅಚ್ಚುಕಟ್ಟಾಗಿ, ಮುದ್ದಾಗಿ ಒಳಗೊಂಡಿವೆ. ಪದದಲ್ಲಿ ನಾಯಿಕೀ-ನಾಯಕಭಾವದ ಅನುಭವಗಳ ಸಮಷ್ಟಿಯಿರುವಂತೆಯೇ ಇವೂ ಹೇಳುತ್ತವೆ. ಅವು ಭಕ್ತಿಯಲ್ಲಿ ಪರ್ಯವಸಾನ ಹೊಂದುವಂತೆಯೇ ಗೀತಗೋಪಾಲದಲ್ಲಿಯೂ ಅವು ಹೊಂದುತ್ತವೆ; 'ನಾವಿಷ್ಣುಃ ಪೃಥ್ವೀಪತಿಃ' ಎಂಬ ಕಾರಣದಿಂದ ಚಿಕದೇವರಾಯ ಸಪ್ತಪದಿಯಲ್ಲಿಯೂ ಅವು ವಿಷ್ಣುಪರವಾದ ಹಾಡುಗಳೆಂದೇ ಕವಿಯು ತಿಳಿಯುತ್ತಾನೆ. ಶೈಲಿ, ವಸ್ತು, ನಿರೂಪಣೆ ಎಲ್ಲದರಲ್ಲಿಯೂ ಸಂಪೂರ್ಣವಾದ ಸಾಮ್ಯವು ಇವುಗಳಲ್ಲಿ ಕಂಡುಬರುತ್ತದೆ. ಆದುದರಿಂದ ಇವುಗಳು ಕನ್ನಡದ ಪದಗಳೆಂದೇ ಸಿದ್ಧವಾಗುತ್ತವೆ. ಇದು ನಮ್ಮ ಸಂಗೀತದ ಚರಿತ್ರೆಯ ದೃಷ್ಟಿಯಿಂದ ಸ್ವಾರಸ್ಯವೂ ಮುಖ್ಯವೂ ಆಗಿರುವ ಸಂಗತಿ. ಏಕೆಂದರೆ ತೆಲುಗಿನಲ್ಲಿಯೂ ಕನ್ನಡದಲ್ಲಿಯೂ ಇವು ಸುಮಾರು ಒಂದೇ ಕಾಲದಲ್ಲಿ ಹುಟ್ಟಿಕೊಂಡಿವೆ. ಕ್ಷೇತ್ರಯ್ಯನ ಕಾಲವೂ ಹದಿನೇಳನೆಯ ಶತಮಾನವೇ ಆಗಿದೆ. ಗೀತಗೋಪಾಲದಲ್ಲಿ ಒಂದು ಮತ್ತು ಚಿಕದೇವರಾಯ ಸಪ್ತಪದಿಯಲ್ಲಿ ಐದು ತೆಲುಗು ಪದಗಳು ಕಂಡುಬರುವುದನ್ನು ಇಲ್ಲಿ ಗಮನಿಸಬೇಕು. ತಂಜಾವೂರಿನಷ್ಟು ದೂರದೇಶದಿಂದ ಸಮಕಾಲೀನನೊಬ್ಬನ ಸ್ಫೂರ್ತಿಪಡೆದು ತಿರುಮಲಾರ್ಯನು ಈ ಕನ್ನಡ ಪದಗಳನ್ನು ರಚಿಸಿದನೆನ್ನುವುದು ಕಷ್ಟ. ಈ ಕಾಲದಲ್ಲಿ ತಂಜಾವೂರಿನ ಮತ್ತು ಮೈಸೂರಿನ ನಡುವೆ ಅಷ್ಟೇನೂ ವಿಶೇಷವಾಗಿ ಸಾಂಸ್ಕೃತಿಕ ವಿನಿಮಯವು ನಡೆದಿರುವುದಕ್ಕೆ ಸಾಕ್ಷ್ಯಗಳೇನೂ ಇಲ್ಲ. ಹಾಗೆ ನೋಡಿದರೆ ಕರ್ನಾಟಕದಿಂದಲೇ ತಂಜಾವೂರಿಗೆ ನಮ್ಮ ಸಂಗೀತಸಂಪತ್ತು ಹೋಗಿ ಹರಡಿತು ಎಂದು ಬೇಕಾದರೂ ಹೇಳಿಕೊಳ್ಳಬಹುದು. ಏಕೆಂದರೆ ತಂಜಾವೂರಿನ ಪ್ರಸಿದ್ಧ ಪ್ರಭುವಾಗಿದ್ದ ರಘುನಾಥನಾಯಕನ ಮುಖ್ಯ ಸಚಿವನಾಗಿ ತಂಜಾವೂರಿನ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣನಾದವನೂ, ಸಂಗೀತಸುಧಾ ಎಂಬ ಪ್ರಮಾಣಭೂತ ಸಂಗೀತಶಾಸ್ತ್ರ ಗ್ರಂಥವನ್ನು ರಚಿಸಿದವನೂ, ಅನೇಕ ಯಜ್ಞಯಾಗಾದಿಗಳನ್ನು ನಡೆಸಿ ವೈದಿಕಧರ್ಮದ ಪುನರುಜ್ಜೀವನಕ್ಕೆ ಸಹಾಯಕನೂ ಆಗಿದ್ದ ಗೋವಿಂದದೀಕ್ಷಿತನು ನಮ್ಮ ಸೀಮೆಯವನು; ಕನ್ನಡಿಗ. ಅವನ ಮಗನಾದ ವೆಂಕಟಮಖಿಯು ಆಧುನಿಕ ಕರ್ನಾಟಕ ಸಂಗೀತಕ್ಕೆ ತಳಹದಿಯೂ ಮಾರ್ಗದರ್ಶಕವೂ ಆದ ಚತುರ್ದಂಡೀಪ್ರಕಾಶಿಕೆಯನ್ನು

Dr. Urmila Sharma Collection, Varanasi

CC0. In Public Domain, Digitizagtion by eGangotri

ರಚಿಸಿದನು. ಅವನೂ ಕ್ಷೇತ್ರಯ್ಯನಂತೆಯೇ ತಂಜಾವೂರಿನ ಅರಸನಾದ ವಿಜಯರಾಘವಭೂಪಾಲನ ಆಶ್ರಯವನ್ನು ಪಡೆದವನು. ಅವನು ಕನ್ನಡಿಗ ಹೊನ್ನಯ್ಯನ ಶಿಷ್ಯ. ಗೋವಿಂದದೀಕ್ಷಿತ, ವೆಂಕಟಮುಖಿಗಳು ಕನ್ನಡ ನಾಡಿನಿಂದ ಹೊತ್ತುತಂದಿರಬಹುದಾದ ಈ 'ಪದಿ' ಎಂಬ ಗೇಯಪ್ರಕಾರದ ಸ್ಫೂರ್ತಿಯಿಂದ ಕ್ಷೇತ್ರಯ್ಯನು ಪದವನ್ನು ರಚಿಸಿದ್ದನೆಂದು ಬೇಕಾದರೂ ಕನ್ನಡಾಭಿಮಾನಿಗಳಾದ ಉತ್ಸಾಹಿಗಳು ಹೇಳಿಕೊಳ್ಳಬಹುದು. ಆದರೆ ಇದಕ್ಕೆ ಪ್ರತ್ಯಕ್ಷಪ್ರಮಾಣವೇನೂ ಇಲ್ಲ. ಹೆಚ್ಚಿನ ಸಂಶೋಧನೆ ನಡೆದು ಈ ಹಾಡಿನ ಹುಟ್ಟು ನಿರ್ಧರವಾಗಬೇಕು. ಅಲ್ಲಿಯವರೆಗೆ, ಏಕಕಾಲದಲ್ಲಿ, ಕನ್ನಡನಾಡು, ಆಂಧ್ರ, ತಮಿಳುನಾಡುಗಳಲ್ಲಿ, ಕನ್ನಡ, ತೆಲುಗು ಭಾಷೆಗಳಲ್ಲಿ ಈ ಬಗೆಯ ಗೇಯಪ್ರಕಾರವು ಕಂಡುಬಂದಿದೆಯೆಂದು ಹೇಳಬೇಕು.

ಆದರೂ, ಪದ ಎಂಬ ಹೆಸರು ಈ ಬಗೆಯ ಹಾಡಿಗೆ ಬಂದು, ಉಳಿದಿದ್ದು ಕನ್ನಡ ನಾಡಿನ, ಕನ್ನಡ ನುಡಿಯ ಪ್ರಭಾವದಿಂದಲೇ ಎನ್ನಬಹುದು. ಪದವೆಂದರೆ ಹಾಡಿದ ಮಾತು ಎಂಬ ಸಾಮಾನ್ಯಾರ್ಥವು ದಾಸರ ಪದ, ಪದಿ ಎಂದು ಮುಂತಾಗಿ ರೂಢಾರ್ಥದಲ್ಲಿ ಕನ್ನಡ ಸಾಹಿತ್ಯ ಸಂಗೀತಗಳಲ್ಲಿ ಬೆಳೆದು ಉಳಿಯಿತು ಎಂಬುದನ್ನು ಮೇಲೆ ಹೇಳಿದೆ. ಪದ ಎಂಬುದು ಹಾಡು ಎಂಬ ಅರ್ಥದಲ್ಲಿ ಕಡೆಯಪಕ್ಷ ಹದಿನಾರನೆಯ ಶತಮಾನದಿಂದ ರೂಢಿಯಲ್ಲಿದೆ ಎಂಬುದು ಕವಿಚರಿತೆಕಾರರು ಸಂಗ್ರಹಿಸಿದ ಕಬೀರದಾಸರ ಪದಗಳು, ರತ್ನಾಕರಣ್ಣಗಳ ಪದ, ಕಂಠೀರವರಾಜ ಪದಗಳು, ಬಿಡು (? ಬಿಡಿ) ಪದಗಳು, ಮಧ್ವದಾಸರ ಪದಗಳು, ಮಾಧವದಾಸರ ಪದಗಳು, ವರಾಹ ತಿಮ್ಮಪ್ಪ ದಾಸರಪದಗಳು, ವಿಠ್ಠಲಪದಗಳು, ದಾಸಂಪದಗಳು, ದುಂದುಮೆಪದ, ಭಾಗಣದ ದಾಸರ ಪದಗಳು, ರಂಗವೊಲಿದದಾಸರ ಪದಗಳು, ವಿಜಯದಾಸರ ಪದಗಳು, ವೈರಾಗ್ಯ ಪದಗಳು, ಶ್ರೀ ವೆಂಕಟೇಶ ಜೋಗುಳದಪದ ಎಂದು ಹತ್ತೊಂಬತ್ತನೆಯ ಶತಮಾನದವರೆಗೆ ಪ್ರಯುಕ್ತವಾಗುತ್ತಿದ್ದುದು ಈ ಹಸ್ತಪತ್ರಿಕೆಗಳ ಹೆಸರುಗಳಿಂದಲೇ ತಿಳಿಯುತ್ತದೆ.[12] ಶೃಂಗಾರರಸ ಭೂಯಿಷ್ಠವಾದ, ಭಕ್ತಿಯಲ್ಲಿ ಮುಗಿಯುವ ಅಥವಾ ಮುಗಿಯದ ಕನ್ನಡದ ಹಾಡುಗಳಿಗೂ ಪದಗಳೆಂದೇ ಹದಿನೇಳನೆಯ ಶತಮಾನದಲ್ಲೇ ವ್ಯವಹಾರವಿದ್ದುದೂ ಇದೇ ಆಕರದಿಂದಲೇ ತಿಳಿದುಬರುತ್ತದೆ. ಹೀಗೆ, ಈ ಕಾಲದಲ್ಲಿ ಚಿಕುಪಾಧ್ಯಾಯನ ಚಿಕದೇವರಾಜ ಶೃಂಗಾರಪದಗಳು, ಅವನದೇ ಶೃಂಗಾರದ ಹಾಡುಗಳೂ ದೊರೆಯುತ್ತವೆ.[13] ಶೃಂಗಾರದ ಪದಗಳು ಎಂಬ ಮಾತು ಗಮನಾರ್ಹವಾಗಿದೆ. ಪದವೆಂಬುದು ಹಾಡು ಎಂಬ ಸಾಮಾನ್ಯಾರ್ಥದಿಂದ ಮೇಲೆ ಹೇಳಿದ ವಿಶೇಷಾರ್ಥಕ್ಕೆ

Dr. Urmila Sharma Collection, Varanasi

CC0. In Public Domain, Digitizagtion by eGangotri

ಬದಲಾಯಿಸುತ್ತಿದ್ದ ಸಂಧಿಕಾಲವನ್ನು ಇದು ಸೂಚಿಸುತ್ತದೆ. ಏಕೆಂದರೆ, ಹಾಡು, ಪದ ಎಂದು ಎರಡು ಶಬ್ದಗಳನ್ನೂ ಶೃಂಗಾರಪರವಾದ ಗೀತಗಳಿಗೆ ಬಳಸಿದ್ದರೂ ಈ ಸಂದರ್ಭದಲ್ಲಿ ಪದ ಎಂದೇ ಮುಂದೆ ಸ್ಥಿರವಾಯಿತು. ಅಲ್ಲದೆ ಕನ್ನಡದಲ್ಲಿ ಈ ಬಗೆಯ ರಚನೆ ಬೆಳೆಯುತ್ತ ಬಂದಿತು. ಹೀಗೆ, ಹದಿನೆಂಟನೆಯ ಶತಮಾನದಲ್ಲಿ ರಾತ್ರಿಯ ನಲ್ಲನ ಪದಗಳು (ಪದ್ಯಗಳು ಎಂಬ ಇಲ್ಲಿಯ ಪಾಠವು ಸ್ಪಷ್ಟವಾಗಿ ಪದದ ಭ್ರಷ್ಟರೂಪವೇ ಎಂಬುದರಲ್ಲಿ ಸಂದೇಹವಿಲ್ಲ), ಹತ್ತೊಂಬತ್ತನೆಯ ಶತಮಾನದಲ್ಲಿ ಸುರಪುರದ ವೆಂಕಟಕವಿಯ ಕರ್ಣಾಟಕಾಷ್ಟಪದಿಗಳು ರಚಿತ ವಾದವು.[14] ಪದಗಳು ರಸಾಭಿನಯಕ್ಕಾಗಿ ನೃತ್ಯದಲ್ಲಿಯೂ ಬಳಕೆಯಾಗುತ್ತಿದ್ದ ವೆಂಬುದು ಅಪ್ರಮೇಯ ಶಾಸ್ತ್ರಿಯು ಗೀತಗೋಪಾಲಕ್ಕೂ ಗೀತ ಗೋವಿಂದಕ್ಕೂ ಬರೆದ ಕನ್ನಡ ಟೀಕಿನಿಂದ ಸ್ಪಷ್ಟವಾಗುತ್ತದೆ. ತೆಲುಗಿನಲ್ಲಿ ಪದವೆಂಬ ಹೆಸರು ಈ ಬಗೆಯ ಹಾಡಿಗೆ ಹದಿನೇಳು, ಹದಿನೆಂಟನೆಯ ಶತಮಾನ ದಲ್ಲಿ ಹೇಳಿರುವುದನ್ನು ನಾನು ನೋಡಿಲ್ಲ. ಕನ್ನಡದಲ್ಲಿ ಮೇಲೆ ಹೇಳಿರುವ ಉದಾ ಹರಣೆಗಳಿಂದಲೂ ಗೀತಗೋಪಾಲ, ಚಿಕದೇವರಾಯ ಸಪ್ತಪದಿಗಳಿಂದಲೂ ಅದು ಪ್ರಯುಕ್ತವಾದುದು ಸುಸ್ಪಷ್ಟವಾಗಿದೆ. ತೆಲುಗಿನಂತೆಯೇ ಕನ್ನಡದಲ್ಲೂ ಜಾವಳಿಗಳು ಬೆಳೆದಿವೆ. ಇವುಗಳಲ್ಲಿ ಪಟ್ಟಾಭಿರಾಮಯ್ಯ, ಮಂಗಳಪುರಿ ವಾಸ ರನ್ನು ಹೆಸರಿಸಬೇಕು. ಇವರಿಂದಲೂ ಇತರರಿಂದಲೂ ರಚಿತವಾದ ನೂರಾರು ಕನ್ನಡ ಜಾವಳಿಗಳು ಧೂಳಿನಿಂದಲೂ ಜೇಡನ ಬಲೆಯಿಂದಲೂ ಮುಚ್ಚಿಹೋಗಿ ಹುಳುಹೊಡೆದಿರುವ ಹಸ್ತಪ್ರತಿಗಳಲ್ಲಿ ತಮ್ಮ ಕಾಲವನ್ನು ನಿರೀಕ್ಷಿಸುತ್ತಿವೆ. ಭರತ ನಾಟ್ಯ ಸಂಪ್ರದಾಯಸ್ಥರಲ್ಲಿ ಹಳೆಯ ತಲೆಗಳು ಇವಕ್ಕೆ ರಂಗಪ್ರವೇಶವಿಲ್ಲದೆ ಕೊರಗುತ್ತಿದ್ದಾರೆ. ಇದು ಹೇಗೇ ಇರಲಿ, ಚಿಕದೇವರಾಯ ಸಪ್ತಪದಿಯಲ್ಲಿ ಹಲವು ಹಾಡುಗಳು ಜಾವಳಿಗೆ ಮಾತೃಸ್ಥಾನದಲ್ಲಿರುವಂತೆ ಭಾಸವಾಗುತ್ತದೆ. ಈ ವಿಷಯದಲ್ಲಿ ಅಭ್ಯಾಸವು ನಡೆಯಬೇಕಾಗಿದೆ.

ತೆಲುಗು ಪದಗಳಲ್ಲಿಯೂ ಗೀತಗೋಪಾಲ, ಚಿಕದೇವರಾಯ ಸಪ್ತಪದಿ ಗಳಲ್ಲಿ ಇರುವ ಕನ್ನಡ ಪದಗಳಲ್ಲಿಯೂ ಇರುವ ವ್ಯತ್ಯಾಸ ಮತ್ತು ಹೋಲಿಕೆ ಗಳನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡಿದರೆ ನಮ್ಮ ಸಂಗೀತ ಸಾಹಿತ್ಯ ಗಳೆರಡಕ್ಕೂ ಪ್ರಯೋಜನವುಂಟು. ಇಲ್ಲಿ ಅದನ್ನು ಮಾಡಲು ನನಗೆ ಬಿಡುವಿಲ್ಲ. ಇದನ್ನು ಅಭ್ಯಾಸಮಾಡಬಹುದಾದ ರೀತಿಯೊಂದನ್ನಿಲ್ಲಿ ಸಂಕ್ಷೇಪವಾಗಿ ಸೂಚಿಸಬಹುದು, ಅಷ್ಟೆ. ಪದಗಳಲ್ಲಿರುವ ವಿವಿಧ ಭಾವಗಳಿಗೆ ಸರಿಹೊಂದುವ ರಾಗ-ತಾಳ-ಲಯ ಇವುಗಳ ಸಾಮಗ್ರಿಯನ್ನೇ ಕುರಿತು ಚಾರಿತ್ರಿಕವಾಗಿಯೂ ಆಧುನಿಕವಾಗಿಯೂ ಸಂಗೀತ ವಿದ್ವಾಂಸರು ವಿವೇಚಿಸಬಹುದು ; ವಸ್ತು, ಶೈಲಿ,

Dr. Urmila Sharma Collection, Varanasi

CC0. In Public Domain, Digitizagtion by eGangotri

ರಚನಾವಿನ್ಯಾಸಗಳನ್ನು ಕುರಿತು ಸಾಹಿತ್ಯವಿಮರ್ಶಕರು ಚರ್ಚಿಸಬಹುದು; ಕಲ್ಪನಾವೈಖರಿಯನ್ನು ಕುರಿತು ಕವಿಗಳೂ ಪ್ರಬಂಧಪ್ರಕಾರವಾಗಿ ವಾಗ್ಗೇಯಕಾರರೂ ಚಿಂತನೆ ಮಾಡಬಹುದು. ಆದರೆ ಇದೆಲ್ಲಕ್ಕೂ ಮೂಲವಾಗಿ, ಪದಕ್ಕೆ ವಿಶಿಷ್ಟವಾಗಿರುವುದು ಅದರಲ್ಲಿನ ರಸಪ್ರತೀತಿ. ಇದು ವಿಶಾಲವಾದ ಸಂಶೋಧನೆಗೆ ಅವಕಾಶವನ್ನೊಳಗೊಂಡಿದೆ. ಶೃಂಗಾರವು ಸಂಭೋಗವೆಂದೂ ವಿಪ್ರಲಂಭವೆಂದೂ ಎರಡು ಭೇದಗಳುಳ್ಳ ರಸ. ಇವೆರಡಕ್ಕೂ ರತಿಯೇ ಸ್ಥಾಯಿಭಾವ. ಇದು ಯೌವನ ಸಂಪನ್ನರಾದ ಸ್ತ್ರೀಪುರುಷರಲ್ಲಿ ಉಂಟಾಗುವ ರಸ. ಸಂಭೋಗಾವಸ್ಥೆಯಲ್ಲಿ ಶೃಂಗಾರವು ವಸಂತವೇ ಮೊದಲಾದ ಋತುಗಳು, ಪುಷ್ಪಹಾರ, ಕಾಮೋದ್ದೀಪಕಗಳಾದ ಗಂಧ, ಒಡವೆ, ಅಥವಾ ರತಿಸಂದರ್ಭಗಳನ್ನು ಸಲ್ಲಿಪಿಸುವ ವಿದೂಷಕ, ಸಖ ಅಥವಾ ಸಖೀ ಮೊದಲಾದ ಇಷ್ಟಜನರ ಸಹವಾಸ, ಗೀತವಾದ್ಯ ನೃತ್ಯಗಳು, ಕಾಮೋದ್ದೀಪನಕ್ಕೆ ಸಹಕಾರಿಯಾದ ಭವನಾದಿಗಳು, ಪುಷ್ಪವಾಟಿಕಾ, ಜಲಕೇಳಿಗೆ ಸೌಕರ್ಯ, ಉದ್ಯಾನವನ, ಚಿತ್ರಗಳು ಮುಂತಾದ ವಿಭಾವಗಳಿಂದ ಹುಟ್ಟುತ್ತದೆ ಅಥವಾ ಬೆಳೆಯುತ್ತದೆ. ಇದಕ್ಕೆ ಅನುಭಾವಗಳು ಕಣ್ಣು, ಕಣ್ಣುಗುಡ್ಡೆ, ಕಣ್ಣಂಚು ಮೊದಲಾದವುಗಳ ವಿಲಾಸಮಯ ವಿಕ್ಷೇಪ, ಲಲಿತವೂ ಸುಕುಮಾರವೂ ಆದ ಅಂಗವಿಕ್ಷೇಪ, ಮಧುರವೂ ರತಿಸಂದರ್ಭಸೂಚಕವೂ ಆದ ಮಾತು ಇತ್ಯಾದಿಗಳು, ಆಲಸ್ಯ, ಉಗ್ರತೆ ಜುಗುಪ್ಸೆ ಮುಂತಾದವುಗಳು ಇದಕ್ಕೆ ವ್ಯಭಿಚಾರಿಭಾವಗಳು. ಸಂಭೋಗ ಶೃಂಗಾರದಲ್ಲಿ ನಾಯಕನಾಯಕಿಯರ ಅಪೇಕ್ಷೆಯು ಕೈಗೂಡುವಂತಹ ಬಾಹ್ಯ ಮತ್ತು ಆಂತರಿಕ ಸನ್ನಿವೇಶಗಳು ಇರುತ್ತವೆ. ಹಾಗೂ ರಸವು ವಿಶ್ರಾಂತಿಯಲ್ಲಿ ಮುಗಿಯುತ್ತದೆ.

ವಿಪ್ರಲಂಭ ಶೃಂಗಾರಾವಸ್ಥೆಯು ಇದಕ್ಕೆ ವ್ಯತಿರಿಕ್ತವಾದುದು. ಇಲ್ಲಿ ನಾಯಕನಾಯಕಿಯರ ಅಪೇಕ್ಷೆಯು ಕೈಗೂಡದೆ ಇದಕ್ಕೆ ಕಾರಣವಾದ ಭೌತಿಕ ಹಾಗೂ ಮಾನಸಿಕ ಸಂದರ್ಭಗಳು ರಸಪ್ರತೀತಿಯನ್ನು ಉಂಟುಮಾಡುತ್ತವೆ. ವಿರಹದ ವಿವಿಧ ಭಾವ, ಚೇಷ್ಟೆ, ಅವಸ್ಥೆಗಳು ವಿಪ್ರಲಂಭ ಶೃಂಗಾರದ ಅಂಗಗಳು. ಇದಕ್ಕೆ ಮೇಲೆ ಹೇಳಿದ ವಿಭಾವಗಳೇ ಇರಬಹುದು. ಇವು ಆಲಂಬನ ಮತ್ತು ಉದ್ದೀಪನವೆಂದು ಎರಡು ವಿಧ. ನಿರ್ವೇದ, ಗ್ಲಾನಿ, ಶಂಕೆ, ಅಸೂಯೆ, ಶ್ರಮ, ಚಿಂತೆ, ಔತ್ಸುಕ್ಯ, ನಿದ್ರೆ, ಸ್ವಪ್ನ, ಪ್ರಬೋಧ, ವ್ಯಾಧಿ, ಉನ್ಮಾದ, ಅಪಸ್ಮಾರ, ಜಾಡ್ಯ, ಮೋಹ, ಮರಣ ಮುಂತಾದವುಗಳು ಇಲ್ಲಿ ಅನುಭಾವಗಳು. ವಿಪ್ರಲಂಭವು ರತಿಯಿಂದ ಹುಟ್ಟಿದರೂ ಕರುಣೆಯನ್ನು ಹುಟ್ಟಿಸುವುದರಿಂದ ಅದಕ್ಕೂ ಸಂಬಂಧಿತವಾದ ರಸವೇ ಆಗಿದೆ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಶೃಂಗಾರನಾಯಕನಲ್ಲಿಯೂ ನಾಯಿಕೆಯಲ್ಲಿಯೂ ಅನೇಕ ಪ್ರಭೇದಗಳುಂಟು. ಇವರನ್ನೆಲ್ಲ ಪದಗಳಲ್ಲಿ ಕಾಣಬಹುದು. ಇವರ ಲಕ್ಷಣಗಳನ್ನು ನಾಟ್ಯಶಾಸ್ತ್ರ, ಸರಸ್ವತೀ ಕಂಠಾಭರಣ, ರಸಮಂಜರೀ, ಸಾಹಿತ್ಯದರ್ಪಣ ಪ್ರತಾಪರುದ್ರೀಯ, ದಶರೂಪಕ ಮೊದಲಾದ ಗ್ರಂಥಗಳು ಹೇಳುತ್ತವೆ. ಹೀಗೆ ಶೃಂಗಾರನಾಯಕನೆಂದರೆ ಪ್ರೇಯಸಿಯರನ್ನು ಉಳ್ಳವನು. ಮೊದಲು ಪ್ರೀತಿಸಲ್ಪಟ್ಟವಳಿಗೆ ಜ್ಯೇಷ್ಠೆಯೆಂದೂ ಹೊಸದಾಗಿ ನಾಯಕನಿಂದ ಅನುರಕ್ತಳಾದವಳಿಗೆ ಕನಿಷ್ಠೆಯೆಂದೂ ಇಲ್ಲಿ ಸಂಜ್ಞೆ. ಹೀಗೆ ಒಬ್ಬಳಲ್ಲೇ ಅನುರಕ್ತನಾಗಿದ್ದರೆ ಅವನು 'ಅನುಕೂಲ.' ಕನಿಷ್ಠೆಯಲ್ಲಿ ಅನುರಕ್ತನಾದರೂ ಜ್ಯೇಷ್ಠೆಯಲ್ಲಿ ಸಹೃದಯನಾಗಿದ್ದರೆ ಅವನು 'ದಕ್ಷಿಣ', ಜ್ಯೇಷ್ಠೆಗೆ ಗುಟ್ಟಿನಲ್ಲಿ ಮೋಸ ಮಾಡಿದರೆ (ಎಂದರೆ ಪ್ರಣಯವಿಲ್ಲದಿದ್ದರೂ ಇದ್ದಂತೆ ನಟಿಸಿದರೆ) ಶಠ; ಕನಿಷ್ಠೆಯ ಸಹವಾಸದ ಗುರುತು ತನ್ನ ದೇಹದಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದರೂ ಜ್ಯೇಷ್ಠೆಯ ಬಳಿಸಾರುವ ಭಂಡನಾಯಕನಿಗೆ ಧೃಷ್ಟನೆಂದು ಹೆಸರು. ಪೀಠಮರ್ದನನೆಂಬ ಕುಶಲಿಯಾದ ಸ್ನೇಹಿತನೂ ವಿಟವಿದೂಷಕರೂ ಶೃಂಗಾರನಾಯಕನ ಸಹಾಯಕರು. ನಾಯಕನಿಗೆ ಶೋಭೆ, ವಿಲಾಸ, ಮಾಧುರ್ಯ, ಗಾಂಭೀರ್ಯ, ಸ್ಥೈರ್ಯ, ತೇಜಸ್ಸು, ಲಾಲಿತ್ಯ, ಔದಾರ್ಯ ಎಂಬ ಎಂಟು ಗುಣಗಳಿರುತ್ತವೆ.

ನಾಯಿಕೆಯು ಸ್ವೀಯಾ (ಸ್ವಸ್ತ್ರೀ—ತನ್ನವಳು), ಅನ್ಯಾ (ಬೇರೆಯವಳು), ಸಾಧಾರಣಸ್ತ್ರೀ ಎಂದು ಮೂರುವಿಧ. ಸ್ವೀಯೆಯು ಒಳ್ಳೆಯ ಶೀಲದಿಂದಿದ್ದು ಸರಳವಾಗಿರುವವಳು. ಹೊಸಪ್ರಾಯದ ಕಾಮವನ್ನೂ ವಾಮಶೀಲವಾದ ರತಿಯನ್ನೂ ಮೃದುಕೋಪವನ್ನೂ ಉಳ್ಳ ಸ್ವೀಯೆಯು ಮುಗ್ಧೆ. ತುಂಬಿತುಳುಕುವ ಜವ್ವನವನ್ನೂ ಕಾಮವನ್ನೂ ಎಚ್ಚರತಪ್ಪುವವರೆಗೂ ರತಿಯನ್ನು ಭರಿಸಬಲ್ಲವಳೂ, ಕೋಪಬಂದಾಗ ಕೊಂಕುಮಾತು, ಕಣ್ಣೀರುಗಳಿಂದ ನಾಯಕನನ್ನು ವ್ಯಸನಪಡಿಸುವವಳೂ ಮಧ್ಯಾಸ್ವೀಯೆಯೆನಿಸುತ್ತಾಳೆ. ಯೌವನದಿಂದ ಕುರುಡಾಗಿಯೂ ಮದನೋನ್ಮತ್ತಳೂ ರತಿಯ ಮೊದಲಿನಲ್ಲೇ ಪತಿಯಲ್ಲಿ ಕರಗಿಬಿಡುವವಳೂ ಪ್ರಗಲ್ಭೆಯೆನಿಸುತ್ತಾಳೆ. ಅನ್ಯಸ್ತ್ರೀಯಲ್ಲಿ ಅವಿವಾಹಿತಳಾದ ಕನ್ಯಕಾ, ಮದುವೆಯಾದ ಊಢಾ ಎಂದು ಎರಡು ವಿಧ. ಕಾಮಕಲೆಯಲ್ಲಿ ನಿಷ್ಣಾತಳೂ ಧೂರ್ತಳೂ ಆಗಿರುವ ಗಣಿಕೆಗೆ ಸಾಧಾರಣಸ್ತ್ರೀ ಎಂದು ಹೆಸರು.

ಇಂತಹ ನಾಯಿಕೆಯರಲ್ಲಿ ಎಂಟು ಅವಸ್ಥೆಗಳಿವೆ. ನಾಯಕನು ಅಧೀನನಾಗಿ ಬಳಿಯಲ್ಲೇ ಇರುವುದರಿಂದ ಸಂತುಷ್ಟಳಾಗಿದ್ದರೆ ಅವಳಿಗೆ ಸ್ವಾಧೀನ

Dr. Urmila Sharma Collection, Varanasi

CC0. In Public Domain, Digitizagtion by eGangotri

ಭರ್ತೃಕಾ ಎಂದು ಹೆಸರು. ನಲ್ಲನು ಬರುವವೇಳೆಯಲ್ಲಿ ತನ್ನನ್ನು ಸಿಂಗರಿಸಿಕೊಂಡು ಸಂಭ್ರಮದಿಂದಿರುವವಳು ವಾಸಕಸಜ್ಜಾ. ನಲ್ಲನು ನಿರ್ದೋಷಿಯಾದರೂ ಬರುವುದು ತಡವಾದರೆ ಅವನಲ್ಲಿ ಸಂಶಯಪಟ್ಟು ಉತ್ಕಂಠಿತಳಾಗುವವಳು ವಿರಹೋತ್ಕಂಠಿತಾ, ಇನ್ನೊಬ್ಬಳ ಸಂಗದ ಕುರುಹುಗಳನ್ನು ನಲ್ಲನಲ್ಲಿ ಕಂಡು ಅಸೂಯೆಯಿಂದ ಮನಸ್ಸನ್ನು ಕೆಡಿಸಿಕೊಳ್ಳುವವಳು ಖಂಡಿತಾ. ತನ್ನಲ್ಲಿ ತಪ್ಪುಮಾಡಿದ ರಮಣನಲ್ಲಿ ಮೊದಲು ಕೋಪಿಸಿ, ಜಗಳವಾಡಿ, ಕಡೆಯಲ್ಲಿ ಪಶ್ಚಾತ್ತಾಪಪಟ್ಟು ದುಃಖಪಡುವವಳು ಕಲಹಾಂತರಿತ. ನಾಯಕನು ಹೇಳಿದ ಸಮಯಕ್ಕೆ ಬರದಿರುವುದರಿಂದ ಅವಮಾನಿತಳಾದೆನೆಂದು ದುಃಖಿಸುವವಳು ಅಥವಾ ಕೋಪಿಸುವವಳು ವಿಪ್ರಲಬ್ಧಾ. ಪ್ರಿಯನು ಕೆಲಸದ ಮೇಲೆ ದೂದೇಶಕ್ಕೆ ಹೋಗಿದ್ದರೆ ವಿರಹದಿಂದ ಬಳಲುವವಳು ಪ್ರೋಷಿತ ಪ್ರೇಯಸೀ. ನಲ್ಲನು ದೂರದೇಶದ ಪ್ರಯಾಣಕ್ಕೆಂದು ಹೊರಟು ನಿಂತಿರುವ ಕಾಲದಲ್ಲಿ ವಿರಹವನ್ನು ಅನುಭವಿಸುವವಳು ಪ್ರವತ್ಸ್ಯತ್ ಪತಿಕಾ. ತನ್ನ ಕಾಮವನ್ನು ಹತ್ತಿಕ್ಕಲಾರದೆ ಪ್ರಿಯನನ್ನೇ ಹುಡುಕಿಕೊಂಡು ಹೋಗುವವಳು ಅಥವಾ ಪ್ರಿಯನು ತನ್ನನ್ನು ಹುಡುಕಿಕೊಂಡು ಬರುವಂತೆ ಮಾಡುವವಳು ಅಭಿಸಾರಿಕಾ.

ಇವರಲ್ಲಿ ಸ್ವಾಧೀನಭರ್ತೃಕೆಯೂ ವಾಸವಸಜ್ಜೆಯೂ ಮಾತ್ರ ಸಂಭ್ರಮದಿಂದಲೂ ಉಜ್ವಲವಾಗಿಯೂ ಕ್ರೀಡೆಯಿಂದಲೂ ಸಂತೋಷದಿಂದಲೂ ಇರುತ್ತಾರೆ. ಉಳಿದವರೆಲ್ಲರೂ ಚಿಂತೆ, ಉದ್ವೇಗ, ಉಸಿರುಕಳೆಯುವುದು, ವ್ಯಸನ, ಕಂಬನಿ, ಬಣ್ಣ ಬಿಳಿಚಿಕೊಳ್ಳುವುದು, ಆಯಾಸ, ಅಲಂಕಾರದಲ್ಲಿ ಔದಾಸೀನ್ಯ ಮುಂತಾದವುಗಳನ್ನು ಅನುಭವಿಸುತ್ತಾರೆ. ಅನ್ಯಾನಾಯಿಕೆಯರಲ್ಲಿ ವಿರಹೋತ್ಕಂಠಿತಾ, ಅಭಿಸಾರಿಕಾ, ವಿಪ್ರಲಬ್ಧಾ ಎಂಬ ಮೂರು ಅವಸ್ಥೆಗಳು ಮಾತ್ರ ಸಾಧ್ಯ. ಸ್ವೀಯೆಯಲ್ಲಿ ಎಂಟೂ ಇರಲು ಸಾಧ್ಯ. ಈ ಎಲ್ಲಾ ನಾಯಕಿಯರಿಗೂ ದಾಸೀ, ಸಖಿ, ಕಾರೂ (ಕೀಳುಜಾತಿಯ ರಜಕಜಾತಿಯ ಸ್ತ್ರೀ, ಮನೆಗೆಲಸದವಳು, ಇತ್ಯಾದಿ), ಧಾತ್ರೇಯಿ (ಮಲತಾಯಿಯ ಮಗಳು), ಪ್ರತಿವೇಶಿಕಾ (ನೆರೆಮನೆಯವಳು), ಲಿಂಗಿನೀ (ಭಿಕ್ಷುಕೀ, ಸನ್ಯಾಸಿನೀ, ಇತ್ಯಾದಿ), ಶಿಲ್ಪಿನೀ (ಚಿತ್ರ, ಶಿಲ್ಪ ಮೊದಲಾದ ಲಲಿತಕಲೆಗಳನ್ನು ತಿಳಿದವಳು), ಮತ್ತು ವಿಶೇಷ ಸಂದರ್ಭಗಳಲ್ಲಿ ತಾನೇ, ಹೀಗೆ ದೂತಿಯರ ಸಹಾಯವನ್ನು ಪಡೆಯುತ್ತಾಳೆ.

ಈ ನಾಯಕ ನಾಯಿಕಾ ಲಕ್ಷಣಗಳಲ್ಲಿ ಬಹುಭಾಗವು ವಿಪ್ರಲಂಭಕ್ಕೆ ಅನ್ವಯವಾಗುತ್ತದೆ. ಇವುಗಳನ್ನು ಚಿಕದೇವರಾಯ ಸಪ್ತಪದಿಯಲ್ಲಿಯೂ ಗೀತಗೋಪಾಲದಲ್ಲಿಯೂ ಅಭ್ಯಾಸಿಗಳು ಈ ಲಕ್ಷಣಗಳನ್ನು ಗುರುತಿಸಿ

Dr. Urmila Sharma Collection, Varanasi

CC0. In Public Domain, Digitizagtion by eGangotri

ತಿಳಿಯಲು ಸಹಾಯವಾಗಲೆಂದು ಇಲ್ಲಿ ಹೇಳಿದೆ. ಇವೆಲ್ಲವೂ ತೆಲುಗು ಪದಗಳಲ್ಲಿ ಕಂಡುಬರುತ್ತವೆ; ಅಲ್ಲದೆ ಇವುಗಳ ಅಸಂಖ್ಯಾತ ಅವಾಂತರ ಭೇದಗಳನ್ನೂ ಅವಸ್ಥೆ, ಭಾವ, ಚೇಷ್ಟೆ ಇವುಗಳ ಲೆಕ್ಕವಿಲ್ಲದಷ್ಟು ಛಾಯಾಂತರ ಗಳನ್ನೂ ಅಲ್ಲಿ ಕಾಣಬಹುದು. ಶೃಂಗಾರರಸದ ಮಧುರವೂ, ಶ್ರಾವ್ಯವೂ, ಸಮಗ್ರವೂ, ಸುಂದರವೂ ಆದ ವ್ಯಾಖ್ಯೆಯೇ ಪದ. ಅದರ ಎಲ್ಲಾ ಲಕ್ಷಣ ಗಳನ್ನೂ ಈ ಎರಡು ಕನ್ನಡದ ಹಾಡುಗಬ್ಬಗಳಲ್ಲಿ ಕಾಣಬಹುದೆಂದು ಸೂಚಿಸು ವುದು ಈ ಲೇಖನದ ಉದ್ದೇಶ.

ಬಿರುದಾವಳಿ

ಚಿಕದೇವರಾಯ ಸಪ್ತಪದಿಯಲ್ಲಿ ಮೊದಲನೆಯ ಭಾಗಕ್ಕೆ ಬಿರುದಾವಳಿ ಸಪ್ತಪದಿ ಎಂದು ಹೆಸರಿಟ್ಟಿರುವುದು ವಿಶೇಷವಾಗಿ ಗಮನಾರ್ಹವಾಗಿದೆ. ಇದರಲ್ಲಿ ಚಿಕದೇವರಾಯನ ಶೌರ್ಯಪರಾಕ್ರಮಗಳನ್ನೂ ದಿಗ್ವಿಜಯಗಳನ್ನೂ ವರ್ಣಿಸಿದೆಯಷ್ಟೆ. ಹೀಗೆ ಶೃಂಗಾರೇತರ ರಸವೊಂದು ಪ್ರಧಾನವಾಗಿ ಈ ಭಾಗದಲ್ಲಿ ವರ್ಣಿತವಾಗಿದೆ. ಗೀತಗೋಪಾಲದ ಉತ್ತರಾರ್ಧದಲ್ಲಿಯೂ ಶೃಂಗಾರವಲ್ಲದ ರಸವೊಂದರ ಪ್ರತೀತಿಯು ಅಲ್ಲೊಂದು ಇಲ್ಲೊಂದು ಹಾಡು ಗಳಲ್ಲಿ ಕಂಡು ಬರುತ್ತದೆ. ಇವುಗಳೆಲ್ಲವೂ ಕೃತಿಗಳು, ಪದಗಳಲ್ಲ ಎಂಬುದರಲ್ಲಿ ಸಂದೇಹವಿಲ್ಲ. ಇವುಗಳಲ್ಲಿ ಪದ—ಅಥವಾ ಪದಿ- -ಎನ್ನುವುದು ಹಾಡು ಎಂಬ ಸಾಮಾನ್ಯಾರ್ಥದಲ್ಲಿ ಮಾತ್ರ ಪ್ರಯುಕ್ತವಾಗಿದೆ. ಹೀಗೆ ಒಂದೇ ಕಾವ್ಯದಲ್ಲಿ ಎರಡು ಬಗೆಯೂ ಕಂಡು ಬರುತ್ತದೆ.

ಬಿರುದು ಎಂದರೆ ವಿಶೇಷಸಾಧನೆಯ ಫಲವಾಗಿ ಅಗ್ಗಳಿಕೆಗಾಗಿ ಸ್ವೀಕರಿಸಿದ ಅಥವಾ ಕೊಟ್ಟ ವರ್ಣನಾಸ್ತರೂಪದ ಹೆಸರು ಎಂದು ಅರ್ಥವಷ್ಟೆ. ಇದೇ ಸಾಮಾನ್ಯಾರ್ಥದಲ್ಲಿ ಕಾವ್ಯದ ನಾಯಕನ ಶೌರ್ಯಾತಿಶಯವನ್ನು ವರ್ಣಿಸುವ ಈ ಹಾಡುಗಳಲ್ಲಿರುವ ಬಿರುದುಗಳ ಸಮೂಹಕ್ಕೆ ಬಿರುದಾವಳಿ ಎಂದು ಹೆಸರಿಟ್ಟಿ ರುವುದು ಉಚಿತವೆಂದೇ ತೋರಿದರೂ ಬಿರುದು + ಆವಳಿ=ಬಿರುದಾವಳಿ ಎಂಬ ಸಮೀಕರಣವು ಅಸಹಜವಾಗಿಯೇ ಇರುತ್ತದೆ. ಬಿರುದು ಎಂಬುದನ್ನು ಕನ್ನಡ ಶಬ್ದವೆಂದಿಟ್ಟುಕೊಂಡರೆ ಇದು ಅರಿಸಮಾಸವಾಗುತ್ತದೆ. ಸಂಸ್ಕೃತದಲ್ಲಿ ಬಿರುದ ಎಂಬ ಶಬ್ದವು ಮೇಲೆ ಹೇಳಿದ ಪ್ರಶಂಸೆ, ಸ್ತುತಿ ಮುಂತಾದವುಗಳನ್ನು ಒಳಗೊಂಡ ಪದ್ಯ, ಹಾಡು, ಎಂದು ಅರ್ಥವನ್ನು ಕೊಡುತ್ತದೆ. ಆದುದರಿಂದ ಬಿರುದ + ಆವಳಿ ಎಂಬ ವಿಗ್ರಹವೇ ಇಲ್ಲಿ ಸರಿ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಬಿರುದ ಎನ್ನುವುದು ಸಂಗೀತಶಾಸ್ತ್ರದಲ್ಲಿ ಪರಿಭಾಷಾ ಸಂಜ್ಞೆಯೂ ಹೌದು. ಪ್ರಬಂಧದ, ಎಂದರೆ ಹಾಡಿನ, ದೇಹವನ್ನು ಆರು ಅಂಗಗಳನ್ನು ಉಳ್ಳದ್ದೆಂದು ಹೇಳಿದೆ. ಇವುಗಳಲ್ಲಿ ಬಿರುದನೆಂಬುದೂ ಒಂದು. ಅದು ಪ್ರಬಂಧದೇಹದ ಒಂದು ಕೈ ಎಂದು ಲೆಕ್ಕಿಸಲ್ಪಟ್ಟಿದೆ. ಬಿರುದವೆಂದರೆ ಗುಣನಾಮವೆಂದು ಶ್ರೀ ಶಾರ್ಙ್ಗದೇವನು ಸೂತ್ರರೂಪದಲ್ಲಿ ಹೇಳುತ್ತಾನೆ. ಈ ಶಬ್ದಕ್ಕೆ ಸಂಸ್ಕೃತದಲ್ಲಿಯೂ ಮ್ಲೇಚ್ಛಭಾಷೆಯಲ್ಲಿಯೂ ನಿರುಕ್ತಿಯಿದೆಯೆಂದು ಸಂಗೀತ ಸುಧಾಕಾರನಾದ ಗೋವಿಂದ ದೀಕ್ಷಿತನು ಮೇಲ್ಕಂಡ ಅರ್ಥವನ್ನು ವಿಸ್ತರಿಸುತ್ತಾನೆ; ಈ ಅರ್ಥವನ್ನು ಈ ಕನ್ನಡಿಗನು ಪಡೆದಿದ್ದರೂ ಶ್ರೀಚರಣರೆಂದು ಬಹು ಬಹುಮಾನ ಪೂರ್ವಕವಾಗಿ ಅವನು ಕರೆಯುವ ಕರ್ನಾಟಕ ಸಿಂಹಾಸನ ಸಂಸ್ಥಾಪನಾಚಾರ್ಯರಾದ ಕನ್ನಡಿಗ ಶ್ರೀ ವಿದ್ಯಾರಣ್ಯರಿಂದಲೇ. ಪ್ರಭುವಿನ ಔದಾರ್ಯ, ಶೌರ್ಯ ಮೊದಲಾದ ಗುಣಗಳ ಪ್ರಶಂಸೆಯನ್ನು ಮಾಡುವುದು ಬಿರುದ. ಮಹಾರಾಷ್ಟ್ರದಲ್ಲಿ ಬಿರು (ಅಥವಾ ವಿರು) ಎಂದರೆ ವಿರುದ್ಧ ಎಂದರ್ಥವಿದೆ ಎಂದು ಪಾರ್ಶ್ವದೇವನು ಸಂಗೀತ ಸಮಯ ಸಾರದಲ್ಲಿ ಹೇಳುತ್ತಾನೆ. ಶತ್ರುಗಳನ್ನು ಗೆದ್ದು ರಾಜರು ತೆಗೆದುಕೊಂಡುದೂ ಬಿರುದವೇ; ದ್ವೇಷವನ್ನೂ ಉದ್ವೇಗವನ್ನೂ (ಶತ್ರುಗಳ ಹೃದಯದಲ್ಲಿ) ಉಂಟುಮಾಡುವಂತಹುದು ಎಂದು ಇದರ ಅರ್ಥ; ಅದು ವೀರರಸ ಪ್ರಧಾನವಾಗಿರುತ್ತದೆ. ಇದಲ್ಲದ ಉಳಿದ ಮಾತುಗಳಿಗೆಲ್ಲ ಪ್ರಬಂಧದಲ್ಲಿ ಪದ ಎಂದೇ ಸಮುಚ್ಚಯನಾಮ. ಗೋವಿಂದ ದೀಕ್ಷಿತನು ಬಿರುದವನ್ನು ಹೀಗೆ ವಿವರಿಸುತ್ತಾನೆ:

ಔದಾರ್ಯಶೌರ್ಯಾದಿ ಗುಣಪ್ರಶಂಸಾಶಬ್ದಂ ಪ್ರಭೂಣಾಂ ಬಿರುದಂ ವದಂತಿ |
ಆರ್ಯಪ್ರಸಿದ್ಧೇರ್ಬಿರುದಾಖ್ಯಶಬ್ದೇ ಮ್ಲೇಚ್ಛಪ್ರಸಿದ್ಧೇರಥ ವಾ ನಿರುಕ್ತಃ ||
ಏವಂ ಪ್ರಸಕ್ತೇ ಸತಿ ಸಂಶಯೇಽಸ್ಮಿನ್ ವಿನಿಶ್ಚಿತಂ ಶ್ರೀಚರಣೈರ್ವಿವಿಚ್ಯ |
ವಿರುದ್ಧವಾಚೀ ಬಿರುದಾಖ್ಯಶಬ್ದೋ ಭವೇನ್ಮಹಾರಾಷ್ಟ್ರಜನಪ್ರಸಿದ್ಧಃ ||
ನಿರ್ಜಿತ್ಯ ಶತ್ರೂನ್ ಬಿರುದಂ ದಧಾನಂ ರಾಜಾನಮಾಸಾದ್ಯ ಸಪತ್ನಭೂಪಾಃ |
ರಾಮಾರ್ಜುನಾದೇರಿವ ಶೌರ್ಯರೀತೀ ರಾಧಾಸುತಾದೇರಿವ ದಾತೃತೇತಿ ||
ಏತತ್ಪ್ರಬಂಧಶ್ರವಣೇ ತದೀಯ ಚಿಹ್ನಾವಲೋಕೇ ಖಲು ತೇ ವಿಶುದ್ಧಾಃ |
ಏತಾದೃಶಂ ವೀರರಸಪ್ರಧಾನಂ ದ್ವಿಷಾಂ ತಥೋದ್ವೇಗಕರಂ ಚ ಯತ್ ಸ್ಯಾತ್ ||
ದ್ವಿಷಾಂ ವಿರುದ್ಧಪ್ರತಿಪಾದನಸ್ಯ ಬೋದ್ಧವ್ಯಮೇತದ್ ಬಿರುದಾಭಿಧಾನಮ್ |[17]

ಚಿಕದೇವರಾಯ ಸಪ್ತಪದಿಯ ಬಿರುದಾವಳಿ ಸಪ್ತಪದಿಯಲ್ಲಿರುವ ಹಾಡುಗಳನ್ನು ಈ ದೃಷ್ಟಿಯಿಂದ ಅಭ್ಯಾಸಮಾಡಿದರೆ ಬಿರುದ ಎಂಬ ಶಬ್ದವನ್ನು ಕವಿಯು

Dr. Urmila Sharma Collection, Varanasi

CC0. In Public Domain, Digitizagtion by eGangotri

ಪಾರಿಭಾಷಿಕಾರ್ಥದಲ್ಲಿಯೇ ಬಳಸಿದ್ದಾನೆಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

ಸಪ್ತ 'ಪದಿ'—ರಚನೆ

ಚಿಕದೇವರಾಯ ಸಪ್ತಪದಿಯಲ್ಲಾಗಲೀ ಗೀತಗೋಪಾಲದಲ್ಲಾಗಲೀ ಇರುವ ಹಾಡುಗಳು ಯಾವ ಬಗೆಯ ಛಂದೋಕ್ರಮದಿಂದಲೂ ನಿರ್ಬಂಧಿತವಾಗಿರುವುದು ಕಾಣುವುದಿಲ್ಲ. ಅಂಶಗಣ ಅಥವಾ ಮಾತ್ರಾಗಣದ ಲೆಕ್ಕವು ಅವುಗಳಲ್ಲಿ ಎಲ್ಲಿಯೂ ಕಾಣಸಿಗದು. ಆದರೆ ಇಡೀ ಕಾವ್ಯದಲ್ಲಿ ಉದ್ದಕ್ಕೂ ಪ್ರತಿಯೊಂದು ಹಾಡಿನಲ್ಲಿಯೂ ದ್ವಿತೀಯಾಕ್ಷರ ಪ್ರಾಸವಿದೆ. ಅಲ್ಲಲ್ಲಿ, ಉದಾಹರಣೆಗೆ ಚಿಕದೇವರಾಯ ಸಪ್ತಪದಿಯಲ್ಲಿ ಕಾಂತೆಸವ್ಶೋಗದೊಳ್ನುಡಿವ ಬಗೆಗಳ ಸಪ್ತಪದಿಯ ಐದನೆಯ ತ್ರಿಪದಿಯಲ್ಲಿ, ಅಂಶತಃ ಅಂತ್ಯಾಕ್ಷರಪ್ರಾಸವೂ ಇದೆ. ಏಳನೆಯ ಸ್ವಾಧೀನ ವಲ್ಲಭೆಯರ ವೃತ್ತಾಂತಸಪ್ತಪದಿಯಲ್ಲಿ ಮಾತ್ರ ಅಂತ್ಯಾಕ್ಷರ ಪ್ರಾಸವು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗೆ, ಛಂದಸ್ಸು ಮತ್ತು ಶಾಸ್ತ್ರಗಳ ದೃಷ್ಟಿಯಿಂದಲೂ ಈ ಹಾಡುಗಳು ಈಗಿನ ಕೃತಿ ಮತ್ತು ಪದಗಳಿಗೆ ಅತ್ಯಂತ ಸದೃಶವಾಗಿವೆ.

ಎರಡು ಕಾವ್ಯಗಳಲ್ಲಿಯೂ ಆಯಾ ಸಪ್ತಪದಿಯ ಮೊದಲಿನಲ್ಲಿ ಅದರ ಪರಿವಿಡಿಯನ್ನೂ, ಪ್ರತಿಯೊಂದು ಹಾಡಿನ ಮೊದಲಿನಲ್ಲಿ ಅದರ ಸಾರಾಂಶವನ್ನೂ ಗದ್ಯರೂಪದ ವ್ಯಾಖ್ಯಾನದಲ್ಲಿ ಕವಿಯೇ ಕೊಟ್ಟಿದ್ದಾನೆ. (ಗೀತಗೋಪಾಲದ ಪ್ರಥಮಾರ್ಧದಲ್ಲಿ ಹಾಡುಗಳ ಮೊದಲಿನಲ್ಲಿ ವಚನಗಳಿಲ್ಲ. ಇದು ಗ್ರಂಥಪಾತವೋ ಕವಿಯು ಬರೆದುದೇ ಹೀಗಿತ್ತೋ ಎಂದು ತಿಳಿಯದು.) ಗೀತಗೋಪಾಲದ ಎರಡು ಭಾಗಗಳಲ್ಲಿಯೂ ಕೆಲವು ಕಂದ. ವೃತ್ತಗಳನ್ನು ಹಾಡಬೇಕಾದ ರಾಗಗಳ ಹೆಸರಿನೊಡನೆ ಕೊಟ್ಟಿದ್ದಾನೆ. ಹಾಗೆಯೇ ಪ್ರತಿ ಸಪ್ತಪದಿಯ ಆರಂಭದಲ್ಲಿಯೂ ಎರಡೆರಡು ವೃತ್ತಗಳಿವೆ. ಇವುಗಳಿಗೆ ಮಾತ್ರ ರಾಗನಿರ್ದೇಶವಿಲ್ಲ. ಪ್ರತಿಹಾಡಿನ ಮೊದಲು ಒಂದು ಕಂದಪದ್ಯ; ಅದನ್ನು ಹಾಡಿನ ರಾಗದಲ್ಲಿಯೇ ಹಾಡಬೇಕು. ವಚನರೂಪದ ವ್ಯಾಖ್ಯಾನವನ್ನು ಬಿಟ್ಟರೆ ಇವುಗಳಲ್ಲಿ ಇನ್ನು ಯಾವುದೂ ಚಿಕದೇವರಾಯ ಸಪ್ತಪದಿಯಲ್ಲಿ ಕಾಣುವುದಿಲ್ಲ.

ಹಾಡುಗಳ ರಚನೆಯು ಎರಡರಲ್ಲೂ ಒಂದೇ ರೀತಿಯದಾಗಿದೆ. ಮೊದಲು ಪಲ್ಲವಿ, ಆಮೇಲೆ ಒಂದು ಅಥವಾ ಹೆಚ್ಚು ನುಡಿಗಳು, ಪ್ರತಿಯೊಂದು ನುಡಿಗೂ 'ಪದಿ'ಯೆಂದು ವ್ಯವಹಾರ. ಎಷ್ಟು ನುಡಿಗಳಿವೆಯೆಂಬುದನ್ನು ಹಾಡಿನ

Dr. Urmila Sharma Collection, Varanasi

CC0. In Public Domain, Digitizagtion by eGangotri

ಮೊದಲಿನಲ್ಲಿ ವಚನದಲ್ಲಿಯೇ ಹೇಳಿರುವುದರಿಂದ ಹಾಡಿನ ಪ್ರಮಾಣವನ್ನು ನಿಶ್ಚಿತವಾಗಿ ನಿರ್ಧರಿಸಲು ಸಾಧ್ಯವಾಗುತ್ತದೆ. ಹೀಗೆ, ಒಂದು ನುಡಿಯಿದ್ದರೆ ಏಕಪದಿ, ಎರಡಿದ್ದರೆ ದ್ವಿಪದಿ, ಮೂರಿದ್ದರೆ ತ್ರಿಪದಿ. ಕವಿಯ ಒಲವು ತ್ರಿಪದಿಗಳ ಕಡೆಯೇ ಇದೆ; ಇವೇ ಅತ್ಯಂತ ಅಧಿಕ ಪ್ರಯೋಗವನ್ನು ಪಡೆದಿವೆ. ಕೃತಿ ಮತ್ತು ಪದಗಳ ಅರ್ವಾಚೀನ ರಚನೆಯಲ್ಲಿಯೂ ಹೀಗೆಯೇ; ತ್ರಿಪದಿಯೆಂದರೆ ಕನ್ನಡಸಾಹಿತ್ಯದಲ್ಲಿ ಸರ್ವಜ್ಞನಾದಿಯಾಗಿ ಹೇಳಿದ ಪದ್ಯಬಂಧವೆಂದಾಗಲೀ ಸಾವಿರದ ಐನೂರು ವರ್ಷಗಳಷ್ಟು ಹಿಂದೆ ಮತಂಗನು ಬೃಹದ್ದೇಶಿಯಲ್ಲಿ ಹೇಳಿದ ಮತ್ತು ಚಾಳುಕ್ಯ ಚಕ್ರವರ್ತಿ ಸೋಮೇಶ್ವರನು ಮಾನಸೋಲ್ಲಾಸದಲ್ಲಿ ಹೇಳಿದ, ಕನ್ನಡ ಗೇಯ ಪ್ರಕಾರವೆಂದಾಗಲೀ ಇಲ್ಲಿ ತಿಳಿಯಬಾರದು. ಇದೇ ಮಾತು ದ್ವಿಪದಿಗೂ ಸಲ್ಲುತ್ತದೆ. ಏಕಪದಿಯು ಗೀತಗೋಪಾಲದಲ್ಲಿ ಎರಡು ಸಲ ಮಾತ್ರವೂ[18] ದ್ವಿಪದಿಯು ಒಂದೇಸಲವೂ[19] ಪಂಚಪದಿಯು ಹದಿನಾಲ್ಕು ಸಲವೂ[20] ಸಪ್ತಪದಿಯು ಒಂದೇಸಲವೂ[21] ಬಂದಿವೆ. ಇದರಲ್ಲಿ ನವಪದಿಯಿಲ್ಲ. ಚಿಕ್ಕದೇವರಾಯ ಸಪ್ತಪದಿಯಲ್ಲಿ ಏಕಪದಿಯು ಒಮ್ಮೆಯೂ[22] ದ್ವಿಪದಿಯು ಒಮ್ಮೆಯೂ[23] ಪಂಚಪದಿಯು ಮೂರುಸಲವೂ[24] ನವಪದಿಯು ಒಮ್ಮೆಯೂ[25] ಬಂದಿವೆ. ಇದರಲ್ಲಿ ಸಪ್ತಪದಿಯಿಲ್ಲ. ಎರಡರಲ್ಲಿಯೂ ಚತುಷ್ಪದಿ, ಷಟ್ಪದಿ ಮತ್ತು ಅಷ್ಟಪದಿಗಳಿಲ್ಲ; ಎಂದರೆ, ಎರಡನ್ನುಳಿದ ಬೇರೆ ಸಮಸಂಖ್ಯೆಯ ನುಡಿಗಳಿಲ್ಲ. ಈ ರೀತಿಯಲ್ಲಿಯೂ ಇಲ್ಲಿನ ಹಾಡುಗಳು ಕೃತಿ ಮತ್ತು ಪದಗಳಿಗೆ ಅತ್ಯಂತ ಸದೃಶವಾಗಿವೆ.

ಕೃತಿಯಲ್ಲಿಯೂ ಪದದಲ್ಲಿಯೂ ಒಂದು, ಅಥವಾ ಎರಡು ಪಂಙ್ಕ್ತಿಗಳ ಪಲ್ಲವಿ, ಅದರ ಎರಡರಷ್ಟು ಅನುಪಲ್ಲವಿ, ನಾಲ್ಕರಷ್ಟು ನುಡಿ–ಇದು ರಚನಾ ರೀತಿ. ಗೀತಗೋಪಾಲ ಮತ್ತು ಚಿಕದೇವರಾಯ ಸಪ್ತಪದಿಗಳಲ್ಲಿರುವ ಯಾವ ಹಾಡಿನಲ್ಲಿಯೂ ಅನುಪಲ್ಲವಿಯಿಲ್ಲವೆಂಬುದನ್ನೂ ಆದರೆ ಅನುಪಲ್ಲವಿಯಾಗಿ ಪಲ್ಲವಿಯೇ ಒಡೆಯುವ ಪ್ರವೃತ್ತಿಯನ್ನೂ ಮೇಲೆ ಸೂಚಿಸಿದೆ. ಇಲ್ಲಿ ಪಲ್ಲವಿಯು ಸಾಮಾನ್ಯವಾಗಿ ಎರಡು ಸಾಲುಗಳೆಂಬ ನಿಯಮ. ಆದರೂ ಹಲವು ಅಪವಾದಗಳು ಎರಡೂ ಕಾವ್ಯಗಳಲ್ಲಿವೆ. ಹೀಗೆ ಗೀತಗೋಪಾಲದಲ್ಲಿ ಒಂದು[26], ಮೂರು,[27] ನಾಲ್ಕು,[28] ಎಂಟು ಸಾಲುಗಳ ಪಲ್ಲವಿಗಳೂ ಕಂಡುಬರುತ್ತವೆ. ಚಿಕದೇವರಾಯ ಸಪ್ತಪದಿಯ ರಚನೆಯಲ್ಲಿ ಇಷ್ಟು ವೈಪರೀತ್ಯಗಳಿಲ್ಲದಿದ್ದರೂ ಮೂರು[29] ಮತ್ತು ನಾಲ್ಕು[30] ಸಾಲುಗಳ ಪಲ್ಲವಿಗಳು ಕಂಡುಬರುತ್ತವೆ. ಪಲ್ಲವಿಗಳಲ್ಲಿ ಸಾಲುಗಳು ಸಾಮಾನ್ಯವಾಗಿ ಒಂದೇ ವಿಸ್ತಾರದ್ದಾಗಿದ್ದರೂ ಹಲವು ವೇಳೆ ಬೇರೆ ಬೇರೆ ಉದ್ದಗಳೂ ಕಂಡುಬರುತ್ತವೆ. ಪಲ್ಲವಿಯ ಎರಡ

Dr. Urmila Sharma Collection, Varanasi

CC0. In Public Domain, Digitizagtion by eGangotri

ರಷ್ಟು ವಿಸ್ತಾರವೇ ಸುಡಿಗಳಲ್ಲಿನ ಸಾಮಾನ್ಯ ನಿಯಮ. ಒಂದೇ ಹಾಡಿನ ಚರಣಗಳಲ್ಲಿ ಪ್ರತಿಯೊಂದರ ಒಟ್ಟು ವಿಸ್ತಾರವೂ ಪ್ರತಿಪಙ್ಕ್ತಿಯ ವಿಸ್ತಾರವೂ ಹೆಚ್ಚುಕಡಿಮೆ ಸಮವಾಗಿರುತ್ತವೆ. ಹಾಡುಹಾಡಿಗೂ ಇದು ವ್ಯತ್ಯಾಸವಾಗುತ್ತದೆ. ಪಲ್ಲವಿಯಷ್ಟೇ ವಿಸ್ತಾರದ ಚರಣಗಳು ಚಿಕದೇವರಾಯ ಸಪ್ತಪದಿಯಲ್ಲಿಯೂ[31] ಗೀತಗೋಪಾಲದಲ್ಲಿಯೂ[32] ಕೆಲವು ಕಡೆ ಕಾಣಸಿಗುತ್ತವೆ. ಪಲ್ಲವಿಯಷ್ಟೇ ಅಥವಾ ಅದರ ಎರಡರಷ್ಟು ವಿಸ್ತಾರವಿಲ್ಲದ ಸಂಕೀರ್ಣ ಅನುಪಾತಗಳಲ್ಲಿಯೂ ಎರಡು ಕಾವ್ಯಗಳಲ್ಲಿಯೂ ಇವೆ. ಗೀತಗೋಪಾಲದಲ್ಲಿ ಇಂತಹುದು ಒಂದೇ ನನ್ನ ಗಮನಕ್ಕೆ ಬಂದಿರುವುದು.[33] ಈ ಕಾವ್ಯದಲ್ಲಿ ನಾಲ್ಕುಸಾಲುಗಳ ಚರಣಕ್ಕೆ ಅಪವಾದವು ಅತ್ಯಂತ ಕಡಿಮೆ. ಮೂರೇ ಸಾಲುಗಳುಳ್ಳ ಒಂದು ಬಹು ಅಪರೂಪವಾದ ಚರಣರೀತಿಯ ಒಂದು ಪಂಚಪದಿಯು ಅಲ್ಲಿ ದೊರೆಯುತ್ತದೆ.[34] ಚಿಕದೇವರಾಯ ಸಪ್ತಪದಿಯಲ್ಲಾದರೆ ಈ ನಿಯಮಕ್ಕೆ ಅಪವಾದಗಳು ಬಹುವಾಗಿ ದೊರೆಯುತ್ತವೆ. ಹೀಗೆ ಪಲ್ಲವಿ: ಚರಣದ ಅನುಪಾತವು ಅಲ್ಲಿ 3 : 8,[35] 2 : 5,[36] 3 : 4[37] ಮುಂತಾಗಿ ವಿನ್ಯಸ್ತವಾಗಿದೆ. 4 : 7 ಎಂದು ಕಾಣಸಿಗುವ ಒಂದು ಉದಾಹರಣೆಯಲ್ಲಿ[38] 7 ಎಂಬುದನ್ನು 3+4 ಎಂದು ಒಡೆದು ಇವೆರಡನ್ನೂ ಚರಣದ ಅಂಗಗಳಾಗಿ ಕಾಣಲು ಸಾಧ್ಯವಿದೆ. ಹಾಗೆಯೇ 3 : 7 ಎಂಬ ಅನುಪಾತದ ಒಂದು ಉದಾಹರಣೆಯಲ್ಲಿ[39] 7 ಎಂಬುದನ್ನು 6+1 ಎಂದು ಒಡೆದು ಚರಣವು ಪಲ್ಲವಿಯ ಎರಡರಷ್ಟೇ ಇದೆಯೆಂದೂ ಕಡೆಯಸಾಲನ್ನು ತ್ರಿಪದಿ ಮುಂತಾದವುಗಳಲ್ಲಿ ಮಾಡುವಂತೆ ಹಿಂದಿನಿಂದ ತೆಗೆದುಕೊಂಡು ಪುನರಾವರ್ತಿಸಿ ಹಾಡಲೋಸುಗ ಇಡೆಯೆಂದೂ ಭಾವಿಸಬಹುದು. ಹೀಗಾದರೆ ಇವೆರಡೂ ಕೃತಿ ಅಥವಾ ಪದದಲ್ಲಿ ನವ್ಯಪಂಥವೊಂದನ್ನು ಸಾಧಿಸಿಕೊಡುತ್ತವೆ. ವಾಗ್ಗೇಯಕಾರರು ಶಾಸ್ತ್ರೀಯ ಸಂಗೀತದಲ್ಲಿಯಾಗಲೀ ಸುಗಮ ಸಂಗೀತದಲ್ಲಿಯಾಗಲೀ ಇವುಗಳನ್ನು ಪುನರುಜ್ಜೀವನಗೊಳಿಸಿ ಬಳಕೆಗೆ ತಂದರೆ ನಮ್ಮ ಇಂದಿನ ಸಂಗೀತಕ್ಕೆ ಸುಂದರವಾದ ಕಾಣಿಕೆಯಾಗುತ್ತದೆ. ಪಲ್ಲವಿಯೇ ಇಲ್ಲದ ಒಂದೊಂದು ರಚನೆಯು ಚಿಕದೇವರಾಯ ಸಪ್ತಪದಿಯಲ್ಲಿಯೂ[40] ಗೀತಗೋಪಾಲದಲ್ಲಿಯೂ[41] ಇದೆ. ಪಲ್ಲವಿಯ ಪುನರಾವರ್ತನೆಯೇ ಇಲ್ಲದ, ನುಡಿಯಿಂದ ನುಡಿಗೆ ನೇರವಾಗಿ ದಾಟುವ, ಇದೂ ಒಂದು ಹೊಸಬಗೆಯ ಕೃತಿಯೇ.

ಗೀತಗೋಪಾಲವೊಂದರಲ್ಲಿ ಮಾತ್ರ ಇನ್ನು ಒಂದು ಹೊಸಬಗೆಯ ಕೃತಿಯು—ಅಥವಾ ಪದವು ಕಾಣಸಿಗುತ್ತದೆ. ಇದರಲ್ಲಿ[42] ಪಲ್ಲವಿಯನ್ನು ಪ್ರತಿಯ ಚರಣದ ಅಂತ್ಯದಲ್ಲಿ ಪುನಃ ಹಾಡುವುದೇ ಆದರೂ, ಮೊದಲಿನಲ್ಲಿಯೂ ಒಮ್ಮೆ

Dr. Urmila Sharma Collection, Varanasi

CC0. In Public Domain, Digitizagtion by eGangotri

ಹಾಡಬೇಕು. ಮೊದಲಿನಲ್ಲಿ ಹಾಡುವಾಗ ಆಯಾ ನುಡಿಯಲ್ಲಿ ಸ್ತುತ್ಯ ನಾಮ ನಾಗಿರುವ ಗರುಡ, ಮಹಾಶೇಷ, ಪರಕಾಲ, ಇವರುಗಳ ಹೆಸರನ್ನು ಸೇರಿಸಿ ಕೊಂಡು ಪಲ್ಲವಿಯನ್ನು ಹಾಡಬೇಕು. ಹೆಣ್ಣುಮಕ್ಕಳು ಪೂಜಾಸಮಯದಲ್ಲಿ ಮನೆಯಲ್ಲಿ ಹಾಡಿಕೊಳ್ಳುವ ಮಂಗಳಗಳಲ್ಲಿಯೂ ಕಲವು ಜಾನಪದ ಗೀತ ಪ್ರಕಾರಗಳಲ್ಲಿಯೂ ಇದು ಕಂಡು ಒಂದರೂ ಶಾಸ್ತ್ರೀಯ ಸಂಗೀತದಲ್ಲಿ ಇದು ಇರುವಂತೆ ಕಾಣುವುದಿಲ್ಲ. ನೂರಾರು ಮಂಗಳಗಳನ್ನು ರಚಿಸಿದ ಪುರಂದರ ದಾಸನಲ್ಲಿಯೂ ಈ ವೈಪಧ್ಯವು ಇರುವಂತೆ ತೋರುವುದಿಲ್ಲ. ಇದಕ್ಕಿಂತ ಹೆಚ್ಚು ನವ್ಯವಾಗಿರುವ ಇನ್ನು ಒಂದು ಬಗೆಯ ಕೃತಿಪ್ರಕಾರವು ಗೀತ ಗೋಪಾಲ ದಲ್ಲಿಯೇ ಕಂಡು ಬರುತ್ತದೆ ಅಲ್ಲಿ ಇಂತಹ ಎರಡು ಉದಾಹರಣೆಗಳು ದೊರೆ ಯುತ್ತವೆ[43] ಇವುಗಳಲ್ಲಿ ಪ್ರತಿಯೊಂದು ನುಡಿಗೂ ಬೇರೆಬೇರೆಯೇ ಆದ ಪಲ್ಲವಿಯಿದೆ. ಇವುಗಳ ವಚನದಲ್ಲಿ ತ್ರಿಪದಿ ಮತ್ತು ಪಂಚಪದಿಗಳೆಂದು ಕರೆ ದಿರುವುದರಿಂದ ಇವು ಬಿಡಿಯಾದ ಹಾಡುಗಳ ಸಂಕಲನವಲ್ಲವೆಂದು ಸ್ಪಷ್ಟ ವಾಗುತ್ತದೆ. ಪ್ರತಿಚರಣದ ಅಂತ್ಯದಲ್ಲಿಯೂ ಅದರ ಪಲ್ಲವಿಯನ್ನು ಹಾಡಿ ಕೊಂಡು ಮುಂದಿನ ಚರಣದ ಪಲ್ಲವಿಯನ್ನು ಎತ್ತಿಕೊಳ್ಳುವುದು ಇಲ್ಲಿನ ಕ್ರಮ ವೆಂದು ತೋರುತ್ತದೆ. ನಮ್ಮ ಶಾಸ್ತ್ರೀಯ ಸಂಗೀತದಲ್ಲೆಲ್ಲೂ ಈ ಬಗೆಯ ರಚನೆ ಇಂದು ದೊರೆಯುವುದಿಲ್ಲ.

ಶೃಂಗಾರಭಾವದಶಪದಿ

ಏಳು ಹಾಡುಗಳನ್ನುಳ್ಳ ಒಂದು ಸಮುಚ್ಚಯ—ಇದಕ್ಕೆ ಸಪ್ತಪದಿಯೆಂದು ಹೆಸರು—ಇಂತಹ ಏಳು ಸಪ್ತಪದಿಗಳು—ಇದು ಗೀತಗೋಪಾಲದ ಮತ್ತು ಚಿಕದೇವರಾಯ ಸಪ್ತಪದಿಯ ರಚನಾ ವೈಶಿಷ್ಟ್ಯ. ಇದನ್ನು ಕವಿಯು ಒಮ್ಮೆ ಮಾತ್ರ ಮೀರಿದ್ದಾನೆ—ಚಿಕದೇವರಾಯ ಸಪ್ತಪದಿಯ ಐದನೆಯ ಭಾಗವಾದ ಶೃಂಗಾರಭಾವದಲ್ಲಿ, ಇಲ್ಲಿ ಏಳರ ಬದಲು ಹತ್ತು ಹಾಡುಗಳಿವೆ. ಆದುದರಿಂದ ಇದನ್ನು ದಶಪದಿಯೆಂದು ಕರೆದಿದ್ದಾನೆ.

ಈ ವಿಭಾಗವು ಇನ್ನೂ ಒಂದು ರೀತಿಯಲ್ಲಿ ಸ್ವಾರಸ್ಯವಾಗಿದೆ. ಶೃಂಗಾರ ರಸದ ವರ್ಣನೆಯಲ್ಲಿ ತೊಡಗಿ ನಾನಾ ನಾಯಕ—ನಾಯಕೀ ಭಾವಗಳನ್ನು ಹೇಳುತ್ತಿರುವ ಕವಿಯು ಇಲ್ಲಿ ನಾಯಿಕೆಯ ವಿವಿಧ ಭಾವಗಳನ್ನು ಕುರಿತು ಹಾಡುಗಳನ್ನು ಕಟ್ಟಿದ್ದಾನೆ. ಈ ದಶಪದಿಯ ವಿಶೇಷವೇನೆಂದರೆ ಪ್ರತಿ ವರ್ಣನೆಗೂ ಶಾಸ್ತ್ರದಲ್ಲಿ ಹೇಳಿದ ಒಂದು ಸೂತ್ರವನ್ನು ತೆಗೆದುಕೊಂಡು ಅದನ್ನು ಕನ್ನಡಿಸಿ, ಅದಕ್ಕೆ ಲಕ್ಷ್ಯವನ್ನು ತನ್ನ ಸ್ವಂತ ಕವಿತ್ವದಿಂದ ಒದಗಿ

Dr. Urmila Sharma Collection, Varanasi

CC0. In Public Domain, Digitizagtion by eGangotri

ಸಿರುವುದು. ಇದೆಲ್ಲಕ್ಕೂ ತನ್ನ ಪ್ರಭುವಾದ ಚಿಕದೇವರಾಯನನ್ನೇ ನಾಯಕನನ್ನಾಗಿ ತೆಗೆದುಕೊಂಡಿದ್ದಾನೆ. ಅಪ್ರತಿಮ ವೀರಚರಿತೆಯಲ್ಲಿ ನಾಲ್ಕು ಪ್ರಕರಣಗಳಲ್ಲಿ ಇದೇ ಕವಿಯೇ ಅಲಂಕಾರಸೂತ್ರಗಳಿಗೆ ವೃತ್ತಿಗಳನ್ನು ಕನ್ನಡದಲ್ಲಿ ಬರೆದು ಅವುಗಳಿಗೆ ಉದಾಹರಣೆಗಳನ್ನು ತನ್ನ ಪ್ರಭುವೂ 'ಅಪ್ರತಿಮವೀರ'ನೆಂದು ಬಿರುದಾಂಕಿತನೂ ಆಗಿದ್ದ ಚಿಕದೇವರಾಯನನ್ನೇ ಕುರಿತ ಸ್ತುತಿಗಳ ಮೂಲಕ ತಿರುಮಲಾರ್ಯನು ಕೊಟ್ಟಿರುವುದನ್ನಿಲ್ಲಿ ಸ್ಮರಿಸಬಹುದು. ಚಿಕದೇವರಾಯ ಸಪ್ತಪದಿಯ " ಈ ಐದನೆಯ ದಶಪದಿಯೊಳ್ ಕಾಂತೆಯರ್ಗೆ ಸಾಜದಿಂ ಪುಟ್ಟುವ ಪತ್ತುಂ ಶೃಂಗಾರಭಾವಂಗಳಂ ಕ್ರಮದಿಂ ಭಾವಿಸುವರ್ " ಎಂಬ ಪೀಠಿಕೆಯನ್ನು ಕವಿಯು ಹಾಕಿಕೊಂಡಿದ್ದಾನೆ. ಇವೆಲ್ಲ ಶೃಂಗಾರ ರಸದ ವಿವಿಧ ಚೇಷ್ಟೆಗಳು. ಇಂತಹವು ಒಟ್ಟು ಇಪ್ಪತ್ತು ಸತ್ತ್ವಜವಾದ ಅಲಂಕಾರಗಳಿವೆ.

(1) ಭಾವ (2) ಹಾವ (3) ಹೇಲಾ (4) ಶೋಭಾ (5) ಕಾಂತಿ (6) ದೀಪ್ತಿ (7) ಮಾಧುರ್ಯ (8) ಪ್ರಗಲ್ಭತಾ (9) ಔದಾರ್ಯ (10) ಧೈರ್ಯ (11) ಲೀಲಾ (12) ವಿಲಾಸ (13) ವಿಚ್ಛಿತ್ತಿ (14) ವಿಭ್ರಮ (15) ಕಿಲಕಿಂಚಿತ (16) ಮೊಟ್ಟಾಯಿತ (17) ಕುಟ್ಟಮಿತ (18) ಬಿಬ್ಬೋಕ (19) ಲಲಿತ (20) ವಿಹೃತ. ಇವುಗಳಲ್ಲಿ ಮೊದಲನೆಯ ಮೂರು ಶರೀರದಲ್ಲಿ ಹುಟ್ಟುವ ಚೇಷ್ಟೆಗಳು. ಎರಡನೆಯ ಏಳು ಯತ್ನವಿಲ್ಲದೆಯೇ ಹುಟ್ಟುತ್ತವೆ. ಕಡೆಯ ಹತ್ತು ಸ್ವಭಾವದಿಂದ ಹುಟ್ಟುವಂತಹವುಗಳು.[14] ಬೇರೆ ಕೆಲವರು—ಉದಾಹರಣೆಗೆ ಪ್ರತಾಪರುದ್ರೀಯದಲ್ಲಿ ವಿಶ್ವನಾಥನು ಇವುಗಳನ್ನು ಹದಿನೆಂಟೆಂದು ಮಾತ್ರ ಎಣಿಸುತ್ತಾನೆ. ಅವನು ಅಯತ್ನಜಗಳಲ್ಲಿ ಶೋಭಾ, ಕಾಂತಿ, ದೀಪ್ತಿ, ಪ್ರಾಗಲ್ಭ್ಯಗಳನ್ನು ಸತ್ತ್ವಜ ಅಲಂಕಾರಗಳೆಂದು ಎಣಿಸದೆ ಕುತೂಹಲ, ಚಕಿತ ಮತ್ತು ಹಸಿತಗಳನ್ನು ಎಣಿಸಿಕೊಳ್ಳುತ್ತಾನೆ.[15] ಇನ್ನು ಕೆಲವರು ಇವುಗಳನ್ನು ಅಲಂಕಾರಗಳೆಂದು ತಿಳಿಯದೆ ಕೇವಲ ಅನುಭಾವಗಳೆಂದು ತಿಳಿಯುತ್ತಾರೆ. ಹತ್ತನೆಯ ಶತಮಾನದಲ್ಲಿ ರಚಿತವಾಗಿರಬಹುದಾದ ದಶರೂಪಕದಲ್ಲಿ ಧನಂಜಯನು ಈ ಇಪ್ಪತ್ತು ಅಲಂಕಾರಗಳನ್ನು ಕವಿಯು ಉದ್ಧರಿಸಿಕೊಳ್ಳುವ ಶ್ಲೋಕಗಳಿಗೆ ಸಮಾನಾಂತರವಾದವುಗಳನ್ನು ಕೊಡುತ್ತಾನೆ. ಅಕ್ಷರಶಃ ಸಾಮ್ಯಗಳು ಇಲ್ಲಿ ದೊರೆಯುವುದಿಲ್ಲ.[16] ಆದರೆ ತಿರುಮಲಾರ್ಯನು ತಾನು ಹೇಳುವ ಹತ್ತು ಲಕ್ಷಣಗಳ ವರ್ಗೀಕರಣಕ್ಕೆ ಧನಂಜಯನನ್ನೇ ಆಶ್ರಯಿಸಿರಬಹುದೆಂದು ತೋರುತ್ತದೆ. ಏಕೆಂದರೆ ಉದ್ಧೃತಿಗಳಲ್ಲಿನ ಅನುಕ್ರಮವು ಧನಂಜಯನದೇ ; ಅಲ್ಲದೆ ಕುತೂಹಲ, ಚಕಿತ, ಹಸಿತಗಳನ್ನು ಸೇರಿಸಿಕೊಳ್ಳುವುದಿಲ್ಲ. ಆದರೂ ಶೃಂಗಾರಭಾವ ದಶಪದಿಯಲ್ಲಿ ಉದ್ಧೃತವಾದ ಲಕ್ಷಣಶ್ಲೋಕ

Dr. Urmila Sharma Collection, Varanasi

CC0. In Public Domain, Digitizagtion by eGangotri

ಗಳ ಆಕರವು ವಿದ್ಯಾನಾಥನ ಪ್ರತಾಪರುದ್ರ ಯಶೋಭೂಷಣವೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಇಲ್ಲಿ ಉದ್ಧೃತಿಗಳು ಅಕ್ಷರಸಾಮ್ಯಗಳನ್ನು ಪಡೆದಿವೆ. ಹೀಗೆ ವರ್ಗೀಕರಣಕ್ಕೆ ಒಬ್ಬನನ್ನೂ ಲಕ್ಷಣಕ್ಕೆ ಭಿನ್ನ ಪಂಥದ ಇನ್ನೊಬ್ಬನನ್ನೂ ನಮ್ಮ ಕವಿಯು ಆಶ್ರಯಿಸಿರುವುದು ವಿಚಿತ್ರವಾಗಿದೆ. ಅಥವಾ ಇವೆರಡರ ಸಮ್ಮಿಶ್ರಣವನ್ನೊಳಗೊಂಡ ಮೂರನೆಯ ಗ್ರಂಥವೊಂದರಿಂದ ಉದ್ಧರಿಸಿ ಕೊಂಡಿದ್ದರೂ ಇರಬಹುದು.

ವಿದ್ಯಾನಾಥನು ಪ್ರತಾಪರುದ್ರ ಯಶೋಭೂಷಣವನ್ನು ರಚಿಸಿದ್ದು ಕ್ರಿ. ಶ. 1300 ರವೇಳೆಗೆ. ಇದಕ್ಕೆ ಪ್ರತಾಪರುದ್ರೀಯವೆಂದೂ ಹೆಸರಿದೆ. ಇದನ್ನು ಅವನು ರಚಿಸಿದ್ದು ಕ್ರಿ. ಶ. 1295 ರಿಂದ 1326 ರವರೆಗೆ ಓರಂಗಲ್ಲಿನಲ್ಲಿ ರಾಜ್ಯಭಾರಮಾಡಿದ ತನ್ನ ಪ್ರಭು ಕಾಕತೀಯ ಇಮ್ಮಡಿ ಪ್ರತಾಪರುದ್ರಗಜ ಪತಿಯ ಆಶ್ರಯದಲ್ಲಿ. ಅವನು ತನ್ನ ಲಕ್ಷಣೋಕ್ತಿಗಳಿಗೆಲ್ಲ ಪ್ರತಾಪರುದ್ರನನ್ನೇ ನಾಯಕನಾಗಿ ಉಳ್ಳ ತನ್ನ ಸ್ವಂತ ಕವಿತ್ವಗಳ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಅವನು ಪ್ರತಾಪರುದ್ರಕಲ್ಯಾಣವೆಂಬ ನಾಟಕವನ್ನೂ ತನ್ನ ಪ್ರಭುವಿನ ಮೇಲೆ ರಚಿಸಿದ್ದಾನೆ. ಇವನಿಂದಲೇ ಸ್ಫೂರ್ತಿ ಪಡೆದು ತಿರುಮಲಾರ್ಯನು ಗೀತಗೋಪಾಲ, ಚಿಕದೇವರಾಯ ಸಪ್ತಪದಿ, ಅಪ್ರತಿಮ ವೀರಚರಿತಗಳನ್ನು ರಚಿಸಿರಬಹುದು. ಗೀತಗೋಪಾಲವೂ ಚಿಕದೇವರಾಯ ಸಪ್ತಪದಿಯೂ ಗೇಯ ನಾಟಕಗಳೂ ಹೌದಷ್ಟೆ.

ಚಿಕದೇವರಾಯ ಸಪ್ತಪದಿಯು ಶೃಂಗಾರಭಾವ ದಶಪದಿಯಲ್ಲಿ ಉದ್ಧರಿಸಿದ ಹತ್ತು ಸ್ವಭಾವಜ ಶೃಂಗಾರಭಾವಗಳ ಲಕ್ಷಣಶ್ಲೋಕಗಳ ಶುದ್ಧಪಾಠವನ್ನು ಅಭ್ಯಾಸಿಗಳ ಸೌಕರ್ಯಕ್ಕೆಂದು ಅವುಗಳ ಆಕರವಾದ ಪ್ರತಾಪ ರುದ್ರಯಶೋ ಭೂಷಣದಿಂದ ಸಂಗ್ರಹಿಸಿ ಇಲ್ಲಿ ಕೊಡಲಾಗುವುದು.—

1. ಲೀಲಾ—ಪ್ರಿಯಾನುಕರಣಂ ಲೀಲಾ ವಾಗ್ಭಿರ್ಗತ್ಯಾಥ ಚೇಷ್ಟಿತೈಃ ।
2. ವಿಲಾಸ—ತಾತ್ಕಾಲಿಕೋ ವಿಕಾರಃ ಸ್ಯಾದ್ವಿಲಾಸೋ ದಯಿತೇಕ್ಷಣೇ ।
3. ವಿಚ್ಛಿತ್ತಿ—ವಿಚ್ಛಿತ್ತಿರತಿರಮ್ಯತ್ವಂ ಸ್ವಲ್ಪೈರಪಿ ವಿಭೂಷಣೈಃ ।
4. ವಿಭ್ರಮ—ವಿಭ್ರಮಸ್ತ್ವರಯಾ ಕಾಲೇ ಭೂಷಾಸ್ಥಾನ ವಿಪರ್ಯಯಃ ।
5. ಕಿಲಿಕಿಂಚಿತ—ರೋಷಾಶ್ರುಹರ್ಷಭೀತ್ಯಾದೇಃ ಸಂಕರಃ ಕಿಲಿಕಿಂಚಿತಮ್ ।
6. ಮೊಟ್ಟಾಯಿತ—ಮೊಟ್ಟಾಯಿತಂ ಸ್ಯಾದಿಷ್ಟಸ್ಯ ಕಥಾದೌ ಭಾವಸೂಚನಮ್ ।

Dr. Urmila Sharma Collection, Varanasi

CC0. In Public Domain, Digitizagtion by eGangotri

7. ಕುಟ್ಟಮಿತ—ಸಮ್ಮರ್ದೇಽಪಿ ಸುಖಾಧಿಕ್ಯಂ ರತೇ ಕುಟ್ಟಮಿತಂ ಮತಮ್ |

8. ಬಿಬ್ಬೋಕ—ಮನಾಕ್ ಪ್ರಿಯಕಥಾಲಾಪೇ ಬಿಬ್ಬೋಕೋಽನಾದರಕ್ರಿಯಾ |

9. ಲಲಿತ—ಸುಕುಮಾರೋಽಂಗವಿನ್ಯಾಸೋ ಲಲಿತಂ ಪರಿಕೀರ್ತ್ಯತೇ |

10. ವಿಹೃತ—ವಿಹೃತಂ ಪ್ರಾಪ್ತಕಾಲಸ್ಯ ವಾಕ್ಯಸ್ಯ ಅಕಥನಂ ಹ್ರಿಯಾ |

ರಾಗಗಳು

ಗೀತ ಗೋಪಾಲ ಮತ್ತು ಚಿಕದೇವರಾಯ ಸಪ್ತಪದಿಗಳಲ್ಲಿ ಕವಿಯು ಮೂವತ್ತೇಳು ರಾಗಗಳಲ್ಲಿ ಎಲ್ಲಾ ಹಾಡುಗಳನ್ನೂ ಅಡಕಮಾಡಿದ್ದಾನೆ. ಇವೆರಡರಲ್ಲಿಯೂ ಈ ಹದಿನಾರು ರಾಗಗಳು ಬಳಕೆಯಾಗಿರುವುದು ಕಂಡುಬರುತ್ತದೆ.

(1) ಭೈರವಿ, (2) ಕಾಂಭೋದಿ, (3) ಕೇತಾರಗೌಳ, (4) ಅಸಾವೇರಿ, (5) ಮುಖಾರಿ, (6) ಶಂಕರಾಭರಣ, (7) ವಸಂತ ಭೈರವಿ, (8) ಯರಕಲ ಕಾಂಭೋದಿ, (9) ಘಂಟಾರವ, (10) ಇಂದು ಘಂಟಾರವ, (11) ಮೋಹನ, (12) ಖಾಬಿ, (13) ಕಲ್ಯಾಣಿ, (14) ಕುರಂಜಿ, (15) ಮಧುಮಾಧವಿ, (16) ಸೀಲಾಂಬರಿ.

ಗೀತ ಗೋಪಾಲದಲ್ಲಿ ಮಾತ್ರ ಈ ಹದಿಮೂರು ರಾಗಗಳು ಪ್ರಯುಕ್ತವಾಗಿವೆ.

(1) ನಾಟಿ, (2) ಮಾಳವಿ, (3) ಮಾಳವಶ್ರೀ, (4) ಭೂಪಾಳಿ, (5) ಮಲಹರಿ, (6) ಮಂಗಳಕೌಶಿಕ, (7) ಬೌಳಿ, (8) ದೇವಗಾಂಧಾರಿ, (9) ನಾರಾಯಣಿ, (10) ಕನ್ನಡಗೌಳ, (11) ಹುಶಾನಿ, (12) ಶ್ರೀ, (13) ಪಂತುವರಾಳಿ.

ಚಿಕದೇವರಾಯಸಪ್ತಪದಿಯಲ್ಲಿ ಮಾತ್ರ ಈ ಎಂಟು ರಾಗಗಳನ್ನು ಹೇಳಿದೆ.

(1) ಸೌರಾಷ್ಟ್ರ, (2) ಪೂರವಿ (ಮಾರವಿ ?) (3) ಗುಮ್ಮಕಾಂಭೋಜಿ, (4) ಪಲಹರಿ, (5) ಆಹರಿ, (6) ಸಾರಂಗ, (7) ನಾಗಗಾಂಧಾರಿ, (8) ಸೈಂಧವಿ.

ಕವಿಯೇ ಈ ರಾಗಗಳನ್ನು ಎರಡೂ ಕಾವ್ಯಗಳಲ್ಲಿ ಹೀಗೆ ಹೆಸರಿಸಿದ್ದಾನೆಯೋ ಅಥವಾ ಅನಂತರದವರು ಮೊದಲಿದ್ದ ಹೆಸರುಗಳನ್ನು ಬದಲಾಯಿಸಿ ತಮ್ಮ ಕಾಲದಲ್ಲಿ ಪ್ರಚಾರದಲ್ಲಿದ್ದ ರಾಗಗಳನ್ನು ಹಾಕಿಕೊಂಡರೋ ಎಂಬುದು ಸಂದೇಹವಾಗಿದೆ. ಏಕೆಂದರೆ ಹೆಚ್ಚು ಕಡಿಮೆ ಈ ಕಾಲದಲ್ಲಿ ರಚಿತವಾದ

Dr. Urmila Sharma Collection, Varanasi

CC0. In Public Domain, Digitizagtion by eGangotri

ಶಿವತತ್ತ್ವರತ್ನಾಕರದಲ್ಲಿ ಇವುಗಳಲ್ಲಿ ಹಲವು ರಾಗಗಳ ನಾಮೋಲ್ಲೇಖವು ಸಹ ಇಲ್ಲ. ಇದಕ್ಕಿಂತ ಹಿಂದಿನ, ಹದಿನಾರನೆಯ ಶತಮಾನದ ನಿಜಗುಣ ಶಿವಯೋಗಿಯು ರಚಿಸಿದ ವಿವೇಕ ಚಿಂತಾಮಣಿಯಲ್ಲಿ ಇವುಗಳಲ್ಲಿ ಹಲವು ಹೆಸರುಗಳು ದೊರೆಯುತ್ತವೆ: ಇವುಗಳಿಗೆ ಲಕ್ಷಣವಿಲ್ಲ. ಅಲ್ಲದೆ ಇದು ಕಡೆಯಪಕ್ಷ ಮೂರು ಸಲ ಪ್ರಕ್ಷಿಪ್ತಗಳಿಂದ ಉಪಬೃಂಹಿಕವಾಗಿರುವ ಗ್ರಂಥ. ಇವೆರಡೂ ಸಂಗೀತ ಶಾಸ್ತ್ರಕ್ಕಾಗಿಯೇ ರಚಿತವಲ್ಲದ ಶಾಸ್ತ್ರಗ್ರಂಥಗಳಲ್ಲವೆಂದೂ ಆದುದರಿಂದ ಅಧುನಾ ಪ್ರಸಿದ್ಧರಾಗಗಳ ಲಕ್ಷಣವಿಲ್ಲವೆಂದೂ ಅನ್ಯೋಪಜೀವಿ ಉದ್ಧೃತಿಗಳಿಂದ ರಚಿತವಾದುವೆಂದೂ ಸಮಾಧಾನವನ್ನು ಹೇಳಿಕೊಳ್ಳಬಹುದಾದರೂ ಕನ್ನಡ ನಾಡಿನಲ್ಲಿ ಹೆಚ್ಚುಕಡಿಮೆ ಈ ಕಾಲದಲ್ಲಿ ರಚಿತವಾದ ಅಥವಾ ದೊರೆಯುವ ಸಂಗೀತ ಶಾಸ್ತ್ರ ಗ್ರಂಥಗಳೇ ಇಲ್ಲ. ಕನ್ನಡ ಸೀಮೆಯವರೇ ಆದ ಗೋವಿಂದ ದೀಕ್ಷಿತನು ಸಂಗೀತ ಸುಧಾದಲ್ಲಿಯೂ ವೆಂಕಟಮಖಿಯ ಚತುರ್ದಂಡೀ ಪ್ರಕಾಶಿಕೆಯಲ್ಲಿಯೂ ಇವುಗಳಲ್ಲಿ ಹಲವು ರಾಗಗಳನ್ನು ಹೇಳುವುದಿಲ್ಲ. ಕ್ರಿ. ಶ. ಸುಮಾರು 1800 ರವೇಳೆಗೆ ರಚಿತವಾಗಿರಬಹುದಾದ ಗೋವಿಂದನ ಸಂಗ್ರಹಚೂಡಾಮಣಿ, ಅಜ್ಞಾತಕರ್ತೃವೊಬ್ಬನ ರಾಗಲಕ್ಷಣ, ಭರತಕಲ್ಪಲತಾಮಂಜರೀ, ತಿರುವೆಂಕಟ ಕವಿಯ ಸಂಗೀತಸಾರ ಸಂಗ್ರಹಮು, ಕನ್ನಡ ಸಂಗೀತ ರತ್ನಾಕರ ಮೊದಲಾದ ಸಂಗೀತ ಶಾಸ್ತ್ರಗಳಲ್ಲಿ ಇವುಗಳ ಲಕ್ಷಣಗಳು ದೊರೆಯುತ್ತವೆ. ಆದುದರಿಂದ ಈ ರಾಗಗಳು ಹದಿನೇಳನೆಯ ಶತಮಾನದಿಂದ ಹದಿನೆಂಟನೆಯ ಶತಮಾನದ ಒಳಗೆ ಪ್ರಚಾರಕ್ಕೆ ಬಂದಿರಬೇಕು. ತಂಜಾವೂರಿನ ದೊರೆ ತುಳಜೇಂದ್ರನು ತನ್ನ ಸಂಗೀತ ಸಾರಾಮೃತದಲ್ಲಿಯೂ ವೆಂಕಟಮಖಿಯ ಮೊಮ್ಮಗನಾದ ಮುದ್ದುವೆಂಕಟಮಖಿಯು ತನ್ನ ರಾಗಲಕ್ಷಣದಲ್ಲಿಯೂ[18] ಈ ರಾಗಗಳಲ್ಲಿ ಅನೇಕವನ್ನು ವರ್ಣಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಗೀತಗೋಪಾಲ ಮತ್ತು ಚಿಕದೇವರಾಯ ಸಪ್ತಪದಿಗಳ ರಚನೆಯ ಕಾಲಕ್ಕಿಂತ ಕೇವಲ ಇಪ್ಪತ್ತೈದು ಮೂವತ್ತು ವರ್ಷಗಳ ನಂತರ ತುಳಜನು ಇವುಗಳನ್ನು ವರ್ಣಿಸಿರುವುದರಿಂದ ಈ ಲಕ್ಷಣಗಳು ಈ ಕಾವ್ಯಗಳಲ್ಲಿ ಉದ್ದೇಶಿಸಲ್ಪಟ್ಟ ಲಕ್ಷಣಗಳಿಗೆ ಅತ್ಯಂತ ಸಮೀಪವಾಗಿವೆಯೆಂದು ತಿಳಿಯಬೇಕು. ಅಲ್ಲದೆ ಸಂಗೀತ ಸಾರಾಮೃತದಲ್ಲಿ ಹೇಳಿರುವ ರಾಗಲಕ್ಷಣಗಳು ಬಹುಮಟ್ಟಿಗೆ ಈಗಿನವುಗಳನ್ನು ಹೋಲುತ್ತವೆ. ಆದುದರಿಂದ, ಸೇತುವೆಯಂತಿರುವ ಈ ಗ್ರಂಥದಿಂದ ಮೇಲೆ ಹೇಳಿದ ರಾಗಗಳ ಲಕ್ಷಣಗಳನ್ನು ಗ್ರಹಿಸಬಹುದು. ಇಲ್ಲದಿದ್ದರೆ ಸುಬ್ಬರಾಮ ದೀಕ್ಷಿತರ ಸಂಗೀತ ಸಂಪ್ರದಾಯಪ್ರದರ್ಶಿನೀ, ಮೈಸೂರು ವಾಸುದೇವಾಚಾರ್ಯರ ವಾಸುದೇವಕೀರ್ತನಮಂಜರೀ, ಕೆ. ವಿ.

Dr. Urmila Sharma Collection, Varanasi

CC0. In Public Domain, Digitizagtion by eGangotri

ಶ್ರೀನಿವಾಸ ಅಯ್ಯಂಗಾರ್ಯರ ತ್ಯಾಗರಾಜಹೃದಯ, ಮದ್ರಾಸಿನ ವಿದ್ವತ್ಸಭೆಯವರು ಪ್ರಕಟಿಸಿರುವ ವಾರ್ಷಿಕ ಸಮ್ಮೇಳನದಲ್ಲಿ ಚರ್ಚೆಯಾದ ರಾಗಲಕ್ಷಣಗಳ ಸಂಗ್ರಹ ಮೊದಲಾದ ಗ್ರಂಥಗಳಿಂದ ಆಧುನಿಕ ಲಕ್ಷಣ ಲಕ್ಷಿತ ರಾಗಕೋಶವನ್ನು ಬಯಸುವವರು ಪಡೆಯಬಹುದು. ಮೇಲೆ ಕೊಟ್ಟಿರುವ ಪಟ್ಟಿಯಲ್ಲಿ ವಿವಾದಾಸ್ಪದ ಲಕ್ಷಣಗಳಿರುವ ರಾಗಗಳು ಯಾವುದೂ ಇಲ್ಲ. ಖಾಪಿ ಎಂಬುದು ಕಾಪಿ ಎಂಬುದರ ಅಪಭ್ರಂಶವೆಂದೋ ಮೂಲರೂಪೆಂದೋ ಇಟ್ಟುಕೊಳ್ಳಬಹುದೆಂದು ತೋರುತ್ತದೆ. ಸಾಹಿತ್ಯಾರ್ಥದಲ್ಲಿರುವ ರಸಕ್ಕೆ ಸಂವಾದ ರೂಪದಲ್ಲಿರುವ ರಾಗಗಳನ್ನೇ ಕವಿಯು ಸಾಧಾರಣವಾಗಿ ಹಾಡುಗಳಿಗೆ ಹೇಳಿದ್ದಾನೆ. ಆದುದರಿಂದ ಅವನ ರಾಗಾನ್ವಯವನ್ನೇ ಇಟ್ಟುಕೊಳ್ಳಬಹುದೆಂದು ತೋರುತ್ತದೆ. ಕವಿಯೇ ಸ್ವತಃ ಗೇಯಕಾರನೂ ಆಗಿದ್ದು ಸಂಗೀತವನ್ನು ಇವುಗಳಿಗೆ ಅನ್ವಯಿಸಿದ್ದನೋ, ಆಸ್ಥಾನದಲ್ಲಿದ್ದ ಸಂಗೀತ ವಿದ್ವಾಂಸರ ಸಹಾಯವನ್ನು ಪಡೆದಿದ್ದನೋ ಎಂದು ಹೇಳಲಾಗುವುದಿಲ್ಲ. ಗೀತಗೋಪಾಲವು ಚಿಕದೇವರಾಜನ ಅಂಕಿತದಲ್ಲಿಯೇ ಇರುವುದರಿಂದಲೂ ಅವನು ಸಂಗೀತಕೋವಿದನಾಗಿದ್ದನೆಂಬುದು ಸ್ಥಿರಪಟ್ಟಿರುವುದರಿಂದಲೂ ಅವನ ಪ್ರಭಾವವು ಈ ಕೃತಿಗಳ ಸಂಗೀತಭಾಗದ ಮೇಲೆ ಬಿದ್ದಿರಬಹುದೆಂದು ಅನುಮಾನಿಸಲು ಅವಕಾಶವಿದೆ. ಚಿಕದೇವರಾಯನ ಆಸ್ಥಾನದಲ್ಲಿ ಈ ಎರಡು ಗೀತಾನಾಟಕಗಳೂ ಪ್ರದರ್ಶಿಸಲ್ಪಟ್ಟಿದ್ದರೂ ಇರಬಹುದು.

ಇದು ಹೇಗೇ ಇರಲಿ, ಇಲ್ಲಿ ಒಂದು ವಿಷಯವು ಗಮನಾರ್ಹವಾಗಿದೆ. ತಂಜಾವೂರಿನ ಸಂಗೀತ ಲಕ್ಷ್ಯದ ಇತಿಹಾಸವನ್ನು ಕ್ರಿ. ಶ. ಸುಮಾರು 1620 ರಲ್ಲಿ ಗೋವಿಂದ ದೀಕ್ಷಿತನಿಂದ ರಚಿತವಾದ ಸಂಗೀತಸುಧಾ, ಕ್ರಿ. ಶ. ಸುಮಾರು 1660 ರಲ್ಲಿ ವೆಂಕಟಮಖಿಯಿಂದ ರಚಿತವಾದ ಚತುರ್ದಂಡೀ ಪ್ರಕಾಶಿಕಾ, ಕ್ರಿ. ಶ. ಸುಮಾರು 1730 ರಲ್ಲಿ ತುಳಜನಿಂದ ರಚಿತವಾದ ಸಂಗೀತ ಸಾರಾಮೃತ, ಸುಮಾರು 1780-1800 ರಲ್ಲಿ ಮುದ್ದುವೆಂಕಟಮಖಿಯಿಂದ ರಚಿತವಾದ ರಾಗಲಕ್ಷಣ—ಇವುಗಳು ಕಾಲಾನುಕ್ರಮದಲ್ಲಿ ಚಿತ್ರಿಸುತ್ತವೆ. ವೆಂಕಟಮಖಿಯಾಗಲೀ ಕ್ಷೇತ್ರಯ್ಯನಾಗಲೀ ಸುಮಾರು 1660 ರ ವೇಳೆಗೆ ಬಳಸದಿದ್ದ ಇಷ್ಟೊಂದು ರಾಗಗಳೂ ಒಮ್ಮೆಗೇ ತುಳಜನ ಸಂಗೀತಸಾರಾಮೃತದಲ್ಲಿ ಮೊಟ್ಟಮೊದಲಬಾರಿಗೆ ಕ್ರಿ. ಶ. ಸು. 1730 ರಲ್ಲಿ ಕಂಡುಬಂದಿರುವುದು ಸಂಗೀತಸಂಶೋಧಕರಿಗೆ ಚಿಂತ್ಯವಾಗಿದೆ. ಹಾಗೆಯೇ ಮುಮ್ಮಡಿ ಚಿಕ್ಕಭೂಪಾಲನ ಅಭಿನವಭರತಸಾರಸಂಗ್ರಹ (ಕ್ರಿ. ಶ. ಸುಮಾರು 1660) ಕೆಳದಿಯ ಬಸವಪ್ಪನಾಯಕನ ಶಿವತತ್ತ್ವರತ್ನಾಕರ (ಕ್ರಿ. ಶ. ಸುಮಾರು 1720) ಇವು

Dr. Urmila Sharma Collection, Varanasi

CC0. In Public Domain, Digitizagtion by eGangotri

ಗಳಲ್ಲಿ ಈ ರಾಗಗಳ ನಾಮನಿರ್ದೇಶವಿಲ್ಲದಿದ್ದರೂ ವಿವೇಕಚಿಂತಾಮಣಿಯಲ್ಲೂ ಅದರ ಉತ್ತರೋತ್ತರ ಉಪಬೃಂಹಣಗಳಲ್ಲೂ ಈ ಮೇಲೆ ಹೇಳಿದ ಮೂವತ್ತೇಳರಲ್ಲಿ ಅನೇಕವು ದೊರೆಯುತ್ತವೆ. ಅಷ್ಟೇ ಅಲ್ಲದೆ ಕರ್ನಾಟಕದಲ್ಲಿ ಕಡೆಯ ಪಕ್ಷ 200-250 ವರ್ಷಗಳಷ್ಟು ಹಿಂದಿನ ಸಂಗೀತವಿಷಯವಾದ ಹಸ್ತಪ್ರತಿಗಳಲ್ಲಿಯೂ ಇವುಗಳಲ್ಲಿ ಅನೇಕ ರಾಗಗಳ ಲಕ್ಷಣಗಳು ದೊರೆಯುತ್ತವೆ.[19] ತುಳಜನ ಆಸ್ಥಾನದಲ್ಲಿ ಬೇರೆಬೇರೆ ಪ್ರಾಂತ್ಯಗಳ ಸಂಗೀತವಿದ್ವಾಂಸರಿದ್ದರೆಂಬುದನ್ನೂ ಅವನು ತನ್ನ ಸಂಗೀತ ಸಾರಾಮೃತದಲ್ಲಿ ವ್ಯಾಸರಾಯ, ಪುರಂದರ ದಾಸ ಮೊದಲಾದವರ ಕನ್ನಡದ ಹಾಡುಗಳನ್ನು ಪುನಃಪುನಃ ಉದಾಹರಿಸುತ್ತಾನೆಂಬುದನ್ನೂ ಸ್ಮರಿಸಿದರೆ ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಕನ್ನಡದೇಶದಿಂದ ಹಲವು ರಾಗಗಳು ತಂಜಾವೂರಿಗೆ ಹೋಗಿ, ಹರಡಿ, ನಿಂತವು ಎಂಬುದು ಅಸಂಭವವೇನಲ್ಲ. ಆದರೆ ಸಂಪೂರ್ಣವಾಗಿ ದೇಶ್ಯರಾಗಗಳಾದ ಹುಶಾನಿ (ಹುಸೇನಿ) ಮತ್ತು ಖಾಪಿ (ಕಾಪಿ)ಗಳು ಮಾತ್ರ ನಾನು ನೋಡಿರುವ ಈ ಕಾಲದ ಆಕರಗಳಲ್ಲಿ ದೊರೆಯುವುದಿಲ್ಲ. ಚಿಕದೇವರಾಯನು ಹುಸೇನ್‌ಖಾನ್ ಮತ್ತು ಕುತುಬ್‌ಶಾಹ ಮೊದಲಾದ ಮುಸಲ್ಮಾನ ದೊರೆಗಳನ್ನು ಹೋರಾಡಿ ಗೆದ್ದು ಅವರ ಐಶ್ವರ್ಯಾದಿಗಳನ್ನು ವಶಪಡಿಸಿಕೊಂಡವನಷ್ಟೆ. ಅವನಿಗೂ ದಿಲ್ಲಿಯ ಮೊಗಲಚಕ್ರವರ್ತಿಗಳಿಗೂ ಸ್ನೇಹಸಂಬಂಧವಿತ್ತೆಂದೂ ಚರಿತ್ರೆಯು ತಿಳಿಸುತ್ತದೆ. ಆದುದರಿಂದ ಈ ಕಾಲದಲ್ಲಿ ಆಗಿರಬಹುದಾದ ಸಾಂಸ್ಕೃತಿಕ ವಿನಿಮಯದಿಂದ ಈ ರಾಗಗಳು ಕರ್ನಾಟಕದಲ್ಲಿ ರೂಢಿಗೆ ಬಂದಿರಬಹುದು. ಇದಲ್ಲದೆ ಈ ರಾಗಗಳನ್ನು ಮೊದಲು ಬಳಸಿರುವುದು ಹದಿನೆಂಟು—ಹತ್ತೊಂಬತ್ತನೆಯ ಶತಮಾನಗಳಲ್ಲಿ ತ್ಯಾಗರಾಜನೇ.

ಈ ಎಲ್ಲಾ ವಾದವು ಕವಿಯೇ ಅಥವಾ ಅವನ ಕಾಲದಲ್ಲಿಯೇ, ಈ ರಾಗಗಳನ್ನು ಹಾಡುಗಳಿಗೆ ಅನ್ವಯಿಸಿದ್ದರೆ ಸಲ್ಲುತ್ತದೆ. ಇದು ಹೀಗಾಗಿರುವುದರ ಸಂಭವವೇ ಹೆಚ್ಚು. ಏಕೆಂದರೆ ಹಾಡುಗಳಿಗೆ ಮೂಲವಲ್ಲದ ಬೇರೆ ಬೇರೆ ರಾಗಗಳನ್ನು ಅನ್ವಯಿಸಬೇಕಾದರೆ ಅವುಗಳಲ್ಲಿ ಕಾಲದೇಶಗಳನ್ನು ಮೀರಿದ ಮೌಲ್ಯ, ವರ್ಣನೆ ಮುಂತಾದವು ಗಳಿರಬೇಕು. ಆಗ ಆಯಾ ಕಾಲದ ಅಭಿರುಚಿಗೆ ತಕ್ಕಂತೆ ರಾಗಗಳ ಬಳಕೆ ವ್ಯತ್ಯಾಸವಾಗುತ್ತದೆ ಅಥವಾ ರಾಗಗಳ ಸ್ವರೂಪಗಳಾದರೂ ಮಾರ್ಪಡುತ್ತ ಬರುತ್ತವೆ. ಎಂದರೆ ಪ್ರಯೋಗ ಬಾಹುಳ್ಯದಿಂದ ಇದು ಸಾಧ್ಯವೆಂದಾಯಿತು. ಚಿಕದೇವರಾಯನನ್ನೇ ನೇರವಾಗಿಯೂ ಶ್ಲೇಷೆಯಲ್ಲಿಯೂ ನಾಯಕನನ್ನಾಗಿ ಉಳ್ಳ ಈ ಎರಡು ಕಾವ್ಯಗಳಿಗೂ ಗೀತರೂಪಕ ಅಥವಾ ನೃತ್ತರೂಪಕಗಳಿಗೂ ಮುಂದೆ ಅಷ್ಟೇನೂ ಪ್ರಯೋಗವು ದೊರೆತಂತೆ ಕಾಣು

Dr. Urmila Sharma Collection, Varanasi

CC0. In Public Domain, Digitizagtion by eGangotri

ವುದಿಲ್ಲ. ಇವುಗಳನ್ನು ಒಳಗೊಂಡಿರುವ ಹಸ್ತಪ್ರತಿಗಳು ಅಪರೂಪವಾಗಿರುವುದು, ಭಿನ್ನ ಹಸ್ತಪ್ರತಿಗಳಾದರೂ ಒಂದೇ ರಾಗ, ತಾಳ ಮುಂತಾದವುಗಳ ವಿನಿಯೋಗವನ್ನು ಪಡೆದುಕೊಂಡಿರುವುದು ಇದಕ್ಕೆ ಸಾಕ್ಷಿ. ಆದುದರಿಂದ ರಚನಾಕಾಲದಲ್ಲಿದ್ದ ರಾಗತಾಳಗಳ ಅನ್ವಯವೇ ಪ್ರಕೃತದ ಹಸ್ತಪ್ರತಿಗಳಲ್ಲಿಯೂ ಉಳಿದು ಬಂದಿರಬಹುದೆಂದು ಊಹಿಸಬಹುದು.

ತಾಳಗಳು

ಚಿಕದೇವರಾಯ ಸಪ್ತಪದಿ ಮತ್ತು ಗೀತಗೋಪಾಲದ ಕರ್ತೃವು ಅಲ್ಲಿನ ಹಾಡುಗಳಿಗೆ ಕೇವಲ ಸುಳಾದಿ ತಾಳಗಳನ್ನು ಅಳವಡಿಸಿದ್ದಾನೆಂಬುದನ್ನು ಮೊದಲು ಗಮನಿಸಬೇಕು. ಸಂಗೀತ ಪ್ರಪಂಚದಲ್ಲಿ ರೂಢವಾಗಿದ್ದ ನೂರಾರು ದೇಶೀ ತಾಳಗಳನ್ನು ತಪ್ಪಿಸಿ ಅವುಗಳ ಸ್ಥಳದಲ್ಲಿ ಸುಲಭವೂ, ಸರಳವೂ, ಸರ್ವಗ್ರಾಹ್ಯವೂ ಆಗಿರುವ ಏಳು ತಾಳಗಳನ್ನು ಕರ್ಣಾಟಕದ ಹರಿದಾಸರು ಹೇಗೆ ಸುಭದ್ರವಾಗಿ ನಿಲ್ಲಿಸಿದರು, ಅಂದಿನಿಂದ ಇಂದಿನವರೆಗೆ ಕರ್ಣಾಟಕ ಸಂಗೀತ ಲಕ್ಷ್ಯವು ಇವುಗಳನ್ನು ಮಾತ್ರ ಹೇಗೆ ಅವಲಂಬಿಸಿದೆ ಎಂಬುದನ್ನು ಬೇರೆಡೆಯಲ್ಲಿ ಸವಿಸ್ತಾರವಾಗಿ ಹೇಳಿದ್ದೇನೆ.[೬೦]

ಚಿಕದೇವರಾಯ ಸಪ್ತಪದಿಯಲ್ಲಿ ವಾಗ್ಗೇಯಕಾರನು ಕೇವಲ ಆದಿತಾಳ, ಝಂಪೆತಾಳ ಮತ್ತು ಅಟ್ಟತಾಳಗಳನ್ನು ಗೀತಗೋಪಾಲದಲ್ಲಿ ಧ್ರುವ, ರೂಪಕ, ಝಂಪೆ, ತ್ರಿಪುಟ, ಅಟ್ಟ ಮತ್ತು ಆದಿ ತಾಳಗಳನ್ನು ಬಳಸಿದ್ದಾನೆ. ಜಾತಿಗಳನ್ನು ಹೆಸರಿಸದಿರುವುದರಿಂದ ಲಕ್ಷ್ಯದಲ್ಲಿ ವಿವಕ್ಷಿತವಾದಂತೆ ಇಲ್ಲಿ ಧ್ರುವ ಮತ್ತು ರೂಪಕತಾಳಗಳನ್ನು ಚತುರಶ್ರಜಾತಿಯವುಗಳೆಂದೂ ತ್ರಿಪುಟತಾಳವನ್ನು ತ್ರಿಶ್ರಜಾತಿಯದೆಂದೂ ಅಟ್ಟತಾಳವನ್ನು ಖಂಡಜಾತಿಯದೆಂದೂ ತಿಳಿಯಬೇಕು. ಆದಿತಾಳವಂತೂ ಚತುರಶ್ರಜಾತಿಯ ತ್ರಿಪುಟ ತಾಳವೆಂದು ಪ್ರಸಿದ್ಧವಾಗಿಯೇ ಇದೆ. ಇವುಗಳಲ್ಲಿ ಏಕತಾಳ ಮತ್ತು ಮಠ್ಯತಾಳಗಳನ್ನು ಪೂರ್ತಿಯಾಗಿ ಕೈಬಿಟ್ಟಿರುವುದು ಕಾಣುತ್ತದೆ. ಇದಕ್ಕೆ ಕಾರಣವೇನೋ ತಿಳಿಯದು. ವಾಗ್ಗೇಯಕಾರನೇ ಇವುಗಳನ್ನು ಬಿಟ್ಟಿದ್ದಾನೆಯೇ ಅಥವಾ ಲಿಪಿಕಾರರ ದೋಷದಿಂದ, ಮಾತೃಕೆಗಳ ದೋಷದಿಂದ ಹೀಗಾಗಿರಬಹುದೇ ಎಂಬುದು ಈ ಎರಡೂ ಗ್ರಂಥಗಳ ಹೊಸ ಹಸ್ತಪ್ರತಿಗಳು ಬೆಳಕಿಗೆ ಬಂದಾಗಲೇ ತಿಳಿಯಬೇಕು. ಆದಿತಾಳ ಎಂಬ ಹೆಸರು ಇಲ್ಲಿ ಚಿಂತ್ಯವಾಗಿದೆ. ಏಕೆಂದರೆ ಕ್ರಿ. ಶ. ಸುಮಾರು 1660 ರಲ್ಲಿ ರಚಿತವಾದ ಚತುರ್ದಂಡೀಪ್ರಕಾಶಿಕೆಯಲ್ಲಿ ಇದನ್ನು ಝೊಂಬಟತಾಲವೆಂದೇ ಹೇಳಿದೆ. ಇದಕ್ಕೆ ಆದಿ

Dr. Urmila Sharma Collection, Varanasi

CC0. In Public Domain, Digitizagtion by eGangotri

ತಾಳವೆಂದು ಹೆಸರು ಮೊದಲು ಯಾವಾಗ ಬಂದಿತೋ ಹೇಳುವುದು ಕಷ್ಟ. ವಾಗ್ಗೇಯಕಾರನೇ ಈ ಹೆಸರನ್ನು ಬಳಸಿದ್ದರೆ ಆದಿತಾಳವೆಂಬ ಹೆಸರು ಮೊದಲು ಈ ಕಾವ್ಯಗಳಲ್ಲಿಯೇ ಕಂಡುಬರುತ್ತದೆ ಎನ್ನಬೇಕಾಗುತ್ತದೆ. ಸಂಗೀತಸಾರಾಮೃತದ ಉಪಲಬ್ಧ ಆಕರಗಳಲ್ಲಿ ಸುಳಾದಿತಾಳಗಳ ಹೆಸರುಗಳು ಕಂಡು ಬರುವುದಿಲ್ಲ.

ಈ ಎರಡು ಕಾವ್ಯಗಳಲ್ಲಿಯೂ ತಾಳವಿನಿಯೋಗದ ವಿಷಯದಲ್ಲಿ ಇನ್ನೂ ಒಂದು ಸಂಗತಿಯನ್ನು ಗಮನಿಸಬಹುದು. ಎರಡರಲ್ಲಿಯೂ ಅನೇಕ ಹಾಡುಗಳಿಗೆ ತಾಳವನ್ನೇ ಹೇಳಿಲ್ಲವೆಂದು ತೋರುತ್ತದೆ. ಇದನ್ನು ಹಸ್ತಪ್ರತಿಯ ದೋಷವೆಂದೋ ಹಿಂದಿನ ಹಾಡಿಗೆ ಹೇಳಿದ ತಾಳವನ್ನೇ ಇಲ್ಲಿಯೂ ಅನ್ವಯಿಸಿಕೊಳ್ಳಬೇಕೆಂದೋ ಅರ್ಥಮಾಡಬಹುದು. ಎರಡನೆಯದೇ ಹೆಚ್ಚು ಸೂಕ್ತವಾಗಿರುವಂತೆ ಕಾಣುತ್ತದೆ. ಏಕೆಂದರೆ ಗೀತಗೋಪಾಲದ ಪೂರ್ವಭಾಗದಲ್ಲಿ 2,3,4,5 ಮತ್ತು 6—ಈ ಐದು ಸಪ್ತಪದಿಗಳಲ್ಲಿಯೂ ಮೊದಲು ಮಾತ್ರ ತಾಳವನ್ನು ಹೇಳಿದ್ದಾನೆ. ಆರನೆಯದಕ್ಕೆ ಇದನ್ನೂ ಹೇಳಿಲ್ಲ; ಆದರೆ ಕೊನೆಯಲ್ಲಿ ಇಡೀ ಸಪ್ತಪದಿಯನ್ನೇ ರೂಪಕತಾಳ ಸಪ್ತಪದಿಯೆಂದು ಕರೆದಿರುವುದರಿಂದ ಅದರಲ್ಲಿನ ಪ್ರತಿಯೊಂದು ಹಾಡೂ ರೂಪಕತಾಳದಲ್ಲಿದೆಯೆಂದು ತಿಳಿಯಬೇಕು. ಹೀಗೆ ಇಡೀ ವಿಭಾಗವೊಂದನ್ನು ಒಂದೇ ತಾಳದಲ್ಲಿ ಹೇಳುವ ಪದ್ಧತಿಯು ನಮ್ಮ ಸಂಗೀತದಲ್ಲೆಲ್ಲಾ ಗೀತಗೋಪಾಲವೊಂದರಲ್ಲಿ ಮಾತ್ರ ಕಂಡುಬರುತ್ತದೆ. ಪೂರ್ವಭಾಗದ ಮೊದಲನೆಯ ಮತ್ತು ಕೊನೆಯ ಸಪ್ತಪದಿಗಳಲ್ಲಿಯೂ ಉತ್ತರಭಾಗದ ಎಲ್ಲಾ ಸಪ್ತಪದಿಗಳಲ್ಲಿಯೂ ವಾಗ್ಗೇಯಕಾರನು ಹಾಡುಗಳಿಗೆ ಬೇರೆ ಬೇರೆ ತಾಳಗಳನ್ನು ಹೇಳಿರುವುದು ಕಂಡು ಬರುತ್ತದೆ. ಇದೇ ಪದ್ಧತಿಯನ್ನು ಅವನು ಚಿಕ್ಕದೇವರಾಯಸಪ್ತಪದಿಯಲ್ಲಿ ಬಳಸಿದ್ದಾನೆ. ಆದರೆ ಇಲ್ಲಿ ತಾಳ ವೈವಿಧ್ಯವು ತೀರಾ ಕಡಿಮೆಯಾಗಿದೆ. ಸಾಧಾರಣವಾಗಿ ಪಂಙ್ತಿಯ ವಿಸ್ತಾರಕ್ಕೆ ಮತ್ತು ಹಾಡು ಒಳಗೊಂಡಿರುವ ಸಾಹಿತ್ಯಾರ್ಥದಲ್ಲಿನ ರಸಕ್ಕೆ ಅನುಗುಣವಾಗಿಯೇ ತಾಳಗಳನ್ನು ಹೊಂದಿಸಿದೆ.

ನಾರದ ; ನೃತ್ಯ

ಕಡೆಯದಾಗಿ ಇನ್ನೆರಡು ವಿಷಯಗಳನ್ನು ಪ್ರಾಸಂಗಿಕವಾಗಿ ಇಲ್ಲಿ ಉಲ್ಲೇಖಿಸಬಹುದು. ಚಿಕದೇವರಾಯ ಸಪ್ತಪದಿಯ ಮೊಟ್ಟಮೊದಲನೆಯ, ಬಹುಶಃ ನಾಂದೀಸ್ವರೂಪದ, ಮಂಗಳದ ಹಾಡಿನ ಮೂರನೆಯ ನುಡಿಯಲ್ಲಿ

Dr. Urmila Sharma Collection, Varanasi

CC0. In Public Domain, Digitizagtion by eGangotri

ಆ ನಾರದಾದ್ಯರಂತಾನಂದವಡೆಯಿಸಿ
ಈ ನೆಲದೊಳಗಿರ್ಪರೆಲ್ಲ(ರ)ನು
ಜೇನ ಸವಿಯ ಪೋಲ್ವತಾನದೊಳ್ ತಣಿಯಿಪ
ಗಾನಾಮೃತಾಬ್ಧಿಗೆ ಗರುಡಧ್ವಜನಿಗೆ (ಮಂಗಳಂ)[61]

ಎಂದಿದೆ. ನಾರದನನ್ನು ಕವಿಯು ಇಲ್ಲಿ ಸ್ಮರಿಸುವುದು ಶ್ರೀಮನ್ನಾರಾಯಣನಿಗೆ ಅತ್ಯಂತ ಸಮೀಪವಾದ ಋಷಿಯೆಂಬ ಕಾರಣದಿಂದ ಇದ್ದರೂ ಇರಬಹುದು. ಅವನನ್ನು ಗಾನವನ್ನು ಕುರಿತು ಹೇಳುವ ನುಡಿಯಲ್ಲಿಯೇ ಸ್ಮರಿಸುವುದಕ್ಕೆ ನಾರದನು ಯಾವಾಗಲೂ ಭಗವನ್ನಾಮ ಸಂಕೀರ್ತನವನ್ನು ಗಾನದಿಂದಲೇ ನಡೆಸುತ್ತಾನೆಂಬ ಪುರಾಣೋಕ್ತಿಯು ಆಧಾರವಾಗಿರಬಹುದು. ಆದರೆ ಸಂಗೀತ ಶಾಸ್ತ್ರದಲ್ಲಿ ನಾರದನನ್ನು ಸಂಗೀತ ಸಂದರ್ಭದಲ್ಲಿ ಮೊದಲು ಸ್ಮರಿಸಲು ವಿಶೇಷ ಕಾರಣವುಂಟು. ಬ್ರಹ್ಮನಿಂದ ನಿರ್ಮಿತವಾದ ನಾಟ್ಯವೇದವನ್ನು ಭರತಮುನಿಯು ಭೂಲೋಕಕ್ಕೆ ತಂದು ಹರಡಿದನೆಂದೂ ಗಾಂಧರ್ವವೇದವನ್ನು ನಾರದನು ತಂದು ನೆಲೆಯಾಗಿ ನಿಲ್ಲಿಸಿದನೆಂದೂ ನಮ್ಮ ಹಿರಿಯರು ನಂಬುತ್ತಾರೆ. ಈ ಮಾತನ್ನು ಭರತಮುನಿಯೇ ಹೇಳುತ್ತಾನೆ.

ಗಾಂಧರ್ವಂ ಚೈವ ವಾದ್ಯಂ ಚ ಸ್ವಾತಿನಾ ನಾರದೇನ ಚ |
ವಿಸ್ತಾರ ಗುಣಸಂಪನ್ನ ಮುಕ್ತಂ ಲಕ್ಷಣಕರ್ಮತಃ ||[62]

ಸಂಸ್ಕೃತ ಸಾಹಿತ್ಯದಲ್ಲಿಯೂ ಕನ್ನಡ ಸಾಹಿತ್ಯದಲ್ಲಿಯೂ ಈ ಮಾತು ಪದೇ ಪದೇ ಬರುತ್ತದೆ. ಇದನ್ನು ವಿವಕ್ಷಿಸಿ ನಮ್ಮ ಕವಿಯು ಮೇಲಿನ ನುಡಿಯನ್ನು ಬರೆದಿದ್ದರೂ ಇರಬಹುದು.

ಎರಡನೆಯದಾಗಿ ಚಿಕದೇವರಾಯ ಸಪ್ತಪದಿಯ 'ಚಿಕದೇವಮಹಾರಾಯನ ವೃತ್ತಾಂತ ಸಪ್ತಪದಿ'ಯ ಮೊದಲನೆಯ ಪಂಚಪದಿಯಲ್ಲಿ ಕಾಂತೆಯೊಬ್ಬಳ ನಾಟ್ಯವನ್ನು ವರ್ಣಿಸಿದೆ.[63] ಇದು ಬಳಸುವ ಪಾರಿಭಾಷಿಕ ಶಬ್ದಗಳೂ ನಾಟ್ಯಕ್ರಮವೂ ಕನ್ನಡ ನಾಡಿನಲ್ಲಿ ಭರತನಾಟ್ಯದ ಇತಿಹಾಸದ ಮೇಲೆ ಸ್ವಲ್ಪ ಬೆಳಕು ತೋರುತ್ತವೆ. ನಮ್ಮಲ್ಲಿ ಭರತನಾಟ್ಯದ ಕಚೇರಿಯ ಪದ್ಧತಿ, ಪರಂಪರೆ, ಪರಿಭಾಷೆ ಇವುಗಳನ್ನು ಬೇರೆಡೆಯಲ್ಲಿ ವಿಸ್ತಾರವಾಗಿ ವರ್ಣಿಸಿದ್ದೇನೆ.[64] ಆದುದರಿಂದ ಇಲ್ಲಿ ಅದನ್ನೆಲ್ಲ ಪುನಃ ಹೇಳುವುದಿಲ್ಲ. ಪ್ರೇಕ್ಷಕರ ಮುಂದೆ ಇರುವ ತೆಳುವಾದ ತೆರೆಯ ಹಿಂದೆ ಪಾತ್ರವು (ಎಂದರೆ ನರ್ತಕಿಯು) ನಿಲ್ಲುತ್ತಿದ್ದಳೆಂದೂ ನಾಟ್ಯಾರಂಭಕಾಲದಲ್ಲಿ ಅದನ್ನು ದಾಟಿ ಬರುತ್ತಿದ್ದಳೆಂದೂ ಇಲ್ಲಿ ತಿಳಿಯುತ್ತದೆ.

Dr. Urmila Sharma Collection, Varanasi

CC0. In Public Domain, Digitizagtion by eGangotri

(ಭರತನಾಟ್ಯದ ಕಲಾವಿದೆಯು) ತಲೆಯ ಮೇಲೆ ಚಂದ್ರಗಾವಿ ಬಣ್ಣದ ಮುಸಕನ್ನು ಎಳೆದುಕೊಳ್ಳುತ್ತಿದ್ದಳೆಂಬುದನ್ನೂ ಇಲ್ಲಿ ಗಮನಿಸಬಹುದು. ಹಾಗೆಯೇ ಪಾತ್ರವು ಜಡೆಯನ್ನು (ತುರುಬನ್ನಲ್ಲದೆ) ಹೆಣೆದುಕೊಳ್ಳುತ್ತಿದ್ದಳು, ನಡುಬಳಸಿಯೊಂದನ್ನು—ಸೊಂಟದ ಪಟ್ಟಿಯೊಂದನ್ನು ಕಟ್ಟಿಕೊಳ್ಳುತ್ತಿದ್ದಳು, ಕಿವಿಯಲ್ಲಿ ಓಲೆಯನ್ನಿಡುತ್ತಿದ್ದಳು, ತನ್ನ ಹಾಡುಗಳಲ್ಲಿನ ಮಾತುಗಳನ್ನು ತಾನೇ ಉಸುರಿಕೊಳ್ಳುತ್ತಿದ್ದಳು, ಕಾಲ್ಬೆರಳುಗಳಿಗೆ ಅಂದುಗೆಗಳನ್ನು ಇಟ್ಟುಕೊಳ್ಳುತ್ತಿದ್ದಳು, ತಾಳಗಳ ಪಕ್ಕವಾದ್ಯಕ್ಕೆ ತಕ್ಕಂತೆ ಕುಣಿಯುತ್ತಿದ್ದಳು, ಎಂದೂ ಇಲ್ಲಿನ ವರ್ಣನೆಯಿಂದ ತಿಳಿದುಬರುತ್ತದೆ. ಇಲ್ಲಿ ಬಳಸಿರುವ ಒಯ್ಯಾರ, ತಾಣಕ, ಲಂಘನೆ, ಲಾಗು, ಬಿಡುತೆ ಎಂಬುವುಗಳು ಪಾರಿಭಾಷಿಕ ಶಬ್ದಗಳು. ಒಯ್ಯಾರವೆಂದರೆ ಒಂದು ಬಗೆಯ ದೇಶೀ ಲಾಸ್ಯಾಂಗ. ತಾಣಕವೆಂಬುದು ಸಂಸ್ಕೃತದ ಸ್ಥಾನಕದ ತದ್ಭವ. ಸ್ಥಾನಕವೆಂದರೆ ನಿಲ್ಲುವ ಭಂಗಿ. ಲಂಘನವೆಂದರೆ ನಾಟ್ಯಕರ್ಮದಲ್ಲಿ ವಿವಿಧವಾಗಿ ಎಗರಿ ನಿಲ್ಲುವ ಬಗೆ. ಇದಕ್ಕೆ ಶಾಸ್ತ್ರದಲ್ಲಿ ಉತ್ಪ್ಲುತೀಕರಣವೆಂದು ಹೆಸರು. ಲಾಗವೆನ್ನುವುದು ಒಂದು ಬಗೆಯ ಅಡವು ವಿಶೇಷ. ಬಿಡುತೆಯೆಂದರೆ ನಾಟ್ಯದಲ್ಲಿ ನ್ಯಾಸಕರ್ಮ, ಎಂದರೆ ಒಂದು ತೀರ್ಮಾನದೊಡನೆ ಆಯಾ ನಾಟ್ಯಭಾಗವನ್ನು ಮುಗಿಸುವುದು ಎಂದು ಇಲ್ಲಿ ಅರ್ಥಮಾಡಬೇಕು. ಭರತಾದಿಗಳು ಹೇಳುವಂತೆ ಪಾತ್ರವು ವೈಷ್ಣವಸ್ಥಾನಕದಲ್ಲಿ ಮೊದಲು ನಿಲುಗಡೆ ತೋರಿ ಆಮೇಲೆ ನಾಟ್ಯವನ್ನು ಪ್ರಾರಂಭಿಸಿರುವುದು ಈ ವರ್ಣನೆಯಿಂದ ಸ್ಪಷ್ಟವಾಗುತ್ತದೆ.

ಉಪಸಂಹಾರ

ಒಟ್ಟಿನಲ್ಲಿ ಗೀತಗೋಪಾಲ ಮತ್ತು ಚಿಕದೇವರಾಯ ಸಪ್ತಪದಿಗಳೆರಡೂ ನಮ್ಮ ಸಂಗೀತದ ಇತಿಹಾಸದ ಮೇಲೆ ವಿಶೇಷವಾದ ಬೆಳಕು ಚೆಲ್ಲುತ್ತವೆಂಬುದು ನಿಸ್ಸಂಶಯವಾದುದು. ಹದಿನಾರು-ಹದಿನೇಳನೆಯ ಶತಮಾನಗಳು ನಮ್ಮ ಸಂಗೀತದ ಲಕ್ಷ್ಯಲಕ್ಷಣಗಳ ಚರಿತ್ರೆಯಲ್ಲಿ ಒಂದು ಪರ್ವಕಾಲ. ಹಳೆಯುದರ ಗರ್ಭದಿಂದ ಹೊಸದು ಹೊರಡುತ್ತಿದ್ದ ಕಾಲವದು. ನಮ್ಮ ಸಂಗೀತವು ಈಗ ಹೀಗಿರುವುದಕ್ಕೆ ಕಾರಣಗಳನ್ನು ಇಲ್ಲಿ ಹುಡುಕಬೇಕು. ನಮ್ಮ ಸಂಸ್ಕೃತಿಯ ಚರಿತ್ರಕಾರರಿಗೂ ಈ ಕಾಲವು ಮುಖ್ಯವಾದುದೇ. ಕರ್ಣಾಟಕ ಸಾಮ್ರಾಜ್ಯ ಸೂರ್ಯನು ರಕ್ಕಸತಂಗಡಿಯಲ್ಲಿ ಮುಳುಗಿ ಪುನಃ ಮೈಸೂರು ಶ್ರೀರಂಗಪಟ್ಟಣಗಳಲ್ಲಿ ಉದಯಿಸಿದುದು ಈಗಲೇ. ನಮ್ಮ ನುಡಿ,

Dr. Urmila Sharma Collection, Varanasi

CC0. In Public Domain, Digitizagtion by eGangotri

ನಮ್ಮ ಕಲೆ ಸರ್ವಾಂಗಸುಂದರವಾಗಲು ಮೈಸೂರು ಒಡೆಯರ ವಂಶವು ಅತ್ಯಂತ ಶ್ರಮಿಸಿದೆ. ಚಿಕದೇವರಾಜನ ಆಳ್ವಿಕೆಯು ಈ ದೃಷ್ಟಿಯಿಂದ ನಮ್ಮ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಅಧ್ಯಾಯ. ಈ ಕಾಲದ ಬಗ್ಗೆ ಅಭ್ಯಾಸ, ಸಂಶೋಧನೆಗಳು ಕರ್ತವ್ಯವೂ ಹೌದು, ಅಗತ್ಯವೂ ಹೌದು.

ಅಡಿಟಿಪ್ಪಣಿಗಳು

1 ಗೋವಿಂದ ವೈದ್ಯ, ಕಂಠೀರವನರಸರಾಜ ವಿಜಯಂ, XXV, 86.
2 ಅದೇ ಗ್ರಂಥ, XXV ; 87.
3 ಅದೇ ಗ್ರಂಥ, VI, 48, 163, 176.
4 ಅದೇ ಗ್ರಂಥ, VIII, 19, 33-34, 55-75 ; XXI, 109 113 ಮತ್ತು ಮುಂದಕ್ಕೆ.
5 ಎಪಿಗ್ರಾಫಿಯಾ ಕರ್ನಾಟಿಕ XIV, ನಂಜನಗೂಡು 296, ಪು. 153.
6 ತಿರುಮಲಾರ್ಯ, ಚಿಕದೇವರಾಜ ವಿಜಯ,
7 Sathyanarayana, R., *Sulādis and Ugā-bhogas of Karnataka Music* pp.11-12.
8 ಭರತಮುನಿ, ನಾಟ್ಯಶಾಸ್ತ್ರ (ಬರೋಡಾ ಮುದ್ರಣ), XXVIII, 11, ಪು. .7
9 ಅದೇ ಗ್ರಂಥ, XXVIII, 17, ಪು. 9.
10 Sathyanarayana, R., *op. cit.*, pp. 68-74.
11 ಕ್ಷೇತ್ರಯ್ಯ, ದೇವಗಾಂಧಾರಿ ರಾಗದ ವೇಡುಕಕೋ, ನಡಚುಕೊನ್ನ ವಿಟರಾಯುಡೇ ಎಂಬ ಪದ.
12 ನರಸಿಂಹಾಚಾರ್, ಆರ್., ಮತ್ತು ನರಸಿಂಹಾಚಾರ್, ಎಸ್. ಜಿ., ಕರ್ನಾಟಕ ಕವಿ ಚರಿತೆ, ಭಾಗ, 1, ಅನುಬಂಧ, ಪು. 2-35.
13 ಅದೇ ಗ್ರಂಥ, ಪು. 14, 18.
14 ಅದೇ ಗ್ರಂಥ, ಪು. 26, 30.
15 ಶಾರ್ಙ್ಗದೇವ, ಸಂಗೀತ ರತ್ನಾಕರ, IV, 16, ಪು. 207.
16 ಪಾರ್ಶ್ವದೇವ, ಸಂಗೀತ ಸಮಯಸಾರ, IV, 17-18, ಪು. 25.
17 ಗೋವಿಂದ ದೀಕ್ಷಿತ, ಸಂಗೀತ ಸುಧಾ, III, 52-56, ಪು. 281.
18 ಗೀತಗೋಪಾಲ, ಪು. 18, 50.
19 ಅದೇ ಗ್ರಂಥ, ಪು. 54.
20 ಅದೇ ಗ್ರಂಥ, ಪು. 3, 7, 11, 13, 34, 42, 43, 47, 48, 49, 51, 58, 60, 62.
21 ಅದೇ ಗ್ರಂಥ, ಪು. 63.
22 ಚಿಕದೇವರಾಯ ಸಪ್ತಪದಿ, ಸಂ. ಎಚ್. ಎಸ್. ಹರಿಶಂಕರ್, ಪು. 17.
23 ಅದೇ ಗ್ರಂಥ, ಪು. 50.
24 ಅದೇ ಗ್ರಂಥ, ಪು. 20, 34, 36.
25 ಅದೇ ಗ್ರಂಥ, ಪು. 18.

Dr. Urmila Sharma Collection, Varanasi

CC0. In Public Domain, Digitizagtion by eGangotri

[26] ಗೀತಗೋಪಾಲ, ಪು. 4, 18, 25, 27, ?8, 36.
[27] ಅದೇ ಗ್ರಂಥ, 18, 13, 26, 91, 33.
[28] ಅದೇ ಗ್ರಂಥ, ಪು. 31.
[29] ಚಿಕದೇವರಾಯ ಸಪ್ತಪದಿ, ಪು. 18, 20, 22, 26.
[30] ಅದೇ ಗ್ರಂಥ, ಪು. 23.
[31] ಅದೇ ಗ್ರಂಥ, ಪು. 23, 51.
[32] ಗೀತಗೋಪಾಲ, ಪು. 19, 25, 31, 43, 44.
[33] ಅದೇ ಗ್ರಂಥ ಪು. 18.
[34] ಅದೇ ಗ್ರಂಥ, ಪು. 58.
[35] ಚಿಕದೇವರಾಯ ಸಪ್ತಪದಿ, ಪು. 26.
[36] ಅದೇ ಗ್ರಂಥ, ಪು. 28.
[37] ಅದೇ ಗ್ರಂಥ, ಪು. 29.
[38] ಅದೇ ಗ್ರಂಥ, ಪು. 31.
[39] ಅದೇ ಗ್ರಂಥ, ಪು. 54.
[40] ಅದೇ ಗ್ರಂಥ, ಪು. 52.
[41] ಗೀತಗೋಪಾಲ, ಪು. 26.
[42] ಅದೇ ಗ್ರಂಥ, ಪು. 36.
[43] ಅದೇ ಗ್ರಂಥ, ಪು. 55, 62.
[44] ಧನಂಜಯ, ದಶರೂಪಕ, II, 30-33.
[45] ವಿದ್ಯಾನಾಥ, ಪ್ರತಾಪರುದ್ರಯಶೋಭೂಷಣ, IV, 65, 66, 68.
[46] ಹೋಲಿಸಿ: ಧನಂಜಯ, ಉಕ್ತಗ್ರಂಥ, II, 367-42.
[47] ವಿದ್ಯಾನಾಥ, ಉ. ಗ್ರಂ., IV, 57-67.
[48] ಇದನ್ನು ವೆಂಕಟಮಖಿಯ ಚತುರ್ದಂಡೀ ಪ್ರಕಾಶಿಕೆಯ ಅನುಬಂಧವಾಗಿ ಕೊಟ್ಟಿದೆ.
[49] ಉದಾಹರಣೆಗೆ, ಮೈಸೂರಿನ ಶ್ರೀ ವರಲಕ್ಷ್ಮೀ ಅಕಾಡಮಿಯ ಗ್ರಂಥ ಭಂಡಾರದಲ್ಲಿರುವ ಬೆಂಗೇರಿ ಹಸ್ತಪ್ರತಿ, ಮತ್ತು ಮೈಸೂರು ಪ್ರಾಚ್ಯಸಂಶೋಧನಾ ಸಂಸ್ಥೆಯ K 570 ಎಂಬ ಹಸ್ತಪ್ರತಿ ಇತ್ಯಾದಿ.
[50] ರಾ. ಸತ್ಯನಾರಾಯಣ, ಉ. ಗ್ರಂ., ಪು. 45-62.
[51] ಚಿಕದೇವರಾಯ ಸಪ್ತಪದಿ, ಪು. 15.
[52] ಭರತಮುನಿ, ಉ. ಗ್ರಂ., XXXIV, 3, ಪು. 464.
[53] ಚಿಕದೇವರಾಯ ಸಪ್ತಪದಿ, ಪು. 34, 35.

[54] Sathyanarayana, R., (*a*) *Bharatanātya—A Critical Study* (under print). (*b*) *The Soul of Indian Dance* (under print). (*c*) *Dance Traditions of Ancient Karnataka*, Souvenior of the XII South Indian Natya Kala Conference, Madras pp. 17-27 1958,

Dr. Urmila Sharma Collection, Varanasi

CC0. In Public Domain, Digitizagtion by eGangotri

ಗ್ರಂಥಋಣ

ಭರತ ಕಲ್ಪಲತಾಮಂಜರಿ—ಅಂಕಾಜಿಶಾಸ್ತ್ರಿ ಬಿ. ಮತ್ತು ಸುಬ್ಬಶಾಸ್ತ್ರಿ ಪಿ., ಬೆಂಗಳೂರು, 1887.

ರಾಗಲಕ್ಷಣ—ಅಜ್ಞಾತ ಕರ್ತೃ, ಭಾಲಚಂದ್ರ ಸೀತಾರಾಮ ಸೂಕ್ಥಂಕರ್ (ಸಂ), ಆರ್ಯಭೂಷಣ ಮುದ್ರಣಾಲಯ, ಪೂನಾ, 1914.

ಸಂಗೀತ ರತ್ನಾಕರ (ಕನ್ನಡ)—ಅಜ್ಞಾತಕರ್ತೃ, ಮರಿಯಪ್ಪಭಟ್ಟ, ಎಂ. (ಸಂ.), ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಸೀರೀಸ್, ಸಂ. 30, ಮದ್ರಾಸ್, 1950.

ಗೋವಿಂದ, ಸಂಗ್ರಹಚೂಡಾಮಣಿ—ಸುಬ್ರಹ್ಮಣ್ಯಶಾಸ್ತ್ರಿ, ಎಸ್. (ಸಂ), ಆಡ್ಯಾರ್ ಲೈಬ್ರರಿ, ಮದ್ರಾಸ್, 1938.

ಸಂಗೀತಸುಧಾ—ಗೋವಿಂದದೀಕ್ಷಿತ, ಮದ್ರಾಸ್ ಮ್ಯೂಸಿಕ್ ಅಕಾಡಮಿ, ಸೀರೀಸ್, ಸಂ. 1, ಮದ್ರಾಸ್, 1940.

ಕಂಠೀರವ ನರಸರಾಜವಿಜಯಂ—ಗೋವಿಂದ ವೈದ್ಯ, ಶಾಮಾ ಶಾಸ್ತ್ರೀ ಆರ್. (ಸಂ), ಮೈಸೂರು ಓರಿಯಂಟಲ್ ಲೈಬ್ರರಿ, ಕನ್ನಡ ಸೀರೀಸ್, ಸಂ. 15, ಮೈಸೂರು, 1926.

ಗೀತಗೋವಿಂದ—ಜಯದೇವ, ಸೀತಾರಾಂ, ಸಿ. ಬಿ. (ಸಂ)., ತ. ಸು. ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, 1961.

ಅಪ್ರತಿಮ ವೀರಚರಿತೆ—ತಿರುಮಲಾರ್ಯ, (ಸಂ.) ನರಸಿಂಹಾಚಾರ್, ಎಸ್. ಜಿ. ಮತ್ತು ರಾಮಾನುಜ ಅಯ್ಯಂಗಾರ್, ಮ. ಆ., ಕರ್ಣಾಟಕ ಕಾವ್ಯ ಮಂಜರೀ, ಮೈಸೂರು, 1893.

ಗೀತಗೋಪಾಲ—ತಿರುಮಲಾರ್ಯ, (ಸಂ) ನರಸಿಂಹಾಚಾರ್, ಎಸ್. ಜಿ. ಮತ್ತು ರಾಮಾನುಜ ಅಯ್ಯಂಗಾರ್, ಮ. ಆ. (ಸಂ), ಕರ್ಣಾಟಕ ಕಾವ್ಯಕಲಾ ನಿಧಿ, ಸಂ. 17, ಮೈಸೂರು, 1905.

ಚಿಕದೇವರಾಯ ಸಪ್ತಪದಿ—ತಿರುಮಲಾರ್ಯ, (ಸಂ)., ಹರಿಶಂಕರ್, ಎಚ್. ಎಸ್. ಪ್ರಸ್ತುತ ಮುದ್ರಣ.

ಚಿಕದೇವರಾಜ ವಿಜಯ—ತಿರುಮಲಾರ್ಯ,

Dr. Urmila Sharma Collection, Varanasi

CC0. In Public Domain, Digitizagtion by eGangotri

ಸಂಗೀತಸಾರ ಸಂಗ್ರಹಮು—ತಿರುವೆಂಕಟಕವಿ, ಮದ್ರಾಸ್ ಮ್ಯೂಸಿಕ್ ಅಕಾಡಮಿ, ಸೀರೀಸ್, ಸಂ. 5, ಮದ್ರಾಸ್, 1940.

ಸಂಗೀತಸಾರಾಮೃತ—ತುಳಜೇಂದ್ರ, ಸುಬ್ರಹ್ಮಣ್ಯಶಾಸ್ತ್ರಿ, ಎಸ್. (ಸಂ), ಮದ್ರಾಸ್ ಮ್ಯೂಸಿಕ್ ಅಕಾಡಮಿ ಸೀರೀಸ್, ಸಂ. 5, ಮದ್ರಾಸ್, 1942.

ದಶರೂಪಕ—ಧನಂಜಯ, ಸುಬ್ಬಣ್ಣ, ಕೆ. ವಿ. (ಸಂ)., ಅಕ್ಷರ ಪ್ರಕಾಶನ, ಸಾಗರ-ಶಿವಮೊಗ್ಗ, 1958.

ಕರ್ಣಾಟಕ ಕವಿಚರಿತ್ರೆ—ನರಸಿಂಹಾಚಾರ್ ಆರ್. ಮತ್ತು ನರಸಿಂಹಾಚಾರ್, ಎಸ್. ಜಿ., ಮೈಸೂರು, 1907.

ವಿವೇಕಚಿಂತಾಮಣಿ—ನಿಜಗುಣಶಿವಯೋಗಿ, ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ, (ಸಂ), ಬೆಂಗಳೂರು, 1863.

ಸಂಗೀತಸಮಯಸಾರ—ಪಾರ್ಶ್ವದೇವ, ಗಣಪತಿಶಾಸ್ತ್ರಿ, ಟಿ. (ಸಂ.) ತಿರುವಂದರಂ ಸಂಸ್ಕೃತ ಸೀರೀಸ್, ಸಂ. 87, ತಿರುವಂದರಂ, 1925.

ಶಿವತತ್ತ್ವರತ್ನಾಕರ—ಬಸವಪ್ಪನಾಯಕ, ಕೆಳದಿ, (ಸಂ.), ರಾಮರಾವ್, ಬಿ, ಮತ್ತು ಸುಂದರಶಾಸ್ತ್ರಿ ಪಿ. ಮದ್ರಾಸ್, 1927.

ನಾಟ್ಯಶಾಸ್ತ್ರ—ಭರತಮುನಿ, ಭಾಗ IV, (ಸಂ), ರಾಮಕೃಷ್ಣಕವಿ, ಎಂ. ಮತ್ತು ಪದೆ, ಜೆ. ಎಸ್. ಗಾಯಕವಾಡ್ ಓರಿಯಂಟಲ್ ಸೀರೀಸ್, ಸಂ. 145, ಬರೋಡ, 1964.

ಸರಸ್ವತೀ ಕಂಠಾಭರಣ—ಭೋಜ, ನಿರ್ಣಯಸಾಗರ ಮುದ್ರಣಾಲಯ, ಬೊಂಬಾಯಿ, 1934.

ರಾಗಲಕ್ಷಣ—ಮುದ್ದುವೆಂಕಟಮಖಿ, ವೆಂಕಟಮಖಿಯ ಚತುರ್ದಂಡೀ ಪ್ರಕಾಶಿಕೆಗೆ ಅನುಬಂಧ (ಕೆಳಗೆ ನೋಡಿ).

ರಾಗಲಕ್ಷಣ—ಮದ್ರಾಸ್, ಮ್ಯೂಸಿಕ್ ಅಕಾಡಮಿ ಮದ್ರಾಸ್, 1952.

ವಾಸುದೇವ ಕೀರ್ತನಮಂಜರಿ—ಪ್ರಥಮ ಸಂಪುಟ, ಮೈಸೂರು, ವಾಸುದೇವಾಚಾರ್ಯ ಕೆ. ಮೈಸೂರು, ದ್ವಿತೀಯ ಸಂಪುಟ ಮದ್ರಾಸ್, 1956.

Dr. Urmila Sharma Collection, Varanasi

CC0. In Public Domain, Digitizagtion by eGangotri

ಪ್ರತಾಪರುದ್ರ ಯಶೋಭೂಷಣಂ—ವಿದ್ಯಾನಾಥ, ಬಾಂಬೆ ಸಂಸ್ಕೃತ ಸೀರೀಸ್, ಸಂ. 65, ಬೊಂಬಾಯಿ, 1909.

ಚತುರ್ದಂಡೀಪ್ರಕಾಶಿಕಾ—ವೆಂಕಟಮಖಿ, ಮದ್ರಾಸ್ ಮ್ಯೂಸಿಕ್ ಅಕಾಡಮಿ ಸೀರೀಸ್, ಸಂ. 3, ಮದ್ರಾಸ್, 1934.

ಸಂಗೀತರತ್ನಾಕರ ಸಂಪುಟ 2—ಶಾರ್ಙ್ಗದೇವ, ಸುಬ್ರಹ್ಮಣ್ಯಶಾಸ್ತ್ರೀ, ಎಸ್. (ಸಂ.), ಅಡ್ಯಾರ್ ಲೈಬ್ರರಿ ಮತ್ತು ರಿಸರ್ಚ್ ಸೆಂಟರ್, ಸಂ. 43, ಮದ್ರಾಸ್, 1959.

ಗಾನಭಾಸ್ಕರ—ಶ್ರೀನಿವಾಸ ಅಯ್ಯಂಗಾರ್, ಕೆ. ವಿ, ಆದಿ ಮತ್ತು ಕಂಪೆನಿ, ಮದ್ರಾಸ್.

ತ್ಯಾಗರಾಜಹೃದಯಂ (ಮೂರು ಸಂಪುಟಗಳು)—ಶ್ರೀನಿವಾಸ ಅಯ್ಯಂಗಾರ್, ಕೆ. ವಿ. (ಸಂ.), ಆದಿ ಮತ್ತು ಕಂಪೆನಿ, ಮದ್ರಾಸ್, 1922.

ಮುಮ್ಮಡಿ ಚಿಕ್ಕಭೂಪಾಲನ ಅಭಿನವಭರತ ಸಾರಸಂಗ್ರಹ—ಸತ್ಯನಾರಾಯಣ, ರಾ. (ಮೈಸೂರು ಸಹೋದರರು) (ಸಂ.), ಶ್ರೀ ವರಲಕ್ಷ್ಮೀ ಅಕಾಡಮಿ ಗ್ರಂಥಮಾಲೆ, ಸಂ. 4, ಮೈಸೂರು, 1960.

ಭರತನಾಟ್ಯ—ಸತ್ಯನಾರಾಯಣ, ರಾ. (ಮೈಸೂರು ಸಹೋದರರು), (ಇಂಗ್ಲಿಷ್ ಅಚ್ಚಿನಲ್ಲಿ) ಶ್ರೀ ವರಲಕ್ಷ್ಮೀ ಅಕಾಡಮಿ ಗ್ರಂಥಮಾಲೆ, ಮೈಸೂರು.

ದಿ ಸೌಲ್ ಆಫ್ ಇಂಡಿಯನ್ ಡಾನ್ಸ್—(ಇಂಗ್ಲಿಷ್, ಅಚ್ಚಿನಲ್ಲಿ) ಸತ್ಯನಾರಾಯಣ, ರಾ. (ಮೈಸೂರು ಸಹೋದರರು), ಶ್ರೀ ವರಲಕ್ಷ್ಮೀ ಅಕಾಡಮಿ ಗ್ರಂಥಮಾಲೆ, ಮೈಸೂರು.

ಸುಳಾದೀಸ್ ಅಂಡ್ ಉಗಾಭೋಗಾಸ್ ಆಫ್ ಕರ್ಣಾಟಕ ಮ್ಯೂಸಿಕ್—(ಇಂಗ್ಲಿಷ್) ಸತ್ಯನಾರಾಯಣ, ರಾ. (ಮೈಸೂರು ಸಹೋದರರು), ಮುನ್ನುಡಿ, ಕೃಷ್ಣಲೀಲಾ, ಹುಚ್ಚರಾಯ ಬೆಂಗೇರಿ ಮತ್ತು ಬೆಟಗೇರಿ ಕೃಷ್ಣಶರ್ಮ (ಸಂ.), ಸಂ. 4, ಅಖಿಲಕರ್ಣಾಟಕ ಪುರಂದರದಾಸ ಚತುಃಶತಮಾನೋತ್ಸವ ಸಮಿತಿ, ಧಾರವಾಡ, 1965.

Dr. Urmila Sharma Collection, Varanasi

CC0. In Public Domain, Digitizagtion by eGangotri

ದಿ ಡ್ಯಾನ್ಸ್ ಟ್ರೆಡಿಷನ್ಸ್ ಆಫ್ ಏನ್ಷಂಟ್ ಕರ್ಣಾಟಕ—(ಇಂಗ್ಲಿಷ್) ಸತ್ಯನಾರಾಯಣ, ರಾ. (ಮೈಸೂರು ಸಹೋದರರು) ಹನ್ನೆರಡನೆಯ ದಕ್ಷಿಣ ಭಾರತೀಯ ನಾಟ್ಯಕಲಾಸಮ್ಮೇಳನದ ಸ್ಮಾರಕ ಸಂಚಿಕೆ, ಮದ್ರಾಸ್, 1958.

ಸಂಗೀತ ಸಂಪ್ರದಾಯಪ್ರದರ್ಶಿನೀ—(ಮೂರು ಸಂಪುಟಗಳು), ಸುಬ್ಬರಾಯದೀಕ್ಷಿತ (ಸಂ.), ಎಟ್ಟಯಾಪುರಂ, 1904.

ಹಸ್ತಪ್ರತಿಗಳು

ಆಯುತಸುಳಾದಿಗಳು—K 570, ಪ್ರಾಚ್ಯಸಂಶೋಧನಾ ಸಂಸ್ಥೆಯ ಪುಸ್ತಕಭಂಡಾರ, ಮೈಸೂರು.

ಬೆಂಗೇರಿ ಹಸ್ತಪ್ರತಿ—ಶ್ರೀ ವರಲಕ್ಷ್ಮೀ ಅಕಾಡಮಿಯ ಗ್ರಂಥಭಂಡಾರ, ಮೈಸೂರು.

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

Dr. Urmila Sharma Collection, Varanasi

CC0. In Public Domain, Digitizagtion by eGangotri

ಕೆಲವು ಅಪೂರ್ವ ಗ್ರಂಥಗಳು

(ಕೇವಲ ಕೆಲವು ಪ್ರತಿಗಳು ಮಾತ್ರ ಉಳಿದಿವೆ)

		ರೂ.ಪೈ.
1.	ಅಭಿವಂದನೆ—(ಡಾ. ಎ. ಆರ್. ಕೃಷ್ಣಶಾಸ್ತ್ರಿಗಳ ಸಂಭಾವನೆಯ ಗ್ರಂಥ)	12-50
2.	ಉಪಾಯನ—(ಪ್ರೊ. ಡಿ.ಎಲ್. ನರಸಿಂಹಾಚಾರ್ಯರ ಸಂಭಾವನೆಯ ಗ್ರಂಥ)	25-00
3.	ಸಮಾಲೋಕನ (ವಿದ್ವತ್ ಪ್ರಬಂಧಗಳು)—ಪ್ರೊ. ತೀ. ನಂ. ಶ್ರೀಕಂಠಯ್ಯ	4-50

ನಮ್ಮ ಹೊಸ ಪ್ರಕಟಣೆಗಳು

1.	ರವೀಂದ್ರನಾಥ ಠಾಕೂರ್—ಡಾ. ಹಾ. ಮಾ. ನಾಯಕ	3-75
2.	ಹರಿದಾಸ ಹೃದಯ—ಡಾ. ಜಿ. ವರದರಾಜರಾವ್	4-00
3.	ಧೇನುಕ ಪುರಾಣ (ಪ್ರಬಂಧಗಳು)—ಪು. ತಿ. ನರಸಿಂಹಾಚಾರ್	3-00
4.	ವೈಯ್ಯಾರಿ (ಸಣ್ಣ ಕಥೆಗಳು)—ಗೊರೂರು ರಾಮಸ್ವಾಮಿ ಐಯಂಗಾರ್	6-00
5.	ದೂರದ ಕಾಶಿಯಲ್ಲಿ (ಸಣ್ಣ ಕಥೆಗಳು)—ಅಶ್ವತ್ಥ	4-50
6.	ಚಿಟ್ಟೆಯಾಗಿ ಹಾರಿತು (ಸಣ್ಣ ಕಥೆಗಳು)—ಎಂ. ಸಿ. ಪದ್ಮ	3-00
7.	ಕುಮುದ (ಸಣ್ಣ ಕಥೆಗಳು)—ಶೇಷನಾರಾಯಣ	3-00
8.	ಶಬರಿ (ಗೀತನಾಟಕ)—ಪು. ತಿ. ನರಸಿಂಹಾಚಾರ್	1-00
9.	ಚಿಕದೇವರಾಜ ಸಪ್ತಪದಿ—(ಸಂ) ಎಚ್. ಎಸ್. ಹರಿಶಂಕರ್	3-75
10.	ಬಿರುಗಾಳಿ (ಮಕ್ಕಳಿಗೆ)—ವಿ. ವೆಂಕಟರಾಮಯ್ಯ	0-75
11.	ಒಥೆಲೊ (ಮಕ್ಕಳಿಗೆ)—ಎಸ್. ಎನ್. ಶಂಕರ್	0-75
12.	ಮೀನುಗಾರ ಬಾಲಿಘ್ (ಮಕ್ಕಳಿಗೆ)—ಎಚ್. ಎಸ್. ಹರಿಶಂಕರ್	1-00
13.	ಗಣೇಶನ ಮದುವೆ (ಮಕ್ಕಳಿಗೆ)—ಕೆ. ವೆಂಕಟರಾಮಪ್ಪ	0-75
14.	ಗೋವಿನಹಾಡು (ಮಕ್ಕಳಿಗೆ)—ಡಿ. ಎಲ್. ನರಸಿಂಹಾಚಾರ್	0-60

ಶ್ರೀ.ಯವರ 'ಇಂಗ್ಲಿಷ್ ಗೀತೆಗಳು' (2-75), ಗೊರೂರು ರಾಮಸ್ವಾಮಿ ಐಯಂಗಾರರ 'ಶ್ರೀ ಜಗದ್ಗುರು ದಿವ್ಯಬೋಧೆ' (5-00), ಊರ್ವಶಿ (3-00), ಭಗವಾನ್ ಕೌಟಿಲ್ಯ (3-00), ಕ್ರೌಂಚವಧೆ (3-00), ಕಮ್ಮಾರ ವೀರಭದ್ರಾಚಾರಿ (3-00), ಉಸುಬು (2-25), ಗರುಡಗಂಭದ ದಾಸಯ್ಯ (2-50) ಈ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ.

ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು—೪

Dr. Urmila Sharma Collection, Varanasi